ಸಂಪುಟ : 13 Volume | ಸಂಚಿಕೆ : 188 Issue | ಪುಟಗಳು : 08 Pages | ಭಾನುವಾರ 07 ಸಪ್ಟೆಂಬರ್ 2025 | ₹2
RNINO:KARKAN/2011/48371 | BDR/054/2026-20274 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ
ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**
'ಸ್ನೇಹ, ಸೌಜನ್ಯದಿಂದ ಮನುಷ್ಯನನ್ನು ಗೆಲ್ಲಬಹುದೇ ಹೊರತು ಬರಿಯ ಶಕ್ತಿಯಿಂದಲ್ಲ
– ಅರಿಸ್ಟಾಟಲ್.

ಸೆ.8 ರಂದು ಶಿಕ್ಷಕರ ದಿನಾಚರಣೆ 2 | ಸೆ.16ನಾರಾಯಣ ಗುರು ಜಯಂತಿ 4 | ಸೆ.8 ರಂದು ಶಿಕ್ಷಕರ ದಿನಾಚರಣೆ 8

# 2,736 ನೌಕರರ ನೇಮಕಾತಿಗೆ ಪ್ರಸ್ತಾವನೆ

## 5 ಕೋ. ವೆಚ್ಚದ ಆಳಂದ ನೂತನ ಬಸ್ ನಿಲ್ದಾಣ ಕಾಮಗಾರಿಗೆ ಶಂಕುಸ್ಥಾಪನೆ



ಕಲಬುರಗಿ,ಸೆ.6: ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ನಮ್ಮ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದ್ದು, ಪ್ರಸ್ತುತ 2,736 ಅಧಿಕಾರಿ–ನೌಕರರ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲು ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ರಾಜ್ಯದ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಶನಿವಾರ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಿಂದ ಆಳಂದ ಪಟ್ಟಣದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಬಸ್ ನಿಲ್ದಾಣದ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ ನಂತರ ಪಟ್ಟಣದ ವೀರಶೈವ ಲಿಂಗಾಯತ ಭವನದಲ್ಲಿ ಆಯೋಜಿಸಿದ ಸಾರ್ವಜನಿಕ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ಸಂಸ್ಥೆಗೆ ಚಾಲಕರು, ನಿರ್ವಾಹಕರೆ ಆಧಾರ ಸ್ಥಂಭ. ಅವರಿಲ್ಲದೆ ಬಸ್ ಕಾರ್ಯಚರಣೆ ಅಸಾಧ್ಯ. 2016 ರಿಂದ 2023ರ ವರೆಗೆ ನೇಮಕಾತಿ ಮಾಡದ ಕಾರಣ ಮಾನವ ಸಂಪನ್ಮೂಲ ಸಮಸ್ಯೆಯಾಗಿತ್ತು. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಂಸ್ಥೆಯಲ್ಲಿ 1,000 ಅನುಕಂಪ ಸೇರಿ ಇದೂವರೆಗೆ 10 ಸಾವಿರ ನೌಕರರ ನೇಮಕಾತಿ ಮಾಡಿದ್ದೇವೆ ಎಂದರು.

ರಾಜ್ಯದ 4 ಸಾರಿಗೆ ಸಂಸ್ಥೆಗಳ ಪೈಕಿ ಉತ್ತಮ ಹಣಕಾಸಿನ ಪರಿಸ್ಥಿತಿ ಹೊಂದಿರುವುದು ಇಲ್ಲಿನ ಕೆ.ಕೆ.ಅರ್.ಟಿ.ಸಿ. ಮಾತ್ರ. ಅಳಂದ ಬಸ್ ನಿಲ್ದಾಣ ನಿರ್ಮಾಣಕ್ಕೆ 5 ಕೋಟಿ ರೂ. ಸಾಕಾಗುವುದಿಲ್ಲ. ಒಮ್ಮೆ ಕೆಲಸ ಆರಂಭವಾದ ನಂತರ ಹೆಚ್ಚಿನ ಅನುದಾನ ಸಹ ನೀಡಲಾಗುವುದು. ಕಳೆದ ಎರಡು ವರ್ಷದ ಅವಧಿಯಲ್ಲಿ ಈ ಸಂಸ್ಥೆಗೆ 1,031 ಬಸ್ ಒದಗಿಸಿದ್ದೇವೆ. ಪ್ರಸಕ್ತ ವರ್ಷ ಕೆ.ಎಸ್.

ಆರ್.ಟಿ.ಸಿ.ಗೆ 900, ವಾಯುವ್ಯ ಸಾರಿಗೆಗೆ 700, ಕಲ್ಯಾಣ ಕರ್ನಾಟಕ ಸಾರಿಗೆಗೆ 400 ಬಸ್ ನೀಡಿದ್ದೇವೆ. ಜನಸಂಖ್ಯೆ ಹೆಚ್ಚಳ, ಪ್ರಯಾಣಿಕರ ಓಡಾಟ ಹೆಚ್ಚಿದ್ದರಿಂದ ಇಲ್ಲಿನ ಸಂಸ್ಥೆಗೆ ಹೆಚ್ಚಿನ ಬಸ್ ಖರೀದಿಸಲು ಕೆ.ಕೆ. ಆರ್.ಡಿ.ಬಿ. ಮಂಡಳಿಗೆ ಅರ್ಥಿಕ ನೆರವು ಕೋರಲಾಗುವುದು ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಸಾರಿಗೆ ನೌಕರರ ಭದ್ರತೆಗೆ ನಮ್ಮ ಸರ್ಕಾರ ಬದ್ದವಾಗಿದೆ. ಕೆಲಸದಲ್ಲಿ ಇರುವಾಗ ಅಥವಾ ಇರದೆ ಇದ್ದಾಗ ಸಹ ನೌಕರರು ಮೃತರಾದಲ್ಲಿ ಕೆ.ಎಸ್.ಆರ್.ಟಿ.ಸಿ. ಯಲ್ಲಿ 1.50 ಕೋಟಿ ಮತ್ತು ಉಳಿದ ಸಂಸ್ಥೆಗಳಲ್ಲಿ 1 ಕೋಟಿ ರೂ. ವಿಮೆ ಮಾಡಿಸಲಾಗಿದೆ. ಗ್ರ್ಯಾಜುಟಿ ಮೊತ್ತ 10 ಲಕ್ಷಕ್ಕೆ ಏರಿಸಲಾಗಿದೆ. ಬಸ್ ಅಪಘಾತದಲ್ಲಿ ಪ್ರಯಾಣಿಕರರು ಮೃತರಾದಲ್ಲಿ ಅವರ ಅವಲಂಭಿತರಿಗೆ ಅಪಘಾತ ವಿಮೆ ಪರಿಹಾರ ಯೋಜನೆಯಡಿ 10 ಲಕ್ಷ ರೂ. ಪರಿಹಾರ ಒದಗಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ಶಕ್ತಿಯೋಜನೆಯ ಪರಿಣಾಮ ಇದುವರೆಗೆ ದಿನಕ್ಕೆ 65 ಲಕ್ಷ ಸರಾಸರಿಯಂತೆ 517 ಕೋಟಿಗೂ ಅಧಿಕ ಬಾರಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದು, ಇದಕ್ಕಾಗಿ ಸರ್ಕಾರ 13 ಸಾವಿರ ಕೋಟಿ ಭರಿಸಿದೆ. ಶಾಸಕ ಬಿ.ಆರ್.ಪಾಟೀಲ ಅವರು ಪ್ರಸ್ತಾಪಿಸಿದಂತೆ ಶಕ್ತಿಯೋಜನೆ ಆರಂಭಿಸುವಾಗ ಎ.ಸಿ., ಅಂತರ ರಾಜ್ಯ ಬಸ್ ಗಳಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಒದಗಿಸಿಲ್ಲ. ಮುಂದೆ ಈ ಕುರಿತು ಸಿ.ಎಂ. ಅವರ ಗಮನಕ್ಕೆ ತರಲಾಗುವುದು ಎಂದರುವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ ಮಾತನಾಡಿ, ಆಳಂದ ಬಸ್ ನಿಲ್ದಾಣ ಸುಸಜ್ಜಿತವಾಗಿ ನಿರ್ಮಾಣವಾಗಬೇಕು. ಇದೀಗ 5 ಕೋಟಿ ರೂ. ಅನುದಾನ ನೀಡಲಿದೆ. ಇನ್ನು ಅನುದಾನ ಹೆಚ್ಚು ಬೇಕಾದರೆ ಕೆ.ಕೆ.ಆರ್.ಡಿ.ಬಿ. ಅನುದಾನ ನೀಡಲಾಗುವುದು. ಕಾಮಗಾರಿ ಗುಣಮಟ್ಟದಾಗಿರಬೇಕೆಂದು ಎಂ.ಡಿ. ಅವರಿಗೆ ನಿರ್ದೇಶನ ನೀಡಿದ ಅವರು ಅನುಭವಿ ಶಾಸಕರಾಗಿರುವ ಬಿ.ಆರ್.ಪಾಟೀಲ ಅವರಿಗೆ ಮಂತ್ರಿ ಸ್ಥಾನ ಶೀಘ್ರ ದೊರೆಯಲಿ ಎಂದ ಶುಭ ಹಾರೈಸಿದರು.

ಇದಕ್ಕೂ ಮುನ್ನ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಸ್ಥೆ ಮತ್ತು ಆಳಂದ ಘಟಕದ ಸಂಕ್ಷಿಪ್ತ ಮಾಹಿತಿ ನೀಡಿದ ಅವರು, 1.22 ಎಕರೆ ಪ್ರದೇಶದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸಲಾಗುತ್ತಿದ್ದು, ಮುಂದಿನ ದಿನದಲ್ಲಿ ತಾಲೂಕಿನ ಸಾರಿಗೆ ಸಂಪರ್ಕ ಉತ್ತಮಗೊಳ್ಳಲಿದೆ ಎಂದರು.

### • 36 ಜನರಿಗೆ ನೇಮಕಾತಿ ಆದೇಶ

ಕೆ.ಕೆ.ಆರ್.ಟಿ.ಸಿ. ಸಂಸ್ಥೆಯ ಬಳ್ಳಾರಿ, ರಾಯಚೂರು, ಬೀದರ ಜಿಲ್ಲೆಯಲ್ಲಿ ನಿಧನ ಹೊಂದಿದ 36 ನೌಕರರ ಅವಲಂಭಿತರಿಗೆ ಅನುಕಂಪದ ಅಧಾರದ ಮೇಲೆ ನೇಮಕಾತಿ ಪತ್ರವನ್ನು ಡಚಿವ ರಾಮಲಿಂಗಾರೆಡ್ಡಿ ವಿತರಿಸಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ಬಸ್ ನಲ್ಲಿ ಪ್ರಯಟಣ ಮಾಡುವಾಗ ದುರ್ಘಟನೆಯಲ್ಲಿ ಮೃತರಾದ ಇಬ್ಬರು ಪ್ರಯಾಣಿಕರ ಅವಲಂಭಿತರಿಗೆ ತಲಾ 10 ಲಕ್ಷ ರೂ. ಗಳಂತೆ ಅಪಘಾತ ಪರಿಹಾರ ನಿಧಿಯಡಿ ಪರಿಹಾರದ ಚೆಕ್ ಸಚಿವರು, ಶಾಸಕರು ವಿತರಿಸಿದರು.

### • 20 ಬಸ್ ಕೊಡ್ರಿ: ಬಿ.ಆರ್. ಪಾಟೀಲ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಮಾತನಾಡಿ ಆಳಂದ ತಾಲೂಕು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವುದರಿಂದ ಇಲ್ಲಿಂದ ನೆರೆ ರಾಜ್ಯಕ್ಕೆ ಪ್ರಯಾಣಿಕರ ಓಡಾಟ ಹೆಚ್ಚಿದೆ. ಹೀಗಾಗಿ ಆಳಂದ ಘಟಕಕ್ಕೆ ಹೆಚ್ಚುವರಿಯಾಗಿ 20 ಬಸ್ ನೀಡಬೇಕು ಮತ್ತು ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಗಡಿ ಭಾಗದ ವರೆಗೂ ಎಲ್ಲಾ ಬಸ್ ನಲ್ಲಿಯೂ ಪ್ರಯಾಣಕ್ಕೆ ಅವಕಾಶ ಕಲ್ಪಿಸಬೇಕೆಂದು ಸಚಿವ ರಾಮಲಿಂಗಾರೆಡ್ಡಿ ಅವರಲ್ಲಿ ಮನವಿ ಮಾಡಿಕೊಂಡರು.

## ಯುಕೆಪಿ ಅಧಿಕಾರಿ ವಿರುದ್ಧ ಡಿಸಿಎಂ ಗರಂ!

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಸೆ.6–ಜನರನ್ನು ಬಿಸಿಲಿನಲ್ಲಿ ನಿಲ್ಲಿಸಿದ್ರೆ ಹೇಗೆ, ಗೊತ್ತಾಗೋದಿಲ್ಲವಾ ನಿಮಗೆ ಎಂದು ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಯುಕೆಪಿ ಅಧಿಕಾರಿಗೆ ಗದರಿದ ಘಟನೆ ನಡೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಶನಿವಾರ ಆಲಮಟ್ಟಿಗೆ ಕೃಷ್ಣೆಯ ಜಲಧಿಗೆ ಬಾಗಿನ ಅರ್ಪಿಸಲು ಆಗಮಿಸಿದ್ದ ಸಂದರ್ಭದಲ್ಲಿ ಜನರು ಕುಳಿತುಕೊಳ್ಳಲು ಪೆಂಡಾಲ ಹಾಕದಿರುವುದನ್ನು ಗಮನಿಸಿದ ಡಿ.ಕೆ.ಶಿವಕುಮಾರ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು.



ಇಂತಹ ಕಾರ್ಯಕ್ರಮ ಇರುವಾಗ ಸಿಎಂ, ಸಚಿವರು, ಜನರು ಎಲ್ಲರಿಗೂ ನೆರಳಿನ ವ್ಯವಸ್ಥೆ ಮಾಡಬೇಕು. ಗೊತ್ತಾಗೋದಿಲ್ಲವೇ ನಿಮಗೆ ಎಂದು ಗದರಿದ ಡಿಕೆಸಿ, ನೀವು ಇಂತಹದ್ದೆಲ್ಲವನ್ನೂ ತಿಳಿದುಕೊಳ್ಳಬೇಕು. ನೀವು ಕೆಲಸ ಕಲಿಯೋದು ಹೇಗೆ ಎಂದು ಪ್ರಶ್ನಿಸಿ, 10 ಅಡಿ ಮುಂದಕ್ಕೆ ಪೆಂಡಾಲ ಹಾಕಿದರೆ ಎಲ್ಲರಿಗೂ ನೆರಳಾಗುತ್ತೆ ಅಲ್ಲವಾ ಎಂದರು.

## ಶಾಲಾ ಬಸ್ ಹರಿದು ಬಾಲಕಿ ಸಾವು

ಬೀದರ. ಸೆ. 06 : ಮೈ ಮೇಲೆ ಶಾಲಾ ಬಸ್ ಹರಿದುಬಾಲಕಿಯೊಬ್ಬಳು ಮೃತಪಟ್ಟ ಘಟನೆ ಔರಾದ್ ತಾಲೂಕಿನ ಏಕಂಬಾಗ್ರಾಮದಲ್ಲಿ ಸಂಭವಿಸಿದೆ.ಕಾವೇರಿ ಮೃತಪಟ್ಟ ಬಾಲಕಿ.



ಯುಕೆಜಿಯಲ್ಲಿ ಕಲಿಯುತ್ತಿದ್ದಕಾವೇರಿ ಪ್ರತಿದಿನ ಶಾಲಾ ಬಸ್ಸಿನಲ್ಲಿ ತೆರಳುತ್ತಿದ್ದರು. ಸೆ.4ರ ಮುಂಜಾನೆ 9 ಗಂಟೆ ವೇಳೆಗೆ ಶಾಲಾ ಬಸ್ಸಿನಲ್ಲಿ ಶಾಲೆಗೆ ಹೋಗಿದ್ದ ಬಾಲಕಿ ಶಾಲಾ ಆವರಣದಲ್ಲಿ ಬಸ್‌ನಿಂದ ಇಳಿಯುವಾಗ ಬಸ್ಸಿನಿಂದ ಕೆಳಗೆ ಬಿದ್ದಾಗ ಬಸ್ ಹರಿದು ಮೃತಪಟ್ಟಿದ್ದಾಳೆ.

## 1.35 ಲಕ್ಷ ರೂ.ಮೌಲ್ಯದ ಕಳ್ಳತನ

ಕಲಬುರಗಿ,ಸೆ.6–ಮನೆ ಬೀಗ ಮುರಿದು 1.35 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿರುವ ಘಟನೆ ಮೇಳಕುಂದಾ (ಬಿ) ಗ್ರಾಮದಲ್ಲಿ ನಡೆದಿದೆ.

ಅಂಬಣ್ಣ ತಳವಾರ ಎಂಬುವವರ ಮನೆ ಬೀಗ ಮುರಿದು ಕಳ್ಳರು 15 ಗ್ರಾಂ.ಬಂಗಾರದ 3 ಉಂಗುರ, 30 ಸಾವಿರ ನಗದು ಸೇರಿ 1.35 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿದ್ದಾರೆ.

ಈ ಸಂಬಂಧ ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

## ರೋಪ್‌ವೇ ದುರಂತ; 6 ಸಾವು

ಅಹ್ಮದಾಬಾದ್:ಸೆ.6: ಗುಜರಾತ್‌ನ ಪಂಚಮಹಲ್ ಜಿಲ್ಲೆಯಪ್ರಸಿದ್ಧ ಪಾವಗಡ ಬೆಟ್ಟದ ದೇವಾಲಯದಲ್ಲಿ ಶನಿವಾರ ಸರಕು ಸಾಗಣೆರೋಪ್‌ವೇಯ ಕೇಬಲ್ ವೈರ್ ತುಂಡಾಗಿ ಆರು ಜನರು ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರುತಿಳಿಸಿದ್ದಾರೆ.ಪೊಲೀಸ್ ವರಿಷ್ಠಾಧಿಕಾರಿ ಹರೇಶ್ ದುಧಾತ್ ಮಾತನಾಡಿದ್ದು, 6 ಮಂದಿ ಸಾವನ್ನಪ್ಪಿರುವುದನ್ನು ದೃಢಪಡಿಸಿದ್ದಾರೆ ಮತ್ತು ಪೊಲೀಸ್ ಮತ್ತು ಅಗ್ನಿಶಾಮಕ ದಳದ ತಂಡಗಳು ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಾಗಿಸ್ಥಳದಲ್ಲಿವೆ ಎಂದುಹೇಳಿದ್ದಾರೆ.ದೇವಾಲಯ ಸುಮಾರು 800 ಮೀಟರ್ ಎತ್ತರದಲ್ಲಿದೆ, ಯಾತ್ರಿಕರು ಶಿಖರವನ್ನು ತಲುಪಲು ಸುಮಾರು 2000 ಮೆಟ್ಟಿಲುಗಳನ್ನು ಹತ್ತಲು ಅಥವಾ ಕೇಬಲ್ ಕಾರುಗಳನ್ನು ಬಳಸಲು ಆಯ್ಕೆ ಮಾಡಿಕೊಳ್ಳುತ್ತಾರೆ.ಆದಾಗ್ಯೂ, ಪ್ರತಿಕೂಲ ಹವಾಮಾನದಿಂದಾಗಿ ಸಾರ್ವಜನಿಕರ ಬಳಕೆಗೆ ರೋಪ್‌ವೇ ನ್ನು ಬೆಳಿಗ್ಗೆಯಿಂದ ಮುಚ್ಚಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಭಾರತ-ಅಮೇರಿಕಾ ಸಂಬಂಧ ಸುಧಾರಣೆಗೆ ಧನಾತ್ಮಕ ನಡೆ:ಪ್ರಧಾನಿ


ನವದೆಹಲಿ,ಸೆ.6:ಭಾರತ–ಅಮೆರಿಕ ಸಂಬಂಧ ಸುಧಾರಣೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್‌ಟ್ರಂಪ್ ನಡೆ ಶ್ಲಾಘನೀಯ ಎಂದು ಪ್ರಧಾನಿ ನರೇಂದ್ರಮೋದಿ ಹೇಳಿದ್ದಾರೆ. ಭಾರತ ಹಾಗೂ ಅಮೆರಿಕ ನಡುವೆ ವಿಶೇಷ ಬಾಂಧವ್ಯವಿದೆ. ನನಗೂ ಮೋದಿಗೂ ಉತ್ತಮ ಸ್ನೇಹ ಸಂಬಂಧವಿದೆ. ಸ್ವಲ್ಪ ಕಾಯಿರಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್‌ಟ್ರಂಪ್ ಹೇಳಿಕೆ ಬೆನ್ನಲ್ಲೇ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಪ್ರಧಾನಿ ನರೇಂದ್ರಮೋದಿ ಅವರು, ಭಾರತ–ಅಮೆರಿಕ ಸಂಬಂಧ ಸುಧಾರಣೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್‌ಟ್ರಂಪ್ ಅವರ ಧನಾತ್ಮಕ ನಡೆಯನ್ನು ಹೃತ್ಪೂರ್ವಕವಾಗಿ ಶ್ಲಾಘಿಸುತ್ತೇನೆ ಎಂದಿದ್ದಾರೆ.ಡೊನಾಲ್ಡ್‌ಟ್ರಂಪ್ ಅವರ ಭಾವನೆಗಳನ್ನು ಮತ್ತು ನಮ್ಮ ಸಂಬಂಧಗಳ ಬಗ್ಗೆ ಅವರು ಸಕರಾತ್ಮಕ ಮೌಲ್ಯಮಾಪನ ಮಾಡಿದ್ದನ್ನು ನಾನು ಹೃತ್ಪೂರ್ವಕವಾಗಿ ಶ್ಲಾಘಿಸುತ್ತೇನೆ ಎಂದು ಮೋದಿ ಬರೆದುಕೊಂಡಿದ್ದಾರೆ.ಸಮಗ್ರ ಹಾಗೂ ಜಾಗತಿಕ ಕಾರ್ಯತಂತ್ರದ ಸಹಭಾಗಿತ್ವಕ್ಕೆ ಭಾರತ–ಅಮೆರಿಕ ಸಕರಾತ್ಮಕವಾಗಿ ಎದುರು ನೋಡುತ್ತಿವೆ ಎಂದು ಪ್ರಧಾನಿ ನರೇಂದ್ರಮೋದಿ ತಿಳಿಸಿದ್ದಾರೆ.ಟ್ರಂಪ್ ಹೇಳಿದ್ದೇನು?ನಾನು ಪ್ರಧಾನಿ ನರೇಂದ್ರಮೋದಿ ಜತೆ ಎಂದಿಗೂ ಸ್ನೇಹಿತನಾಗಿರುತ್ತೇನೆ. ಅವರು ಅದ್ಭುತ ಪ್ರಧಾನಿ, ಆದರೆ, ಅವರು ಈಗ ಮಾಡುತ್ತಿರುವುದು ನನಗೆ ಇಷ್ಟವಾಗುತ್ತಿಲ್ಲ. ಆದರೂ ಅಮೆರಿಕ–ಭಾರತದ ನಡುವೆ ವಿಶೇಷ ಬಾಂಧವ್ಯವಿದೆ.



## ಅಪ್ರಾಪ್ತ ವಿದ್ಯಾರ್ಥಿನಿ ಮೇಲೆ ಗಣಿತ ಶಿಕ್ಷಕನಿಂದಲೇ ಬಲತ್ಕಾರ!

ಬೀದರ. ಸೆ. 06 : ಬೀದರ್ ಜಿಲ್ಲೆಯ ಹುಮನಾಬಾದ್‌ನ ಖಾಸಗಿ ಶಾಲೆಯೊಂದರಲ್ಲಿ 9ನೇ ತರಗತಿಯಅಪ್ರಾಪ್ತ ಬಾಲಕಿಯ ಮೇಲೆ ಗಣಿತ ಶಿಕ್ಷಕ ರಯೀಸ್ ಎಂಬಾತನಿಂದ ಅತ್ಯಾ1ಚಾರ ನಡೆದ ಆಘಾತಕಾರಿ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಹುಮನಾಬಾದ್ ಪೊಲೀಸ್ ಠಾಣೆಯಲ್ಲಿ ಆರೋಪಿಯ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆಗೆ ಮುಂದಾಗಿದ್ದಾರೆ.ಘಟನೆಯ ವಿವರ: ಆರೋಪಿ ಶಿಕ್ಷಕ ರಯೀಸ್, ವಿದ್ಯಾರ್ಥಿನಿಯ ತಂದೆ ಕರೆ ಮಾಡಿದ್ದಾರೆಂದು ಕಾರಣ ಹೇಳಿ, ಇತರ ವಿದ್ಯಾರ್ಥಿಗಳನ್ನು ಶಾಲೆಯ ಆವರಣದಲ್ಲಿ ಆಡುತ್ತಿರುವ ಬಾಲಕಿಯನ್ನು ಕ್ಲಾಸ್ ರೂಮ್‌ನಲ್ಲಿ ಒಂಟಿಯಾಗಿ ಕರೆದಿದ್ದಾನೆ. ಬಳಿಕ ಆಕೆಗೆ ಲೈಂ1ಗಿಕ ಕಿರುಕುಳ ನೀಡಿದ್ದು, ಸಹಕರಿಸದಿದ್ದರೆ ತಂದೆಯನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ. ನಂತರ, ಮೊಬೈಲ್ನಿಂದ ಬಾಲಕಿಯ ಬೆತ್ತಲೆ ಫೋಟೋ ಸೆರೆಹಿಡಿದ ಆರೋಪಿಯು, ಆ ಫೋಟೋಗಳನ್ನು ಇಟ್ಟುಕೊಂಡು ಪದೇ ಪದೇ ಬೆದರಿಸಿ, ಶಾಲೆಯ ಕ್ಲಾಸ್ ರೂಮ್‌ನಲ್ಲಿಯೇ ಅತ್ಯಾ1ಚಾರ ಮಾಡಿದ್ದಾನೆ. ಪ್ರಕರಣ **ಬೆಳಕಿಗೆ ಬಂದಿದ್ದು ಹೇಗೆ?:** ತಂದೆಯನ್ನ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದ ಶಿಕ್ಷಕ. ಇದರಿಂದ ಬೆದರಿದ ಬಾಲಕಿಯು ಘಟನೆಯನ್ನು ಮುಚ್ಚಿಟ್ಟಿದ್ದಳು. ಆದರೆ, ಆಕೆ ಶಾಲೆಗೆ ಹೋಗಲು ನಿರಾಕರಿಸಿದಾಗ, ಈ ಬಗ್ಗೆ ಮಗಳನ್ನು ವಿಚಾರಿಸಿದಾಗ ಘಟನೆ ತಂದೆಯ ಗಮನಕ್ಕೆ ಬಂದಿದೆ. ಆಗಸ್ಟ 28, 2025ರಂದು ಬಾಲಕಿಯ ತಂದೆ ದೂರು ದಾಖಲಿಸಿದ್ದು, ತಡವಾಗಿ ಪ್ರಕರಣ ಬೆಳಕಿಗೆ ಬಂದಿದೆ.ಪೋಕ್ಸೊ ಪ್ರಕರಣ ದಾಖಲು: ಹುಮನಾಬಾದ್ ಪೊಲೀಸರು ಆರೋಪಿ ಶಿಕ್ಷಕ ರಯೀಸ್ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಆರೋಪಿಯನ್ನು ಬಂಧಿಸುವ ಕಾರ್ಯಾಚರಣೆ ನಡೆಯುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಘಟನೆಯಿಂದ ಸ್ಥಳೀಯ ಸಮುದಾಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ಶಾಲೆಯ ಆಡಳಿತದ ವಿರುದ್ಧವೂ ಪ್ರಶ್ನೆಗಳು ಎದ್ದಿವೆ.

## ಸೆ. 24 ರಂದು ರೆಡ್ಡಿಜನ ಸಂಘದ ಶತಮಾನೋತ್ಸವ



ಬೀದರ. ಸೆ. 06 : ಕರ್ನಾಟಕ ರೆಡ್ಡಿಜನ ಸಂಘವು 100ನೇ ವಸಂತಕ್ಕೆ ಕಾಲಿಡುತ್ತಿರುವ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 24 ರಂದು ಬೆಳಿಗ್ಗೆ 10 ಗಂ–ಟೆಗೆ ಕರ್ನಾಟಕ ರೆಡ್ಡಿಜನ ಸಂಘ ಶತಮಾನೋತ್ಸವ ಕಾರ್ಯಕ್ರಮವನ್ನು ಬೆಂಗಳೂರಿನ ಗಾಯತ್ರಿ ವಿಹಾರ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಎರೆಹೊಸಹಳ್ಳಿಯ ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ತಿಳಿಸಿದರು. ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು, ಕಾರ್ಯಕ್ರಮದಲ್ಲಿ ನಾಡಿನ ರೆಡ್ಡಿ ಸಮಾಜದ ಪೂಜ್ಯರು, ಮುಖಂಡರು ಹಾಗೂ ಕುಲಬಾಂಧವರು ಭಾಗವಹಿಸಲಿದ್ದಾರೆ ಎಂದರು. ರಾಜ್ಯದಲ್ಲಿ ನಮ್ಮ ಸಮುದಾಯದ ಜನಸಂಖ್ಯೆ ಸುಮಾರು 35 ಲಕ್ಷ ಇದೇ ಆದರೆ ಕಾಂತರಾಜು ವರದಿಯಲ್ಲಿ ಕೇವಲ 7ಲಕ್ಷ ಜನಸಂಖ್ಯೆ ತೋರಿಸಲಾಗಿದೆ. ಇದಕ್ಕೆ ಹಲವಾರು ಕಾರಣಗಳಿರಬಹುದು, ಆದರೂ ರೆಡ್ಡಿ ಕುಲಬಾಂಧವರು ಸೆಪ್ಟೆಂಬರ್ 22 ರಿಂದ ನಡೆಯಲಿರುವ ಸಮೀಕ್ಷೆಯಲ್ಲಿ ಉಪ ಪಂಗಡ ಬರೆಸದೆ ಹಿಂದುಳಿದ ಆಯೋದ 11.05 ಸಂಖ್ಯೆ ಅಡಿ ಕೇವಲ ಹಿಂದೂ ರೆಡ್ಡಿ ಎಂದು ಬರೆಸಬೇಕು ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಗುಂಡುರೆಡ್ಡಿ, ಲಕ್ಷ್ಮಣ ರೆಡ್ಡಿ, ಬಾಬು ರೆಡ್ಡಿ, ಕೃಷ್ಣ ರೆಡ್ಡಿ, ಪ್ರಭಾಕರ್ ರೆಡ್ಡಿ, ರಾಜ್ ರೆಡ್ಡಿ, ಬ್ಯಾಂಕ್ ರೆಡ್ಡಿ, ಶಾಂತ ರೆಡ್ಡಿ ಶಂಕರ್ ರೆಡ್ಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.


## ಪಾಕ್ ಜೊತೆ ಯುದ್ಧ ಅಂತ್ಯವಾಗಿಲ್ಲ

ನವದೆಹಲಿ,ಸೆ.6– ಪಾಕಿಸ್ತಾನ ಬೆಂಬಲಿತ ಭಯೋತ್ಪಾದನೆ ಇನ್ನೂ ಕೊನೆಗೊಂಡಿಲ್ಲ ಮತ್ತು ಗಡಿಯಲ್ಲಿ ಒಳನುಸುಳುವಿಕೆ ಪ್ರಯತ್ನಗಳು ಇನ್ನೂ ಮುಂದುವರೆದಿವೆ. ಜೊತೆಗೆ ಪಾಕಿಸ್ತಾನದೊಂದಿಗಿನ ಯುದ್ಧ ಕೊನೆಗೊಂಡಿಲ್ಲ ಎಂದು ಸೇನಾಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿದ್ದಾರೆ.ದೆಹಲಿಯಲ್ಲಿ ನಡೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಭಾರತ–ಪಾಕಿಸ್ತಾನ ಗಡಿಯಲ್ಲಿ ನಿರಂತರ ಸವಾಲುಗಳನ್ನು ಎದುರಿಸುತ್ತಿದೆ. ಗಡಿ ನಿಯಂತ್ರಣ ರೇಖೆಯಲ್ಲಿ ಆಪರೇಷನ್ ಸಿಂಧೂರ ಪರಿಣಾಮ ಇನ್ನೂ ನಿಂತಿಲ್ಲ ಎಂದಿದ್ದಾರೆಪಾಕಿಸ್ತಾನಪ್ರಾಯೋಜಿತಭಯೋತ್ಪಾದನೆ ಕೊನೆಗೊಂಡಿದೆಯೇ ಎಂದು ಭಾವಿಸುವುದಿಲ್ಲ ಗಡಿಯಲ್ಲಿ ಒಳನುಸುಳುವಿಕೆ ಮುಂದುವರಿದಿದೆ, ಭಾರತೀಯಸೇನೆನಡೆಸಿದಆಪರೇಷನ್ ಸಿಂಧೂರದಲ್ಲಿ ಭಯೋತ್ಪಾದಕರುಎಷ್ಟುಮಂದಿ ಸಾವನ್ನಪ್ಪಿದ್ದಾರೆ ಎಷ್ಟು ಮಂದಿ ತಪ್ಪಿಸಿಕೊಂಡಿದ್ದಾರೆ ಎಂಬುದು ನಮಗೆಲ್ಲರಿಗೂ ತಿಳಿದಿದೆ ಎಂದು ಹೇಳಿದ್ದಾರೆಆಪರೇಷನ್ ಸಿಂಧೂರ್ ಕಾರ್ಯಾಚರಣೆಯ ಸಮಯದಲ್ಲಿ ಸಶಸ್ತ್ರ ಪಡೆಗಳಲ್ಲಿ ಒಗ್ಗಟ್ಟು ಮತ್ತು ಸಮನ್ವಯ ಪ್ರದರ್ಶಿಸಿದ ಪರಿಣಾಮ ಭಯೋತ್ಪಾದಕ ಶಿಬಿರಗಳ ಮೇಲೆ ಯಶಸ್ವಿಯಾಗಿ ದಾಳಿ ನಡೆಸಲು ಸಹಕಾರಿಯಾಯಿತು ಎಂದಿದ್ದಾರೆ



## ಲಿಂ.ಡಾ.ಅಪ್ಪಾ ಕುಟುಂಬವರ್ಗಕ್ಕೆ ಖರ್ಗೆ ಸಾಂತ್ವನ

ಕಲಬುರಗಿ:ಸೆ.6:ಇತ್ತೀಚಿಗೆ ಲಿಂಗೈಕ್ಯರಾದ ಶರಣಬಸವೇಶ್ವರ ಸಂಸ್ಥಾನ ಪೀಠಾಧಿಪತಿಗಳಾಗಿದ್ದ ಡಾ ಪೂಜ್ಯ ಶ್ರೀ ಶರಣಬಸವಪ್ಪ ಅಪ್ಪಾಜೀ ಅವರ ಕುಟುಂಬ ವರ್ಗದವನ್ನು ರಾಜ್ಯಸಭೆ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿ ಸಾಂತ್ವನ ಹೇಳಿದರು.ಡಾ ಅಪ್ಪಾಜೀ ಅವರ ಶೈಕ್ಷಣಿಕ ಕ್ಷೇತ್ರದ ಕೊಡುಗೆಯನ್ನು ಸ್ಮರಿಸಿದ ಖರ್ಗೆ ಅವರು ಹೈದರಾಬಾದ್ ಕರ್ನಾಟಕದದಂತ ಹಿಂದುಳಿದ ಪ್ರದೇಶದಲ್ಲಿ ಅಕ್ಷರ ಕ್ರಾಂತಿಯ ಜೊತೆಗೆ ಶ್ರೀ ಸಂಸ್ಥಾನದ ಮಹತ್ತರ ಕೊಡುಗೆಯಾದ ದಾಸೋಹವನ್ನು ದಶಕಗಳ ಕಾಲ ಮುಂದುವರೆಸಿಕೊಂಡು ಬಂದಿದ್ದರು ಎಂದು ಸ್ಮರಿಸಿದರು.ಡಾ ಅಪ್ಪಾಜೀ ಅವರ ಸುಪುತ್ರ ಚಿರಂಜೀವಿ ದೊಡ್ಡಪ್ಪ ಅಪ್ಪ ಅವರನ್ನು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಆತ್ಮೀಯವಾಗಿ ಮಾತನಾಡಿಸಿದರು.



ಈ ಸಂದರ್ಭದಲ್ಲಿ ಶ್ರೀಮತಿ ದಾಕ್ಷಾಯಿಣಿ ಅವ್ವಾಜೀ, ಶ್ರೀಮತಿ ರಾಧಾಬಾಯಿ ಖರ್ಗೆ, ಸಚಿವ ಶರಣಬಸಪ್ಪ ದರ್ಶನಾಪುರ ಸೇರಿದಂತೆ ಹಲವರಿದ್ದರು.

## ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತ ವಾರದೊಳಗೆ ಭೂ ಪರಿಹಾರಕ್ಕೆ ದರ ನಿಗದಿ: ಸಿದ್ಧರಾಮಯ್ಯ

ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ – ಯುಕೆಪಿ ಮೂರನೇ ಹಂತದ ಯೋಜನೆಗೆ ಸಂಬಂಧಿಸಿದಂತೆ ವಾರದೊಳಗೆ ಸಭೆ ಕರೆದು ಭೂ ಪರಿಹಾರಕ್ಕೆ ದರ ನಿಗದಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು. ಜಲಸಂಪನ್ಮೂಲ ಇಲಾಖೆ ಹಾಗೂ ಕೃಷ್ಣ ಜಲ ಭಾಗ್ಯ ನಿಗಮದ ವತಿಯಿಂದ ಆಲಮಟ್ಟಿ ಜಲಾಶಯದಲ್ಲಿ ಶನಿವಾರ ಆಯೋಜಿಸಲಾಗಿದ್ದ ಕೃಷ್ಣೆಯ ಜಲಧಿಗೆ ಗಂಗಾಪೂಜೆ ಹಾಗೂ ಬಾಗಿನ ಅರ್ಪಣೆ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರು ಹೆಚ್ಚಿನ ಪರಿಹಾರ ಕೋರಿ ಕೋರ್ಟಿಗೆ ಹೋಗಬಾರದು ಎಂದು ಹೇಳಿದರು. ನ್ಯಾಯಾಲಯದ ಮೊರೆ ಹೋಗುವುದರಿಂದ ಕಾಮಗಾರಿ ಅನುಷ್ಠಾನದಲ್ಲಿ ವಿಳಂಬವಾಗುತ್ತದೆ. ಈ ಹಿನ್ನೆಲೆಯಲ್ಲಿ ರೈತರು ಪರಿಹಾರಕ್ಕೆ ನ್ಯಾಯಾಲಯದ ಮೊರೆ ಹೋಗದಂತೆ ಮನವಿ ಮಾಡಿಕೊಂಡ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಇತ್ತೀಚೆಗೆ ಈ ಭಾಗದ ರೈತರು, ಶಾಸಕರೊಂದಿಗೆ ಸಭೆ ನಡೆಸಿ ಚರ್ಚಿಸಿದ್ದು , ಒಪ್ಪಿಗೆ ಆದೇಶ ನೀಡುವುದು ಒಂದು ಹಂತಕ್ಕೆ ಬಂದಿದೆ. ಎಲ್ಲರ ಒಪ್ಪಿಗೆಯ ಮೇಲೆ ಒಪ್ಪಂದ ಮಾಡಿಕೊಳ್ಳಲಾಗುವುದು. ವಾರದೊಳಗೆ ಈ ಬಗ್ಗೆ ಇತ್ಯರ್ಥ ಮಾಡಲಾಗುವುದು ಎಂದು ಹೇಳಿದರು.



ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದಲ್ಲಿ 519.6 ಮೀ. ರಿಂದ 524.25 ಮೀಟರ್‌ಗೆ ಎತ್ತರಿಸುವುದರಿಂದ 130 ಟಿಎಂಸಿ ನೀರನ್ನು ಸಂಗ್ರಹ ಮಾಡಿಕೊಳ್ಳಬಹುದಾಗಿದ್ದು, ಅದನ್ನು ಬಳಕೆ ಮಾಡಲು ಅನುಕೂಲವಾಗಲಿದೆ. ಮೂರನೇ ಹಂತದ ಬಗ್ಗೆಯೂ ತೀರ್ಮಾನವಾಗಿದ್ದು, ಗೆಜೆಟ್ ಅಧಿಸೂಚನೆಯಾಗಿಲ್ಲ. ಅದಾದರೆ ನೀರಾವರಿ ಕಾಮಗಾರಿ ಹಾಗೂ ಅಣೆಕಟ್ಟು ಎತ್ತರಿಸುವ ಕೆಲಸಗಳು ಆಗುವುದಕ್ಕೆ ಅನುಕೂಲವಾಗಲಿದೆ ಎಂದು ಸಿಎಂ, ಗೆಜೆಟ್ ನೋಟಿಫಿಕೇಶನ್ ಹೊರಡಿಸುವ ಕುರಿತಂತೆ ಪ್ರಧಾನಿ ಹಾಗೂ ಸಂಬಂಧಿತ ಕೇಂದ್ರ ಸಚಿವರನ್ನು ಮೂರು ಬಾರಿ ಭೇಟಿ ಮಾಡಲಾಗಿದೆ. ಉಪಮುಖ್ಯಮಂತ್ರಿಗಳು ಐದು ಬಾರಿ ಭೇಟಿಯಾಗಿದ್ದಾರೆ. ನೀರಾವರಿ ನಮ್ಮ ಆದ್ಯತಾ ವಲಯ. ರೈತರಿಗೆ ಅನುಕೂಲವಾಗಬೇಕು. ರೈತರ ಜಮೀನುಗಳಿಗೆ ನೀರು ದೊರೆತು, ರೈತರ ಉತ್ಪನ್ನಗಳು ಹೆಚ್ಚಾಗಬೇಕು ಹಾಗೂ ಅವರ ಬದುಕು ಹಸನಾಗಬೇಕು ಎನ್ನುವುದು ನಮ್ಮ ಉದ್ದೇಶ. ಈ ನಿಟ್ಟಿನಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ ಎಂದರು.

• ಅಭಿನವ ಭಿಂದ್ರಾ : 2008 ರ ಬಿಜೀಂಗ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಪಿಸ್ತೂಲ್ ಶೂಟರ್

# ಶಿಕ್ಷಕರನ್ನು ಗೌರವಿಸಿದರೆ, ಎಲ್ಲರನ್ನೂ ಗೌರವಿಸಿದಂತೆ: ಜ್ಯೋತಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಸೆ.6:ಸಮಾಜದ ಓರೆ, ಕೋರೆಗಳನ್ನು ತಿದ್ದಿ, ತೀಡುವ ಶಿಕ್ಷಕರನ್ನು ಗೌರವಿಸಿದರೆ,ಎಲ್ಲರನ್ನೂ ಗೌರವಿಸಿದಹಾಗೆ ಎಂದು ಗ್ರಾ.ಪಂ. ಅಧ್ಯಕ್ಷೆ ಜ್ಯೋತಿ ಷಣ್ಮುಖ ಹೇಳಿದರು.

ತಾಲೂಕಿನ ನಿಟ್ಟೂರ(ಬಿ) ಗ್ರಾಮದ ಕಲ್ಯಾಣ ಮಂಟಪದಲ್ಲಿ, ಗ್ರಾ.ಪಂ ವತಿಯಿಂದ ಶನಿವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಗ್ರಾ.ಪಂ. ವ್ಯಾಪ್ತಿಯ ಎಲ್ಲಾ ಶಿಕ್ಷಕರನ್ನು ಸತ್ಕರಿಸಿ ಅವರು ಮಾತನಾಡಿದರು. ತಂದೆ, ತಾಯಿ ನಮಗೆ ಜೀವನ ನೀಡಿದ-ರೆ, ಆ ಜೀವನ ಸರಿದಾರಿಯಲ್ಲಿ ತೂಗಿಸಿಕೊಂಡು ಹೋಗಲು ಕಲಿಸುವಾತ ಶಿಕ್ಷಕ, ಹೀಗಾಗಿ ಶಿಕ್ಷಕರನ್ನು ಗೌರವಿಸಿದರೆ ಸಮಾಜದ ಎಲ್ಲರನ್ನೂ ಗೌರವಿಸಿದಹಾಗೆ ಎಂದು ಹೇಳಿದರು.ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕದ ಅಧ್ಯಕ್ಷ ಜಯರಾಜ ದಾಬಶೆಟ್ಟಿ, ಶಿಸ್ತುಬದ್ಧ ಜೀವನ ನಡೆಸಲು ಶಿಕ್ಷಕರ ಸಹಕಾರ ಬೇಕು. ಶಿಕ್ಷಕರು ಜಗತ್‌ನಿರ್ಮಾಣ ಶಿಲ್ಪಿಗಳಾಗಿದ್ದಾರೆ. ಒಬ್ಬ ಶಿಲ್ಪಿ ಒಂದು ಕಲ್ಲನ್ನು ಕೆತ್ತಿ ಉತ್ತಮ ಮೂರ್ತಿ ಮಾಡುಹಾಗೆ ಶಿಕ್ಷಕ ಅಜ್ಞಾನದಲ್ಲಿರುವ ವಿದ್ಯಾರ್ಥಿಗಳನ್ನು ಉತ್ತಮ ಮೂರ್ತಿಗಳನ್ನಾಗಿ ಮಾಡುತ್ತಾನೆ. ಹೀಗಾಗಿ ನಾವೆಲ್ಲರೂ ಶಿಕ್ಷಕರಿಗೆ ಸದಾ ಋಣಿಯಾಗಿರಬೇಕು ಎಂದು ಹೇಳಿದರು.ಶಿಕ್ಷಕನರಸಿಂಗರಾವ ಇಂಗಳೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಪಿಡಿಓ ರಾಜಕುಮಾರ ತಂಬಾಕೆ, ಶಿಕ್ಷಕ ಬಸವಪ್ರಭು ಸೋಲಾಪೂರೆ, ಸಾವಿತ್ರಿಬಾಯಿಫುಲೆ ಶಿಕ್ಷಕಿಯರ ಸಂಘದ ಅಧ್ಯಕ್ಷೆ ಕೀರ್ತಿಲತಾ ಹೊಸಾಳೆ, ಗ್ರಾ.ಪಂ.ಸದಸ್ಯ ಮಲ್ಲಿಕಾರ್ಜುನ ಕರಂಜೆ ಶಿಕ್ಷಕರ ಕಾರ್ಯಕ್ಷಮತೆಯ ಬಗ್ಗೆ ಮಾತನಾಡಿದರು. ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಅವಿನಾಶ ವಿಶೇಷ ಉಪನ್ಯಾಸ ಮಂಡಿಸಿದರು.ಕಾರ್ಯಕ್ರಮದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯದರ್ಶಿ ಗಣಪತಿ ಬೋಚರೆ, ಗ್ರಾ.ಪಂ. ಉಪಾಧ್ಯಕ್ಷ ರಾಜಕುಮಾರ ಶ್ರೀಮಂತರಾವ, ಮುಖ್ಯಶಿಕ್ಷಕ ಪುಂಡಲಿಕರಾವ, ಹಣಂತ ಪೂಜಾರಿ, ಗ್ರಾ.ಪಂ.ಸದಸ್ಯ ಮಲ್ಲಿಕಾರ್ಜುನ ಕರಂಜೆ, ಸೋಮನಾಥ, ಗುಂಡಪ್ಪ, ಕಿತ್ತೂರರಾಣಿ ಚನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲ ಗೌತಮ, ಶಿಕ್ಷಕ ಗಣೇಶ ಜಾಧವ ಉಪಸ್ಥಿತರಿದ್ದರು.

# ಭಾಲ್ಕಿಯಲ್ಲಿ ಸೆ.8 ರಂದು ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.6:ಪಟ್ಟಣದ ಹುಮನಾಬಾದ್ ರಸ್ತೆಯ ಹತ್ತಿರದ ಪ್ರಯಾಗ್ ಫಂಕ್ಷನ್ ಹಾಲ್ ನಲ್ಲಿ ಸೆ.8 ರಂದು ಸೋಮವಾರ 12.30 ಗಂಟೆಗೆ ಬೀದರ ಜಿಲ್ಲಾ ಮಟ್ಟದ ಹಾಗು ಭಾಲ್ಕಿ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಆಚರಿಸಲಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿದ ಅವರು, ಭಾರತ ರತ್ನ ಸರ್ವಪಲ್ಲಿ ರಾಧಾಕೃಷ್ಣನ್‌ರವರ ಜನ್ಮದಿನಾಚರಣೆಯ ಅಂಗವಾಗಿ ಬೀದರ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಭಾಲ್ಕಿಯ ಪ್ರಯಾಗ್ ಫಂಕ್ಷನ್ ಹಾಲ್‌ನಲ್ಲಿ ಆಯೋಜಿಸಲಾಗಿದೆ.ಅನುಬವಮಂಟಪ ಬಸವಕಲ್ಯಾಣದ ಅಧ್ಯಕ್ಷ ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರು, ಬುದ್ಧವಿಹಾರ ಅಣದೂರಿನವರ ಜ್ಯೋತಿ ಭಂತೆ, ಪ್ರೇರಣಾತಾಯಿ ಭೋಸ್ಲೆ ತೋರಣೇಕರ್ ರವರ ಸಾನಿಧ್ಯದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡು ಕಾರ್ಯಕ್ರಮ ಉದ್ಘಾಟಿಸುವರು.ವಿಶೇಷ ಅತಿಥಿಗಳಾಗಿ ಪೌರಾಡಳಿತ ಸಚಿವ ರಹೀಂ ಖಾನ, ಸಂಸದ ಸಾಗರ ಈಶ್ವರ ಖಂಡ್ರೆ, ಶಾಸಕರಾದ ಪ್ರಭು ಚವ್ಹಾಣ, ಶರಣು ಸಲಗರ, ಡಾ। ಶೈಲೇಂದ್ರ ಬಲ್ದಾಳೆ, ಡಾ। ಸಿದ್ದಲಿಂಗಪ್ಪ ಪಾಟೀಲ, ವಿಧಾನಪರಿಷತ್ ಸದಸ್ಯರಾದ ಡಾ। ಚಂದ್ರಶೇಕರ ಪಾಟೀಲ, ಶಶೀಲ ಜಿ.ನಮೋಶಿ, ಭೀಮರಾವ ಪಾಟೀಲ, ಎಮ್.ಜಿ.ಮುಳೆ ಪ್ರಮುಖರಾದ ಮಾಲಾ ಬಿ ನಾರಾಯಣರಾವ, ಅಮೃತರಾವ ಚಿಮಕೋಡೆ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಡಾ।ಗಿರೀಶ ಬದೋಲೆ, ಪೊಲೀಸ್ ವರಿಷ್ಟಾಧಿಕಾರಿ ಪ್ರದೀಪ ಗುಂಟೆ, ಸೋಮಶೇಖರ ಚಿದ್ರಿ, ರವೀಂದ್ರರೆಡ್ಡಿ, ಮಹಬೂಬ ಪಟೇಲ, ಶಿವಕುಮಾಋ ಸದಾಫುಲೆ, ಪ್ರಶಾಂತ ರಾಗಾ, ಸೂರ್ಯಕಾಂತ ಪಾಟೀಲ, ಶಿವರಾಜ ಕಪಲಾಪೂರೆ, ವೈಜಿನಾಥ ಸಾಗರ, ರಾಜಕುಮಾರ ಬಿರಾದಾರ, ಬಸವರಾಜ ಜಕ್ಕಾ ಸೇರಿದಂತೆ ಗಣ್ಯರು



ಉಪಸ್ಥಿತರಿರುವರು.

**ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ**

**2024-25ನೇ ಸಾಲಿಗೆ ಆಯ್ಕೆಯಾದ ಶಿಕ್ಷಕರ ವಿವರ:**

ಕಿರಿಯ ಪ್ರಾಥಮಿಕ ವಿಭಾಗ: ಕೈಲಾಸಪತಿ, ಬಾವಲಗಾಂವ ತಾಂಡಾ ಔರಾದ, ಭಾಗ್ಯಜ್ಯೋತಿ, ರಾಜೋಳಾ ಬಸವಕಲ್ಯಾಣ, ಅಂಜನಾಬಾಯಿ ಸಿ.ಬಿ.ನಗರ ಭಾಲ್ಕಿ, ಸಂಗೀತಾ ಲಾಲಭಾಗ ಬೀದರ, ಸುನಿತಾ ಧುಮ್ಮನಸೂರ ತಾಂಡಾ ಹುಮನಾಬಾದ.

ಹಿರಿಯ ಪ್ರಾಥಮಿಕ ಶಾಲಾ ವಿಭಾಗ: ಗುಣವಂತ ದಾಪಕಾ ಸಿ ಔರಾದ, ಶರಣಪ್ಪ ವಾಡಕರ್ ತ್ರಿಪುರಾಂತ ಬಸವಕಲ್ಯಾಣ, ಶ್ವೇತಾಬಾಯಿ ಲಖನಗಾಂವ ಭಾಲ್ಕಿ, ಝುರೆಪ್ಪಾ ಬಗದಲ್ ಬೀದರ, ಮಹಾದೇವಿ ಡಾಕುಳಗಿ, ಹುಮನಾಬಾದ. ಪ್ರೌಢಶಾಲಾ ವಿಭಾಗ: ಸಂಜೀವಕುಮಾರ, ದಾಪಕಾ.ಸಿ ಔರಾದ, ನಾಗಪ್ಪ ನಿಣ್ಣೆ, ಆಲಗೂಡ ಬಸವಕಲ್ಯಾಣ, ಅವಿನಾಶ, ನಿಟ್ಟೂರ(ಬಿ) ಭಾಲ್ಕಿ, ವಿನೋದಕುಮಾರ, ಭಂಗೂರ ಬೀದರ, ಅಬ್ದುಲ ಸಾಬ್ ಬಾಲಕರ ಪ್ರೌಢಶಾಲೆ ಹುಮನಾಬಾದ.

**2025-26ನೇ ಸಾಲಿಗೆ ಆಯ್ಕೆಯಾದ ಶಿಕ್ಷಕರ ವಿವರ:**

ಕಿರಿಯ ಪ್ರಾಥಮಿಕ ವಿಭಾಗ: ಅನೀಲಕುಮಾರ ಶಾಸ್ತ್ರಿ, ಹಂದ್ರಾಳ ಆರ್, ಬಸವಕಲ್ಯಾಣ. ಸುಲೋಚನಾ ಪಾಟೀಲ, ಭಗವಾನ ವಾಡಿ, ಭಾಲ್ಕಿ. ಸಾವಿತ್ರಿ, ಹಮಿಲಾಪೂರ ಬೀದರ. ಅರುಣಾ ಜಾಧವ, ಕಪ್ಪರಗಾಂವ ಹುಮನಾಬಾದ.

ಹಿರಿಯ ಪ್ರಾಥಮಿಕ ವಿಭಾಗ: ಮಾಧವರಾವ, ವನಮಾರಪಳ್ಳಿ ಔರಾದ. ಮಾನೆ ಧನರಾಜ ವಿಶ್ವನಾಥ, ಮೋರಖಂಡಿ ಬಸವಕಲ್ಯಾಣ. ಕಾವೇರಿ, ವಳಸಂಗ ಭಾಲ್ಕಿ. ಎಮ್.ಡಿ.ಅಜಮ್ ಪಾಶಾ, ರಾವತಾಲೀಂ ಬಿದರ. ರಾಮನಗೌಡ, ಮರಕಲ್ ಹುಮನಾಬಾದ.

ಪ್ರೌಢಶಾಲಾ ವಿಭಾಗ: ದತ್ತಾತ್ರಿಗಿರಿ, ಕೆಪಿಎಸ್ ಪ್ರೌಢಶಾಲೆ ಔರಾದ, ರೇಣುಕಾ.ವಿ, ಹುಲಸೂರ, ಬಸವಕಲ್ಯಾಣ, ಧನಲಕ್ಷ್ಮಿ ಕೆಪಿಎಸ್ ಪ್ರೌಢಶಾಲೆ ಹಲಬರ್ಗಾ ಭಾಲ್ಕಿ. ಆಸ್ಮಾ ಆಶಾ ಬೇಗಂ, ಎಚ್‌ಎಮ್.ಎಸ್. ಎಮ್ ಬೀದರ. ಸಂಗಮ್ಮ ಆದರ್ಶ, ಬೆಮಳಖೆಡಾ ಹುಮನಾಬಾದ.

ಶಿಕ್ಷಕರನ್ನು ಗೌರವಿಸುವ ಶಿಕ್ಷಕರ ದಿನಾಚರಣೆಯಲ್ಲಿ ಭಾಗವಹಿಸಲು ಎಲ್ಲಾ ಶಿಕ್ಷಕರಿಗೆ ಓ.ಓ.ಡಿ ಸೌಲಭ್ಯ ನೀಡಲಾಗಿದೆ. ಹೆಚ್ಚಿನ ಸಂಖೆಯಲ್ಲಿ ಭಾಗವಹಿಸಬೇಕು ಎಂದು ಕೋರಲಾಗಿದೆ.

# ಶಿಕ್ಷಕರ ದಿನಾಚರಣೆಯಲ್ಲಿ ಭಾಗವಹಿಸಿ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.6: ಪಟ್ಟಣದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯದ ವತಿಯಿಂದ ನಡೆಯಲಿರುವ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಾಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ ಬನ್ನಾಳೆ ಮನವಿ ಮಾಡಿದ್ದಾರೆ.



ಪ್ರಯಾಗ ಫಂಕ್ಷನ್ ಹಾಲ್‌ನಲ್ಲಿ ಸೋಮವಾರ ಮಧ್ಯಾಹ್ನ 12.30 ಗಂಟೆಗೆ 2025-26ನೆಯ ಸಾಲಿನ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ಜಿಲ್ಲಾ ಮಟ್ಟದ ಉತ್ತಮ

ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಲಿದ್ದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಉದ್ಘಾಟಿಸಲಿದ್ದಾರೆ.

ಶಿಕ್ಷಕರ ದಿನಾಚರಣೆ ಹಿನ್ನೆಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವತ್ರಿಕ ರಜೆ ಘೋಷಣೆ ಮಾಡಿದ್ದಾರೆ. ಹಾಗಾಗಿ ಎಲ್ಲ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಮಾರಂಭ ಯಶಸ್ವಿಗೊಳಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

# ದುಬೈನಲ್ಲಿ ಸೌತ್ ಇಂಡಿಯನ್ ಬಿಜನೆಸ್ ಅವಾರ್ಡ್ ಪಡೆದ ಅಶೋಕ ಖೇಣಿ

ಬೀದರ. ಸೆ. 06 : ಕರ್ನಾಟಕದ ಹೆಮ್ಮೆಯ ಪುತ್ರ, ಧರ್ಮ ರತ್ನಾಕರ, ನೈಸ್ ಸಂಸ್ಥೆಯ ಮುಖ್ಯಸ್ಥರು ಹಾಗೂ ಬೀದರ್ ದಕ್ಷಿಣ ಕ್ಷೇತ್ರದ ಜನಪ್ರಿಯ ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಅಶೋಕ ಖೇಣಿ ರವರಿಗೆ ದುಬೈನಲ್ಲಿ ನಡೆದ ಪ್ರತಿಷ್ಠಿತ ಸೌತ್ ಇಂಡಿಯನ್ ಬಿಜನೆಸ್ ಅವಾರ್ಡ್ 2025 ನೀಡಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ದಕ್ಷಿಣ ಭಾರತದ ಗಣ್ಯ ಉದ್ಯಮಿಗಳು ಮತ್ತು ನಾಯಕರು ಭಾಗವಹಿಸಿದ್ದರು. ಅದರಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಅಶೋಕ ಖೇಣಿ ರವರಿಗೆ ಈ ಅವಾರ್ಡ್ ಸಿಗುವುದರಿಂದ ಕರ್ನಾಟಕದ ಹೆಮ್ಮೆ ಮತ್ತಷ್ಟು ಹೆಚ್ಚಾಗಿದೆ.

ಅವಾರ್ಡ್ ಸ್ವೀಕರಿಸಿದ ನಂತರ ಮಾತನಾಡಿದ ಅಶೋಕ ಖೇಣಿ ರವರು,

ಈ ಪ್ರಶಸ್ತಿಯನ್ನು ನಾನು ಕರ್ನಾಟಕದ ಜನತೆಗೆ ಅರ್ಪಿಸುತ್ತೇನೆ. ನಾನು ಯಾವಾಗಲೂ ಕರ್ನಾಟಕವನ್ನು ಪ್ರೀತಿಸುತ್ತೇನೆ. ಕರ್ನಾಟಕವು ಮೂಲಸೌಕರ್ಯದಲ್ಲಿ ಭಾರತದ ನಂ.1 ರಾಜ್ಯವಾಗಬೇಕು ಎಂಬುದು ನನ್ನ



ಕನಸು ಎಂದು ಅಭಿಪ್ರಾಯಪಟ್ಟರು.

ಅವರ ಸಮರ್ಪಣೆ, ಕರ್ನಾಟಕದ ಮೂಲಸೌಕರ್ಯ ಅಭಿವೃದ್ಧಿಯ ಕನಸು ಮತ್ತು ಜನಪರ ಕಾರ್ಯಗಳ ನೆನಪನ್ನು ಈ ಸಂದರ್ಭದಲ್ಲಿ ಅನೇಕರು ಮೆಚ್ಚಿಕೊಂಡರು.

ಈ ಪ್ರಶಸ್ತಿಯು ಕೇವಲ ಅಶೋಕ ಖೇಣಿ ರವರ ವೈಯಕ್ತಿಕ ಸಾಧನೆಗೆ ಸೀಮಿತವಾಗದೆ, ಕರ್ನಾಟಕದ ಪ್ರಗತಿ, ಗೌರವ ಮತ್ತು ಕೀರ್ತಿಗೆ ಮತ್ತೊಂದು ಸುವರ್ಣ ಅಧ್ಯಾಯ ಸೇರಿಸಿದೆ.

# ಸೆ.8 ರಂದು ಜಿಲ್ಲಾ ಮಟ್ಟದ ದಸರಾ ಸಿ.ಎಂ.ಕಪ್ ಕ್ರೀಡಾಕೂಟ

ಬೀದರ,ಸೆ.06:ಜಿಲ್ಲಾಡಳಿತ, ಜಿಲ್ಲಾ ಪಂಚಾತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಸೆಪ್ಟೆಂಬರ್.8 ರಂದು ಬೆಳಿಗ್ಗೆ 10 ಗಂಟೆಗೆ ಬೀದರ ಜಿಲ್ಲಾ ನೆಹರು ಕ್ರೀಡಾಂಗಣದಲ್ಲಿ ಜಿಲ್ಲಾ ಮಟ್ಟದ ದಸರಾ ಸಿ.ಎಂ. ಕಪ್ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಮಾಡಲಿದ್ದಾರೆ. ಹಾಗೂ ಕಾರ್ಯಕ್ರಮದ ಅಧ್ಯಕ್ಷ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ಲೋಕಸಭಾ ಸಂಸದರಾದ ಸಾಗರ ಈಶ್ವರ ಖಂಡ್ರೆ, ಔರಾದ ಶಾಸಕ ಪ್ರಭು ಬಿ.ಚವ್ಹಾಣ್, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕ ಡಾ.ಸಿದ್ಧಲಿಂಗಪ್ಪಾಎನ್.ಪಾಟೀಲ ಹಾಗೂ ವಿಧನ ಪರಿಷತ್ ಶಾಸಕರುಗಳಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ ಜಿ.ನಮೋಶಿ, ಭೀಮರಾವ ಬಿ.ಪಾಟೀಲ, ಎಂ.ಜಿ.ಮೂಳೆ ಹಾಗೂ ಕರ್ನಾಟಕ

ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ.ನಾರಾಯಣರಾವ, ಬೀದರ ನಗರಸಭೆ

ಅಧ್ಯಕ್ಷ ಮಹಮ್ಮದ ಗೌಸ್, ಬೀದರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಬೀದರ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಬೀದರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪ್ರದೀಪ ಗುಂಟಿ ಅವರುಗಳು ವಹಿಸಲಿದ್ದಾರೆ.

# ಜಯ ಕರ್ನಾಟಕ ಜನಪರ ವೇದಿಕೆ ಸಂಘಟನೆಯ ತಾಲೂಕಾಧ್ಯಕ್ಷರಾಗಿ ಪಾಟೀಲ ಆಯ್ಕೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.6: ಸಂಘಟನೆಯ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ನಿಮ್ಮ ಸಾಮಾಜಿಕ ಸೇವೆ ಮತ್ತು ಸಂಘಟನೆ ಮೇಲಿನ ಅಭಿಮಾನವನ್ನು ಗಮನಿಸಿ ಜಯ ಕರ್ನಾಟಕ ಜನಪರ ವೇದಿಕೆ ಸಂಘಟನೆಯ ಪರವಾಗಿ ನಾಡಿನ ನೆಲ, ಜಲ, ಗಡಿ, ಭಾಷೆ, ಸಂಸ್ಕೃತಿ ಮತ್ತು ಪರಿಸರ ಸಂರಕ್ಷಣೆ ಜೊತೆಗೆ ಸಾಮಾಜಿಕ ಕಳಕಳಿಯಿಂದ ಕಾನೂನಿನ ಮತ್ತು ಸಂವಿಧಾನದ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಲು ಸಮಾಜದ ಅಶಕ್ತ ಜನರಿಗೆ ಧ್ವನಿಯಾಗಿ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಎಂಬ ಹೊಸ ಹುರುಪಿನೊಂದಿಗೆ ಸೇವೆ ಸಲ್ಲಿಸಲು ಸಂಸ್ಥಾಪಕ ಅಧ್ಯಕ್ಷರಾದ



ಬಿ. ಗುಣರಂಜನ್ ಶೆಟ್ಟಿ, ಹಾಗೂ ರಾಜ್ಯಾಧ್ಯಕ್ಷ ಜೆ. ಶ್ರೀನಿವಾಸ, ರಾಜ್ಯ ಕಾರ್ಯಾಧ್ಯಕ್ಷ ಚಂದ್ರಪ್ಪ, ಬೀದರ್ ಜಿಲ್ಲಾ ಅಧ್ಯಕ್ಷ ಸಂಜು ತೊಳ್ಳೆ , ಜಿಲ್ಲಾ ಕಾರ್ಯಾಧ್ಯಕ್ಷ ವಿದ್ಯಾಸಾಗರ್ ಜಾಂತೆ, ಬೀದರ್ ತಾಲೂಕಾಧ್ಯಕ್ಷ ಪ್ರಭು ಶೆಟ್ಟಿಗಾದಿಗೆ ಇವರ ಆದೇಶದ ಮೇರೆಗೆ ಸಂತೋಷ್ ಬಸವರಾಜ ಪಾಟೀಲ್ ಅವರನ್ನು ಭಾಲ್ಕಿ ತಾಲೂಕ ಅಧ್ಯಕ್ಷರನ್ನಾಗಿ ಆಡಳಿತಾತ್ಮಕ ದೃಷ್ಟಿಯಿಂದ ತಕ್ಷಣದಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೂ ಕಾರ್ಯ ನಿರ್ವಹಿಸತಕ್ಕದ್ದು. ತಾವು ಹೊಂದಿರುವ ಹುದ್ದೆಯೊಂದಿಗೆ ಸದಸ್ಯತ್ವ ಅಭಿಮಾನವನ್ನು ಮಾಡಿಸಿ, ಸಂಘಟನೆಗೆ ಒಳ್ಳೆಯ ಹೆಸರು ತರುವಂತಹ ಸದಸ್ಯರನ್ನು ಸೇರಿಸಿ, ಕಾರ್ಯಕ್ರಮವನ್ನು ಮಾಡಲು ಮತ್ತು ಸಂಘಟನೆಯಲ್ಲಿ ಕರ್ತವ್ಯ ನಿರ್ವಹಿಸಲು ಈ ಮೂಲಕ ಅನುಮತಿ ನೀಡಲಾಗಿದೆ.

# ಪರಿಶಿಷ್ಟ ಜಾತಿ ಒಳಮೀಸಲಾತಿ ಅಳವಡಿಸಿಕೊಂಡು ಕಾಲಬದ್ಧವಾಗಿ ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಲು ಸೂಚನೆ

ಬೀದರ, ಸೆ.06 : ಸೆ.4ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ದಿನಾಂಕ: 28.10.2024ರ ನಂತರ ಸರ್ಕಾರದ ಯಾವುದೇ ಇಲಾಖೆ/ ಮಂಡಳಿ/ನಿಗಮ/ಸ್ವಾಯತ್ತ ಸಂಸ್ಥೆಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಹೊರಡಿಸಿದ ಅಧಿಸೂಚನೆಗಳನ್ನು ರದ್ದುಗೊಳಿಸಿ ಸರಕಾರ ಆದೇಶ ಹೊರಡಿಸಿದೆ. ಪರಿಶಿಷ್ಟ ಜಾತಿ ಒಳಮೀಸಲಾತಿಯನ್ನು ಅಳವಡಿಸಿಕೊಂಡು ಕಾಲಬದ್ಧವಾಗಿ (TimeBound) ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸುವಂತೆ ಸೂಚಿಸಲಾಗಿದೆ.

ಇದಕ್ಕೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸುತ್ತೋಲೆ ಹೊರಡಿಸಿದೆ. ದಿನಾಂಕ: 28.10.2024ರ ಹಿಂದೆ ನೇರ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿ, ದಿನಾಂಕ: 28.10.2024ರ ನಂತರ ಸರ್ಕಾರದ ಯಾವುದೇ ಇಲಾಖೆ/ಮಂಡಳಿ/ನಿಗಮ/ಸ್ವಾಯತ್ತ ಸಂಸ್ಥೆಗಳ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳು ಯಾವುದಾದರೂ ತಿದ್ದುಪಡಿ ಅಧಿಸೂಚನೆಗಳನ್ನು

ಹೊರಡಿಸಿದ್ದಲ್ಲಿ ಅಂತಹ ಎಲ್ಲಾ ಅಂತಹ ಎಲ್ಲಾ ನೇಮಕಾತಿ ಅಧಿಸೂಚನೆಗಳನ್ನೂ ಸಹ ರದ್ದುಗೊಳಿಸಿ, ಪರಿಶಿಷ್ಟ ಜಾತಿ ಒಳ ಮೀಸಲಾತಿಯನ್ನು ಅಳವಡಿಸಿಕೊಂಡು ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕೆಂದೂ ಸಹ ಹಾಗು ಕಾಲಬದ್ಧವಾಗಿ (TimeBound) ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು

ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ಆಯ್ಕೆಪ್ರಾಧಿಕಾರಗಳಿಗೆ ಸೂಚಿಸಲಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸರಕಾರದ ಅಧೀನ ಕಾರ್ಯದರ್ಶಿಗಳು ಹೊರಡಿಸಿದ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

# ಗುರುಮಠಕಲ್ ತಾಲೂಕು ಪ್ರಜಾಸೌಧ ಅಡಿಗಲ್ಲು

ಯಾದಗಿರಿ : ಸೆ 06 : ಕಂದಾಯ ಇಲಾಖೆ ವತಿಯಿಂದ ಗುರುಮಠಕಲ್ ತಾಲೂಕು ಪ್ರಜಾಸೌಧ ಅಡಿಗಲ್ಲು ಕಾರ್ಯಕ್ರಮವನ್ನು ಗುರುಮಠಕಲ್ 2025ರ ಸೆಪ್ಟೆಂಬರ್ 7ರ ಭಾನುವಾರ ರಂದು ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪೂರ ಹಾಗೂ ಕಂದಾಯ ಸಚಿವರಾದ ಶ್ರೀ ಕೃಷ್ಣ ಬೈರೆಗೌಡ, ವಸತಿ ಸಚಿವರು ಬಿ.ಜೆಡ್.ಜಮೀರ ಅಹ್ಮದ ಖಾನ್, ಜೇವರ್ಗಿ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಡಾ.ಅಜಯಸಿಂಗ್ ಮತ್ತು ಕರ್ನಾಟಕ ವಿಧಾನ ಪರಿಷತ್ತು ವಿರೋಧ ಪಕ್ಷದ ನಾಯಕ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ, ಬೆಂಗಳೂರು ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ಅಧ್ಯಕ್ಷರು ಶ್ರೀ ಬಾಬುರಾವ ಚಿಂಚನಸೂರ ಅವರ ಗುರುಮಠಕಲ್ ತಾಲೂಕು ಪ್ರಜಾಸೌಧ ಅಡಿಗಲ್ಲು ಕಾರ್ಯಕ್ರಮ ಘನ ಉಪಸ್ಥಿತಿಯಲ್ಲಿ ನೆರವೇರಲಿದೆ.

ಗುರುಮಠಕಲ್ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಶರಣಗೌಡ ಕಂದಕೂರ ಅವರು ಕಾರ್ಯಕ್ರಮ ಉದ್ಘಾಟಕರು ಹಾಗೂ ಅಧ್ಯಕ್ಷತೆ ವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯರು ಶ್ರೀ ರಾಧಾಕೃಷ್ಣ ದೊಡ್ಡಮನಿ, ವಿಧಾನ ಪರಿಷತ್ತು ಸದಸ್ಯರು ಶ್ರೀ ಬಿ.ಜಿ.ಪಾಟೀಲ್, ಡಾ.ಚಂದ್ರಶೇಖರ ಬಿ.ಪಾಟೀಲ್, ಶ್ರೀ ಶಶೀಲ್ ಜಿ.ನಮೋಶಿ, ಗುರುಮಠಕಲ್ ಪುರಸಭೆ ಅಧ್ಯಕ್ಷರು ಶ್ರೀಮತಿ ಜಯಶ್ರೀ ಆರ್.ಪೋ.ಪಾ. ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಸರ್ವರಿಗೂ ಆದರದ ಸುಸ್ವಾಗತವನ್ನು ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್, ಬೆಂಗಳೂರು ಕರ್ನಾಟಕ ಗೃಹ ಮಂಡಳಿ ಗೃಹ ಆಯುಕ್ತರು ಶ್ರೀ ಕೆ.ಎ.ದಯಾನಂದ, ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್, ಬೆಂಗಳೂರು ಕರ್ನಾಟಕ ಗೃಹ ಮಂಡಳಿ ಮುಖ್ಯ ಅಭಿಯಂತರರು ಶ್ರೀ ರವಿಕುಮಾರ ಕೆ.ಟಿ, ಗುರುಮಠಕಲ್ ತಹಸೀಲ್ದಾರರು ಶಾಂತಗೌಡ ಬಿರಾದಾರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಾರ್ಜ್ ಫರ್ನಾಂಡಿಸ್ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ನೇಮಕ: ಸನ್ಮಾನ



ಬೀದರ, ಸೆ.06 : ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಸಂಪಾದಕರಾಗಿರುವ ಜಾರ್ಜ್ ಫರ್ನಾಂಡಿಸ್ ಅವರಿಗೆ ಇಂದು ಶಾಲಾ ಹೋದಿಸಿ ಸನ್ಮಾನಿಸಲಾಯಿತು.

ಇಂದು ಬೀದರ್‌ನ ಪತ್ರಿಕಾ ಭಾಗದಲ್ಲಿ ಜರುಗಿದ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ಸಭೆ ನಂತರ ಸನ್ಮಾನಿಸಲಾಯಿತು.

ನಮ್ಮ ಸಂಘದ ಸಹ ಸದಸ್ಯರಾಗಿರುವ ಬೀದರ್ ಟೈಮ್ಸ್ ಪತ್ರಿಕೆಯ ಸಂಪಾದಕರ ಇರುವ ಕಾರಣ ಅವರು ಕಾಂಗ್ರೆಸ್ ಪಕ್ಷದಲ್ಲಿ ಇತ್ತೀಚೆಗೆ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಪ್ರಯುಕ್ತ ಅವರನ್ನು ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ವಿಜಯ್ ಕುಮಾರ್ ಪಾಟೀಲ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಚಿತರ ಶಾಲೋಧಿಸುವ ಸನ್ಮಾನದಲ್ಲಿ ಹಿರಿಯ ಪತ್ರಕರ್ತರಾದ ಸೈಯದ್ ಹಸನ್ ಓಲ್ ಖಾದ್ರಿ. ಮಾಳಪ್ಪ ಅಡಸಾರ, ಅಬ್ದುಲ್ ಕದೀರ್ ಖಾದರ್, ಬಸವರಾಜ್ ಪವಾರ್, ರಾಮಚಂದ್ರ ಭೋಸಲೆ, ಪ್ರದೀಪ ಬಿರಾದರ್, ಸುನಿಲ್ ಕುಲಕರ್ಣಿ, ಅಮರೇಶ್ ಚಿದ್ರೆ, ನಂದು ಕುಮಾರ್, ಜೈ ಕುಮಾರ್ ಇವರುಗಳು ಹಾಜರಿದ್ದರು.



ಕಲಬುರಗಿ: ಉದನೂರ ಹಿರೇಗೌಡ ಲೇಔಟ್ ನಲ್ಲಿರುವ ಅಪ್ಪಾಜಿ ಗುರುಕುಲ ಆಂಗ್ಲ ಮಾಧ್ಯಮ ಶಾಲೆ ವತಿಯಿಂದ. ಗಣೇಶ್ ವಿಸರ್ಜನೆ ಕಾರ್ಯಕ್ರಮ ಬಹು ವಿಜೃಂಭಣೆಯಿಂದ ನಡೆಯಿತು. ಈ ವಿಸರ್ಜನೆ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಭಾಗಮ್ಮ ರಾಜಕುಮಾರ್, ಶಿಕ್ಷಕರಾದ ಅಭಿಲಾಶ್ ರಾಹುಲ್ ರಾಜಕುಮಾರ್ ಗುತ್ತೇದಾರ್, ಅಶ್ವಿನಿ ಅರ್ಚನಾ ಶಾಂತ ಭಾಗ್ಯಶ್ರೀ ಸಾವಿತ್ರಿ ಲತಾ ವೈಷ್ಣವಿ ಶಶಿಕಲಾ ಸ್ವಾತಿ ಸೇರಿದಂತೆ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ವಿದ್ಯಾರ್ಥಿಗಳಿಂದ ಹಾಗೂ ಶಿಕ್ಷಕರಿಂದ ನಡೆದ ನೃತ್ಯ ಕಾರ್ಯಕ್ರಮ ನೋಡುಗರ ಕಣ್ಮನ ಸೆಳೆಯಿತು.

# ಜಿಲ್ಲಾ ಮಟ್ಟದ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆ: ಹೆಸರು ನೋಂದಣಿಗೆ ಸೆ. 8 ರಂದು ಕೊನೆಯ ದಿನ

ಕಲಬುರಗಿ,ಸೆ.06-ಅಕ್ಟೋಬರ್ 01ರಂದು ವಿಶ್ವಹಿರಿಯ ನಾಗರಿಕರ ದಿನಾಚಾರಣೆ ಅಂಗವಾಗಿ ಹಿರಿಯ ನಾಗರಿಕರಿಗಾಗಿ ಈ ಕೆಳಕಂಡಂತೆ ಜಿಲ್ಲಾ ಮಟ್ಟದ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಲಬುರಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ವಯೋಮಿತಿ (60 ರಿಂದ 69 ವರ್ಷ ಮತ್ತು 70 ವರ್ಷ ಹಾಗೂ ಮೇಲ್ಪಟ್ಟವರಿಗೆ) (ಪುರುಷ/ಮಹಿಳೆ) ಏಕಪಾತ್ರ ಅಭಿನಯ, ಗಾಯನ ಸ್ಪದ-ರ್ಿ ಸಾಂಸ್ಕೃತಿಕ ಸ್ಪರ್ಧೆಯನ್ನು ಹಾಗೂ ವಯೋಮಿತಿ (60 ರಿಂದ 70 ವರ್ಷ, 70ವರ್ಷ ಮೇಲ್ಪಟ್ಟವರಿಗೆ) (ಪುರುಷ/ಮಹಿಳೆ) ಬಿರುಸಿನ ನಡಿಗೆ, ಮ್ಯೂಸಿಕಲ್ ಚೇರ್ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಹಿರಿಯ ನಾಗರಿಕರು ವಯೋಮಿತಿ 60 ವರ್ಷ ಮೇಲ್ಪಟ್ಟ ವಯಸ್ಸಿನವರಾಗಿರಬೇಕು. ವಯಸ್ಸಿನ ದೃಢೀಕರಣ-ಕ್ಕೆ ಸಂಬಂಧಿಸಿದಂತೆ ಅಗತ್ಯ ದಾಖಲೆಯನ್ನು ಸಲ್ಲಿಸಬೇಕು.

ಆಸಕ್ತಿಯುಳ್ಳ ಅರ್ಹ ಹಿರಿಯ ನಾಗರಿಕರು ಎಲ್ಲಾ ಅಗತ್ಯ ಮಾಹಿತಿಯೊಂದಿಗೆ 2025ರ ಸೆಪ್ಟೆಂಬರ್ 8ರ ಸಂಜೆ 5 ಗಂಟೆಯೊಳಗಾಗಿ ಕಲಬುರಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಜಿಲ್ಲಾ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಈ ಸ್ಪರ್ಧೆಗಳನ್ನು ಇದೇ ಸೆಪ್ಟೆಂಬರ್ 9 ರಂದು ಕಲಬುರಗಿ ನಗರದ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣ/ವಿಜಯ ವಿದ್ಯಾಲಯ ಆವರಣದಲ್ಲಿ ಆಯೋಜಿಸಲಾಗುತ್ತದೆ.

ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ-ಖ್ಯೆ:08472-235222, ಪ್ರಕಾಶ ಜಾಧವ-9972563646 ಸ್ವಪ್ನಾ ಪಾಟೀಲ-7411612044 ಹಾಗೂ ಪ್ರಕಾಶದ್ಯಾಬೇರಿ8217274757 ಇವರ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಲು ಹಾಗೂ ಕಚೇರಿ ವೇಳೆಯಲ್ಲಿ ಕರೆ ಮಾಡಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ರಾಜ್ಯದ ಪೌರಾಡಳಿತ ಸಚಿವರ ಪ್ರವಾಸ

ಕಲಬುರಗಿ,ಸೆ.06-ರಾಜ್ಯದ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ಬೆಂಗಳೂರಿನಿಂದ ವಿಮಾನದ ಮೂಲಕ ಸೆಪ್ಟೆಂಬರ್ 8 ರಂದು ಸೋಮವಾರ ಬೆಳಿಗ್ಗೆ 11.45 ಗಂಟೆಗೆ ಕಲಬುರಗಿಗೆ ಆಗಮಿಸುವರು. ನಂತರ ಅಂದು ಮಧ್ಯಾಹ್ನ 12.30 ಗಂಟೆಗೆ ಆಳಂದ ಪಟ್ಟಣದ ತಡಕಲ್ ರಸ್ತೆಯಲ್ಲಿರುವ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ಭೇಟಿ ನೀಡುವರು. ಮಧ್ಯಾಹ್ನ 12.45 ಗಂಟೆಗೆ ಆಳಂದ ಪಟ್ಟಣದ ದರ್ಗಾ ಬೇಸ್ ಹತ್ತಿರದಲ್ಲಿ ಎಸ್.ಬಿ.ಎಮ್.2.0 ರಡಿಯಲ್ಲಿ ನಿರ್ಮಾಣವಾದ ಶೌಚಾಲಯಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 1 ಗಂಟೆಗೆ ಆಳಂದ ಶ್ರೀರಾಮ ಮಾರ್ಕೆಟ್ ಆವರಣದಲ್ಲಿ ಇಂದಿರಾ ಕ್ಯಾಂಟೀನ್ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು.

# ಬಿಜೆಪಿ ಮುಖಂಡ ಸುರೇಶ ಕುಂಬಾರ ಕಾಂಗ್ರೆಸ್ ಸೇರ್ಪಡೆ



**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್:**

ಬಿಜೆಪಿ ಮುಖಂಡ, ಚಿಟಗುಪ್ಪ ಪುರಸಭೆ ಮಾಜಿ ಸದಸ್ಯ ಸುರೇಶ ಕುಂಬಾರ ಬಿಜೆಪಿ ಪಕ್ಷ ತೊ–ರೆದು ಹುಮನಾಬಾದ್ ಪಟ್ಟಣದ ಮಾಜಿ ಸಚಿವರ ಗೃಹ ಕಚೇರಿಯಲ್ಲಿ ಶುಕ್ರವಾರ ಮಾಜಿ ಸಚಿವ ರಾಜಶೇಖರ ಪಾಟೀಲ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಮಾಜಿ ಸಚಿವರ ಗೃಹ ಕಚೇರಿಯಲ್ಲಿ ಸುರೇಶ ಕುಂಬಾರಗೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಹಾಗೂ ಎಂಎಲ್ಸಿ ಡಾ. ಚಂದ್ರಶೇಖರ ಪಾಟೀಲ್ ಕಾಂಗ್ರೆಸ್ ಪಕ್ಷದ ಧ್ವಜ ನೀಡಿ ಸ್ವಾಗತಿಸಿದರು. ಬಳಿಕ ಸುರೇಶ ಕುಂಬಾರ ಮಾತನಾಡಿ, ಕಾಂಗ್ರೆಸ್ ಸರಕಾರದ ಜನಪರ ಯೋಜನೆ ಮತ್ತು ಮಾಜಿ ಸಚಿವ ರಾಜಶೇಖರ ಪಾಟೀಲ್ ಅವರ ನಿಸ್ವಾರ್ಥ ಸೇವೆಗೆ ಮೆಚ್ಚಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ ಆಗುತ್ತಿದ್ದೇನೆ ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್, ಜಿಲ್ಲಾ ಪಂಚಾಯತ ಮಾಜಿ ಸದಸ್ಯ ವೀರಣ್ಣಾ ಪಾಟೀಲ್ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಫ್ಸರಮಿಯ, ಪುರಸಭೆ ಅಧ್ಯಕ್ಷ ದಿಲೀಪಕುಮಾರ ಬಗದಲಕರ್, ಉಪಾಧ್ಯಕ್ಷ ನಸೀರಖಾನ್, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಮಲ್ಲಿಕಾರ್ಜುನ್ ಮಾಶಟ್ಟಿ, ಪುರಸಭೆ ಮಾಜಿ ಸದಸ್ಯ ಮಹೇಶ ಅಗಡಿ, ಬಾಬಾ ಆರ್ಸಿಸಿ, ಅಣ್ಣೇಪ್ಪ ವರನಾಳ, ಸಿದ್ದು ಪಾಟೀಲ್ ಬೆಳಕೇರಾ, ವೈಜಿನಾಥ ದಳಪತಿ, ರಾಮಣ್ಣ ಚೀನಕೇರಾ ಸೇರಿ ಅನೇಕರಿದ್ದರು.

# ಜೀವ ರಕ್ಷಣೆಗೆ ರಕ್ತದಾನ ಅವಶ್ಯಕ



**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್:**

ದಾನಗಳಲ್ಲಿ ರಕ್ತದಾನ ಮಹಾದಾನ. ಜನರ ಜೀವ ರಕ್ಷಣೆಗೆ ರಕ್ತ ಅತ್ಯವಶ್ಯಕವಾಗಿದ್ದು, ರಕ್ತದ ಅವಶ್ಯಕತೆ ಇರುವ ವ್ಯಕ್ತಿಗಳಿಗೆ ರಕ್ತದಾನ ಮಾಡುವುದರ ಮೂಲಕ ಎಲ್ಲರೂ ಜನರ ಅಮೂಲ್ಯವಾದ ಜೀವ ರಕ್ಷಣೆಗೆ ಮುಂದಾಗಬೇಕು ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದರು. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಗುಲಷಾನ್ – ಈ – ಉರ್ದು ಅದಬ್ ವೆಲ್ಫರ್ ಮತ್ತು ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ರಕ್ತದಾನ ಶಿಬಿರ ಉದ್ದೇಶಿಸಿ ಮಾತನಾಡಿದರು. ಮಾನವನಿಗೆ ಆಕಸ್ಮಿಕ ಸಂದರ್ಭಗಳಲ್ಲಿ ತುರ್ತಾಗಿ ಅಗತ್ಯವಾಗಿ ಬೇಕಾಗುವ ರಕ್ತವು ಅಮೂಲ್ಯ ಜೀವ ಉಳಿಸುವ ವಸ್ತುವಾಗಿದೆ. ಇದನ್ನರಿತು ಸಮಾಜದ ಪ್ರತಿಯೊಬ್ಬ ಆರೋಗ್ಯವಂತರು ರಕ್ತದಾನ ಮಾಡುವ ಮೂಲಕ ಮಾದರಿಯಾಗಬೇಕು. ರಕ್ತದಾನ ಮಾಡಿದರೆ ತಮ್ಮ ದೇಹದ ಕೊಬ್ಬಿನಾಂಶ ಕಡಿಮೆಯಾಗಿ ಹೊಸ ರಕ್ತ ಉತ್ಪತ್ತಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ್, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಫ್ಸರಮಿಯ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಮಲ್ಲಿಕಾರ್ಜುನ್ ಮಾಳಶಟ್ಟಿ, ತಬ್ರೇಜ್ ಶಮ್ಸ್, ಮಹ್ಮದ್ ಹುಸೇನ್, ಮಹ್ಮದ್ ಅಲಿಯೋದ್ಧಿನ್, ಉಮೇರ್ ಪಾಷಾ, ಮಹ್ಮದ ಮಾಜೀದ್, ಮಹ್ಮದ್ ಸೀರಾಜ್, ಮಹ್ಮದ್ ಅಸ್ವಾ, ಮಹ್ಮದ್ ಸುಲ್ತಾನ್, ಮಹ್ಮದ್ ಮೊಸೀನ್, ಅಜರ್ ಮುಸ್ತಾಫಾ, ಶೇಖ್ ಇಬ್ರಾಹಿಂ, ಮಹ್ಮದ್ ಮೊಸೀನ್, ಎಂಡಿ ಮಜರ್ ಇದ್ದರು.

# ಬಸವಕಲ್ಯಾಣ ಹಾಗೂ ಹುಲಸೂರ ತಾಲೂಕ ಮಟ್ಟದ ಶಿಕ್ಷಕರ ದಿನಾಚರಣೆ



**ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ :**

ಸೆ 6 ಇಲ್ಲಿನ ರಥ ಮೈದಾನದ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಬಸವಕಲ್ಯಾಣ ಹಾಗೂ ಹುಲಸೂರ ತಾಲೂಕ ಮಟ್ಟದ ಶಿಕ್ಷಕರ ದಿನಾಚರಣೆ ಸಮಿತಿ ವತಿಯಿಂದ 64ನೇಯ ಶಿಕ್ಷಕರ ದಿನಾಚರಣೆಯ ಕಾರ್ಯಕ್ರಮ ಜರುಗಿತು. ದಿವ್ಯ ಸಾನಿಧ್ಯ ಹಾರಕೂಡದ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಡಾ ಚನ್ನವೀರ ಶಿವಾಚಾರ್ಯರು ಉದ್ಘಾಟಿಸಿದರು. ಹುಮನಾಬಾದ ಶಾಸಕರಾದ ಡಾ ಸಿದ್ದಲಿಂಗಪ್ಪ ಪಾಟೀಲ. ಬಿಇಒ ಸಿದ್ದವೀರಯ್ಯ ರುದ್ನೂರ್. ತಹಸೀಲ್ದಾರರಾದ ದತ್ತಾತ್ರೇಯ ಗಾದಾ. ಕ್ಷೇತ್ರ ಸಮನ್ವಯಾಧಿಕಾರಿ ಪ್ರಭಾಕರ ಕಳಮಾಸೆ. ಅಕ್ಷರದಾಸೋಹ ಸಾಹಯಕ ನಿರ್ದೇಶಕರಾದ ಸಂಜುಕುಮಾರ ಕಾಂಗೆ. ಶಿಕ್ಷಕಿ ಶಾಂತಬಾಯಿ ಯರನಳೆ. ಶಿವಕುಮಾರ ಜಡಗೆ. ಮಹೇಶ್ ಮುಳೆ ಮಾತನಾಡಿದರು. ಹುಲಸೂರಿನ ತಹಸೀಲ್ದಾರ ಶಿವಾನಂದ ಮೇತ್ರೆಣಟಿಜಜಜಿಟಿಜಜ. ಸಾವಿತ್ರಿ ಸಲಗರ. ಸೂರ್ಯಕಾಂತ ಪಾಟೀಲ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬಸವಕಲ್ಯಾಣ. ತಾಲ್ಲೂಕ ಅಧ್ಯಕ್ಷ ಸಂತೋಷ ಅಕ್ಕಣ್ಣ. ಹುಲಸೂರು ಅಧ್ಯಕ್ಷರಾದ ರಾಜಪ್ಪ ನಂದೋಡೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಬದ್ಧ



**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ :**

ಬೀರಲಿಂಗೇಶ್ವರ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಸಹಕಾರ ನೀಡಲಾಗುವುದು ಎಂದು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ್ ಹೇಳಿದರು.

ತಾಲೂಕಿನ ಮುದ್ನಾಳ ಗ್ರಾಮದ ಹೊರವಲಯದ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಅನ್ನದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಮುದ್ನಾಳ ಗ್ರಾಮದ ಭಕ್ತರ ಬೇಡಿಕೆಯಂತೆ ಎಂಎಲ್ ಸಿ ಡಾ. ಚಂದ್ರಶೇಖರ ಪಾಟೀಲ್ ಹಾಗೂ ಭೀಮರಾವ ಪಾಟೀಲ್ ಅವರಿಗೆ ಮನವಿ ಮಾಡುವ ಮೂಲಕ ದೇವಸ್ಥಾನದ ಅಭಿವೃದ್ಧಿಗೆ ಅನುದಾನ ತಂದು ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ವೀರಪ್ಪ ಮಾನಕರೆ, ರಾಜು ಪಾಟೀಲ್, ವೀರಪ್ಪ ಪೂಜಾರಿ, ಶಿವಕುಮಾರ ಪೂಜಾರಿ, ಕರಣ ಪೂಜಾರಿ, ಶಿವರಾಜ ಪೂಜಾರಿ, ಚಂದ್ರಕಾಂತ ಪೂಜಾರಿ, ದಯಾನಂದ ಪೂಜಾರಿ, ಬಸಪ್ಪ ಪೂಜಾರಿ, ರವಿ ಪೂಜಾರಿ, ರಾಜು ಪೂಜಾರಿ ಇದ್ದರು.

## ಸೆಪ್ಟೆಂಬರ್ 9 ರಂದು ಲಿಂ.ಪೂಜ್ಯ ಶ್ರೀ ಶಿವಯೋಗಿ ಸ್ವಾಮೀಜಿಗಳ 33ನೇ ಸ್ಮರಣೆ ಕಾರ್ಯಕ್ರಮ



**ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:**

ಇಲ್ಲಿನ ಶರಣ ಉರಿಲಿಂಗ ಪೆದ್ದಿ ಶಾಖಾ ಮಠದಲ್ಲಿ ಸೆಪ್ಟೆಂಬರ್ 9 ರಂದು ಲಿಂ.ಪೂಜ್ಯ ಶ್ರೀ ಶಿವಯೋಗಿ ಸ್ವಾಮೀಜಿಗಳ 33ನೇ ಸ್ಮರಣೆ ಮತ್ತು ಉರಿಲಿಂಗ ಪೆದ್ದಿ ಮಠ ಬೇಲೂರಿನ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಪಂಚಾಕ್ಷರಿ ಸ್ವಾಮಿಜಿ ಅವರ 52ನೇ ಜನ್ಮದಿನದ ಅಂಗವಾಗಿ ಬೆಳಿಗ್ಗೆ 10 ಗಂಟೆಯಿಂದ ಪೂಜೆ, ಉಪನ್ಯಾಸ, ಶ್ರೀ ಗಳ ಆಶೀರ್ವಾದದ ಆಶೀರ್ವಚನ ಮತ್ತು ಮಹಾಪ್ರಸಾದ ತ್ರಿಪೂರಾಂತ ಶ್ರೀ ಉರಿಲಿಂಗ ಪೆದ್ದಿ ಶಾಖಾ ಮಠದಲ್ಲಿ ಜರುಗುವುದು ಎಂದು ಮಹಾಲಿಂಗ ದೇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**IN THE C/09/2025OURT OF SENOIR CIVIL JUDGE AND JMFC COURT HUMNABAD**

**Crl.MISC No . 126/2025**

1. Hanmanthappa S/O late Rudrappa Age 63 years, occu: Agril,
2. Maisanna S/o late Rudrappa Age 51 years, occu: Agril,

Both R/o Bemalkheda Tq. Chitaguppa, Dist Bidar.

…Petitioner.

**--V/S—**

The Thasildar Chitaguppa.

…Respondents.

Petition Under section 13(3) Birth & Death Registration Act -1969

**PAPER PUBLIC ATION**

Whereas the above named petitioner has filed the petition under section 13(3) of Birth and Death Registration Act 1969 praying this Honarable court to issue Death certificate of RUDRAPPA S/O LALAPPA .The petitioners are Sons of deceased and his name shown as abhove. RUDRAPPAS/O LALAPPA was died on 08.01.1983. The petitionerd are claiming the death certificate of their Father for transfer of property and other official purpose and home record. Therefore it is herby proclaimed that if any person or persons have got any objection in this regard she/they may approach to this Honorable court on 16-09-2025 at 11.00 AM in person or authorized pleader to answer such clauim otherwise the matter will be heard and determined in your absence as per law.

Given under my hand seal of the Court on this 06/09/2025

**// By Order Of the Court//**
**Chief Ministerial officer**
**Senior Civil judge & Court humnabad.**

# ಚಿಟಗುಪ್ಪದಲ್ಲಿ ಸಾಮರಸ್ಯ ಒಡಮೂಡಿಸಿದ ಈದ್ ಮಿಲಾದ್ ಹಬ್ಬ





ಈದ್ ಮಿಲಾದ ಹಬ್ಬದ ನಿಮಿತ್ಯ ಜರುಗಿದ ಮೆರವಣಿಗೆಯಲ್ಲಿ ಭಾಗವಹಿಸಿದ ಮುಸ್ಲಿಂ ಕಮಿಟಿಯ ಪದಾಧಿಕಾರಿಗಳಿಗೆ ಮತ್ತು ಪ್ರಮುಖರಿಗೆ ಹಿಂದೂ ಸಮುದಾಯದವರಿಂದ ಸನ್ಮಾನಿಸಿದರು. ಪಟ್ಟಣದಲ್ಲಿ ಹಿಂದೂ ಮುಸ್ಲಿಂ ಭಾಯಿ ಭಾಯಿ ಎಂದು ಸಂದೇಶ ಸಾರಿದರು.

**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಇಸ್ಲಾಂ ಧರ್ಮದ ಕೊನೆಯ ಪ್ರವಾದಿ ಮುಹಮ್ಮದ್ ಪೈಗಂಬರ್ ಅವರ 1500ನೇ ಜನ್ಮದಿನದಂದು ಆಚರಿಸುವ ಈದ್ ಮಿಲಾದ್ ಹಬ್ಬವನ್ನು ಸಡಗರ ಸಂಭ್ರಮದಿಂದ ಮುಸ್ಲಿಂ ಸಮುದಾಯದವರು ಆಚರಿಸಿದರು. ಶುಕ್ರವಾರ ಪಟ್ಟಣದಲ್ಲಿ ಈದ್–ಮಿಲಾದ್ ಹಬ್ಬದಲ್ಲಿ ಶಾಸಕ ಡಾ. ಸಿದ್ದು ಪಾಟೀಲ್ ಭಾಗವಹಿಸಿ ಮಾತನಾಡಿ, ಮುಸ್ಲಿಂ ಸಮುದಾಯದವರಿಗೆ ಈದ್ ಮಿಲಾದ ಹಬ್ಬ ಅತೀ ಪವಿತ್ರವಾದ ಹಬ್ಬವಾಗಿದೆ ಈ ಹಬ್ಬದ ಅಂಗವಾಗಿ ಸರ್ವ ಧರ್ಮದ ಜನತೆ ಸೇರಿಸಿ ಈದ್ ಮಿಲಾದ್ ಹಬ್ಬ ಸೌಹಾರ್ದತೆಯ ಸಂಕೇತವಾಗಿದೆ ಎಂದರು. ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ್ ಪಾಟೀಲ್ ಮಾತನಾಡಿ, ಈದ್ ಮಿಲಾದ್ ಹಬ್ಬಕ್ಕೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಅವರು ಕಡ್ಡಾಯವಾಗಿ ಪಾಲ್ಗೊಳ್ಳುತ್ತಿದ್ದರು. ನಾನು ಈ ಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವು ನನ್ನ ಸುದೈವ ಮಹಮ್ಮದ್ ಪೈಗಂಬರ್ ಅವರ ಆದರ್ಶ ತತ್ವಗಳು ಜೀವನದಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಸಾಮರಸ್ಯ ವಡಮುಡಿಸಲು ಸಹಾಯವಾಗುತ್ತದೆ ಎಂದರು. ಮಲ್ಲಿಕಾರ್ಜುನ ಪಾಟೀಲ್ ಮಾತನಾಡಿ, ಈದ್ ಮಿಲಾದ ಹಬ್ಬ ಹಿಂದೂ ಮುಸ್ಲಿಂ ಸಮುದಾಯದವರು ಒಂದೇ ಎಂಬ ಭಾವನೆಗೆ ಈ ಪವಿತ್ರ ಈದ್ ಮಿಲಾದ ಹಬ್ಬವಾಗಿದೆ ಎಂದರು. ರಾಶೀದ್ ಪಟೇಲ್ ಮಾತನಾಡಿ, ಚಿಟಗುಪ್ಪ ಪಟ್ಟಣ ಸೌಹಾರ್ದತೆಗೆ ಹೆಸರುವಾಸಿಯಾಗಿದೆ ಹಿಂದೂ ಮತ್ತು ಮುಸ್ಲಿಂ ಬಾಂಧವರು ಪ್ರತಿಯೊಂದು ಹಬ್ಬ ಹರಿದಿನಗಳಲ್ಲಿ ಒಗ್ಗಟ್ಟಾಗಿ ಆಚರಿಸಿ ಜಿಲ್ಲೆಗೆ ಹೊಸ ಸಂದೇಶ ಕಳಿಸುವಂತಹ ಪಟ್ಟಣವಾಗಿದೆ ಎಂದರು. ಈದ್ ಮಿಲಾದ ಹಬ್ಬದ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳನ್ನು ಹಾಗೂ ಹಲವು ಸ್ಥಳಗಳನ್ನು ದೀಪಗಳಿಂದ ಅಲಂಕರಿಸಲಾಗಿತ್ತು. ಪಟ್ಟಣದ ಪ್ರಸಿದ್ಧ ದರ್ಗಾ ಸೀಲಾರೆ ಮಕ್ದುಮ ದರ್ಗದಿಂದ ಪ್ರಾರಂಭಗೊಂಡು ಪ್ರಮುಖ ರಸ್ತೆಗಳ ಮೂಲಕ ನಬೀಖಾನಾದ ವರೆಗೆ ಅದ್ಧು–ರಿಯಾಗಿ ಮೆರವಣಿಗೆ ಜರುಗಿತ್ತು. ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ದಿಲೀಪಕುಮಾರ್ ಬಗ್ದಲಕರ್, ಉಪಾಧ್ಯಕ್ಷ ನಸೀರ್ ಖಾನ್, ನಸೀಮ್ ಪಟೇಲ್, ಸಿಪಿಐ ಶ್ರೀನಿವಾಸ ಅಲ್ಲಾಪುರ್, ಪಿಎಸ್ಐಗಳಾದ ಬಸಲಿಂಗಪ್ಪ ಎಂ. ಗೋಧಿಹಾಳ, ಮಹಿಂದ್ರಕುಮಾರ್, ಬಾಷುಮಿಯಾ ಕೊಂಚೂರ್, ಪುರಸಭೆ ಸದಸ್ಯರಾದ ಮುಜಾಫರ್ ಪಟೇಲ್, ಬಾಬಾ ಆರ್.ಸಿ.ಸಿ., ನಸಿರ್ ಹಕ್ಕಿಮ್, ರಾಜದೀಪ ಜಾಬಾ, ಹಬ್ಬಿಬ್, ವಿಶಾಲ ಬೋರಳೆ, ತಬ್ಬರೇಜ್, ಪ್ರಮುಖರಾದ ನೂರಇಸ್ಲಾಂ, ಮಹಮ್ಮದ್ ಅಸ್ಲಾಂಮಿಯಾ, ಇಸ್ಮಾಯಿಲ್ ಲಾಥೋಡಿ, ಹುಸೇನ್, ನಿಜಾಮ ಹಕಿಮ್, ಮುತುವಲಿ ಮಹಮ್ಮದ್ ನಜೀರ್ ನಿಯಾಜಿ ಯುಮೋದಾರ್, ಅಖಿಲ, ತೈಸಿನ ನಾಗುರೆ, ಸಲ್ಲಾವುದ್ದೀನ ಸಿದ್ದಿಖಿ, ಸೈಯದ್ ಅಜೀಮ, ಜೀಶಾನ್ ಸಿದ್ದಿಖಿ, ಮೈಯೊಜೋದ್ದಿನ, ಮಖುದ್ದುಮ್, ಖಾಸಿಂ ಉಲ್ ಇರ್ಫಾನ್, ಮಹಮ್ಮದ್ ಅಲಿ ಪಟೇಲ್, ಶಾಮರಾವ ಭುತ್ತಾಳೆ, ಸಚಿನ ಮಠಪತಿ, ರಾಜಗೋಪಾಲ್ ಐನಾಪುರ್, ಪರಮೇಶ ಬಬಡಿ, ಸಾಯಿ ಸಿರ್ಕೆ, ಸಂಗಮೇಶ ಜವಾದಿ, ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಪ್ರಧಾನಮಂತ್ರಿ ಆವಾಸ್ ನಗರ ಯೋಜನೆಯಡಿ ಎಎಚ್‌ಪಿ ಜಿ+3 ಮಾದರಿಯ ವಸತಿ

# ಸಮುಚ್ಛಯದ ಕಾಮಗಾರಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು



**ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಸೆಪ್ಟೆಂಬರ್ 06 (ಕರ್ನಾಟಕ ವಾರ್ತೆ): ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸೆಪ್ಟೆಂಬರ್ 6ರಂದು ಬೆಳಗಿನ ಅವಧಿಯಲ್ಲಿ ರಾಯಚೂರು ಹೊರವಲಯದಲ್ಲಿ ಸಂಚರಿಸಿ ಚಿಕ್ಕಸೂಗುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಏಗನೂರ ಗ್ರಾಮದ ಬಳಿಯಲ್ಲಿ ನಿರ್ಮಾಣವಾಗುತ್ತಿರುವ ಜಿ+3 ಮಾದರಿಯ ವಸತಿ ಸಮುಚ್ಛಯದ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿದರು.

ಪ್ರಧಾನಮಂತ್ರಿ ಆವಾಸ್ ನಗರ ಯೋಜನೆಯ ಎಎಚ್‌ಪಿ ಉಪ ಘಟಕದಡಿ 2419 ಮನೆಗಳು 2021–22 ನೇ ಸಾಲಿನಲ್ಲಿನ ವಸತಿ ಸಮುಚ್ಛಯದ ಕಾಮಗಾರಿಯನ್ನು ಜಿಲ್ಲಾಧಿಕಾರಿಗಳು ಖುದ್ದು ಪರಿಶೀಲಿಸಿದರು.

ಕೇಂದ್ರ ಸರ್ಕಾರದಿಂದ 1.50 ಲಕ್ಷ ಮತ್ತು ರಾಜ್ಯ ಸರ್ಕಾರದಿಂದ 2 ಲಕ್ಷ ಸಬ್ಸಿಡಿ ಸಹಾಯಧನದಡಿ ನಿರ್ಮಾಣವಾಗುತ್ತಿರುವ ಈ ವಸತಿ ಸಮುಚ್ಛಯದಲ್ಲಿ ಜನರಿಗೆ ಅನುಕೂಲವಾಗುವ ಹಾಗೆ ಮೂಲಭೂತ ಸೌಕರ್ಯ ಕಲ್ಪಿಸಲು ಒತ್ತು ಕೊಡಬೇಕು. ಜನ ಬಳಕೆಗೆ ಅನುಕೂಲವಾಗುವ ಹಾಗೆ ಕುಡಿಯುವ ನೀರಿನ ಪೈಪಲೈನ್ ಅಳವಡಿಕೆ, ವೈಜ್ಞಾನಿಕ ಮಾದರಿಯಲ್ಲಿ ಒಳಚರಂಡಿ ಹಾಗೂ ನಿರ್ಮಾಣಕ್ಕೆ ಒತ್ತು ಕೊಡಬೇಕು. ಕಾಮಗಾರಿ ಸ್ಥಳಕ್ಕೆ ನಿಯಮಿತವಾಗಿ ಭೇಟಿ ನೀಡಿ ಪರಿಶೀಲಿಸಬೇಕು. ಶಿಸ್ತುಬದ್ಧವಾದ ಮೇಲ್ವಿಚಾರಣೆ ಮಾಡಬೇಕು ಎಂದು ಅಧಿಕಾರಿಗಳು ಮತ್ತು ಗುತ್ತಿಗೆ ಪಡೆದ ಏಜೆನ್ಸಿ ಹಾಗೂ ಅಭಿಯಂತರರಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ನಗರದಲ್ಲಿ ವಾಸ ಮಾಡಿದ ಬಡವರಿಗೆ ಈ ಯೋಜನೆಯಿಂದ ಒಂದು ಸೂರು ಪಡೆದುಕೊಳ್ಳಲು ಅನುಕೂಲವಾಗಲಿದ್ದು, ಕಾಮಗಾರಿಯಲ್ಲಿ ಗುಣಮಟ್ಟದ ಕಾಯ್ದುಕೊಳ್ಳಬೇಕು. ಮಾರ್ಗಸೂಚಿಯಂತೆ ಗುಣಮಟ್ಟದ ಸಾಮಗ್ರಿ ಬಳಸಬೇಕು ಎಂದು ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಮೊದಲನೇ ಹಂತದಲ್ಲಿ ಒಟ್ಟು 1191 ಮನೆಗಳ ನಿರ್ಮಾಣ ಕಾರ್ಯ ಆರಂಭವಾಗಿದ್ದು ಈ ಪೈಕಿ ಬರುವ ದೀಪಾವಳಿ ವೇಳೆಗೆ 300 ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ನೀಡುವುದಾಗಿ ಸಂಬಂಧಿಸಿದ ಗುತ್ತಿಗೆದಾರರು ಇದೆ ವೇಳೆ ಪ್ರತಿಕ್ರಿಯಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಈರಣ್ಣ ಬಿರಾದಾರ, ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ, ಡಿಯುಡಿಸಿಯ ಸಿಎಲ್‌ಟಿಸಿ ಹಂಪಮ್ಮ ಸೇರಿದಂತೆ ಇನ್ನಿತರರು ಇದ್ದರು.

# ಅಲ್ಪಸಂಖ್ಯಾತರ ಸರಳ ವಿವಾಹಕ್ಕೆ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಬೀದರ,**

ಸೆಪ್ಟೆಂಬರ್.06 (ಕರ್ನಾಟಕ ವಾರ್ತೆ):– 2025–26ನೇ ಸಾಲಿನ ಅಲ್ಪಸಂಖ್ಯಾತ ಸಮುದಾಯದವರ ಸರಳ ವಿವಾಹಕ್ಕೆ ಸಂಬಂಧಿಸಿದಂತೆ, ಮಾನ್ಯ ಮುಖ್ಯಮಂತ್ರಿಗಳು 2025–26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 222 ರಲ್ಲಿ "ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದವರ ಸರಳ ವಿವಾಹಕ್ಕೆ ಪ್ರೋತ್ಸಾಹ ನೀಡಲು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುವ ಸಮೂಹ ವೆಚ್ಚಗಳಿಗಾಗಿ ಪ್ರತಿ ಜೋಡಿಗೆ 50000 ರೂ ನೀಡಲಾಗುವುದು" ಎಂದು ಘೋಷಿಸಿರುತ್ತಾರೆ.

ಮುಂದುವರೆದು, ಸರ್ಕಾರದ ಆದೇಶದಲ್ಲಿ 2025–26ನೇ ಸಾಲಿನ ಆಯವ್ಯಯ ಭಾಷಣದ "ಕಂಡಿಕೆ ಸಂಖ್ಯೆ 222 ರಲ್ಲಿ ಘೋಷಿಸಿರುವಂತೆ" ಆರ್ಥಿಕವಾಗಿ ಹಿಂದುಳಿದಿರುವ ಅಲ್ಪಸಂಖ್ಯಾತ ಸಮುದಾಯದವರ ಸರಳ ವಿವಾಹಕ್ಕೆ ಪ್ರೋತ್ಸಾಹ ನೀಡಲು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುವ ಸಮೂಹ ವಿವಾಹಗಳ ವೆಚ್ಚಗಳಿಗಾಗಿ ಪ್ರತಿ ಜೋಡಿಗೆ ರೂ.50 ಸಾವಿರ ನೀಡುವ ಕಾರ್ಯಕ್ರಮವನ್ನು ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಛೇರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೀದರ, ಮೌಲಾನಾ ಆಜಾದ ಭವನ, ಗುರುನಾನಕ ಝಿರಾ ದಿಂದ ಚಿಕ್‌ಪೇಟ ರಿಂಗ್ ರಸ್ತೆ, ಬೀದರ–585403 ಗೆ ಅಥವಾ ದೂರವಾಣಿ ಸಂಖ್ಯೆ: 80482–295210 ಗೆ ಸಂಪರ್ಕಿಸಬಹುದಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವಿವಿಧ ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಜಿಲ್ಲೆ ಸಹಾಯವಾಣಿ: ಔರಾದ್ –ಬಿ 6361879744, ಮಾಹಿತಿ ಕೇಂದ್ರ 9972875868, ಬಸವಕಲ್ಯಾಣ: 9739438240 ಮಾಹಿತಿ ಕೇಂದ್ರ ಸಹಾಯವಾಣಿ 9743037911, ಭಾಲ್ಕಿ 9739438240 ಮಾಹಿತಿ ಕೇಂದ್ರ ಸಹಾಯವಾಣಿ 7760601867, ಬೀದರ 8660072584 ಮಾಹಿತಿ ಕೇಂದ್ರ ಸಹಾಯವಾಣಿ 9036642536, ಹುಮನಾಬಾದ್ 6361879744, ಮಾಹಿತಿ ಕೇಂದ್ರ ಸಹಾಯವಾಣಿ 6360685910 ಹಾಗೂ ಅಲ್ಪಸಂಖ್ಯಾತರ ರಾಜ್ಯ ಸಹಾಯವಾಣಿ–8277799990 ಗೆ ಸಂಪರ್ಕಿಸಬಹುದಾಗಿದೆ ಎಂದು ಬೀದರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೆಚ್.ಐ.ವಿ/ಏಡ್ಸ್ ಕುರಿತು ಅರಿವು ಮಾಸಾಚರಣೆ ನಿಮಿತ್ಯ ಬೈಕ್ ರ್‍ಯಾಲಿ ಸೆ.9ಕ್ಕೆ

**ಮಲ್ಲಮ್ಮ ನುಡಿ ವಾರ್ತೆ ಬೀದರ,**

ಸೆಪ್ಟೆಂಬರ್.06 (ಕರ್ನಾಟಕ ವಾರ್ತೆ):– ಜಿಲ್ಲಾ ಮಟ್ಟದಲ್ಲಿ ಹೆಚ್.ಐ.ವಿ/ಏಡ್ಸ್ ಕುರಿತು ಅರಿವು ಮಾಸಾಚರಣೆಯ ಪ್ರಯುಕ್ತ ದಿನಾಂಕ : 09–09–2025 ರಂದು ಬೆಳಗ್ಗೆ : 11.00 ಗಂಟೆಗೆ ಸ್ಥಳ : 2 ನೇ ಗೇಟ್, ನೆಹರು ಕ್ರಿಡಾಂಗಣದಿಂದ ಬಿ.ವಿ.ಬಿ ಕಾಲೇಜ್ ಗೇಟ್ ಎದುರಿನ ವರೆಗೆ ಬೈಕ್ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿದೆ. ಹಿರಿಯ ಸಿವಿಲ ನ್ಯಾಯಧೀಶರು ಹಾಗೂ ಬೀದರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಾಶ ಅರ್ಜುನ ಬನಸೋಡೆ, ಬೈಕ್ ರ್‍ಯಾಲಿಯ ಉದ್ಘಾಟನೆಯನ್ನು ಮಾಡಲಿದ್ದಾರೆಂದು ಬೀದರ ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕ ಜಿಲ್ಲಾ ಕಾರ್ಯಕ್ರಮಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನಮನ ಗೆದ್ದ ಕಲಾವಿದ :ಶಂಕರಯ್ಯ ಸ್ವಾಮಿ



ಸುರಪುರ : ತಾಲೂಕಿನ "ನರಸಿಂಗಪೇಟೆ" ಗ್ರಾಮದಿಂದ ಬಂದ ಕಲಾತ್ಮಕ ಪ್ರತಿಭೆ ಶಂಕರಯ್ಯ ಸ್ವಾಮಿಯವರು, ತಮ್ಮ ವಿಭಿನ್ನ ಪ್ರತಿಭೆಯಿಂದ ಕನ್ನಡ ನಾಟಕ ಹಾಗೂ ವಿಡಿಯೋ ಕಲೆಯಲ್ಲಿ ವಿಶಿಷ್ಟಸ್ಥಾನಗಳಿಸಿದ್ದಾರೆ.ಡಾ.ರಾಜ್ ಕುಮಾರ್ ಮತ್ತು ವಿಷ್ಣುವರ್ಧನ್ ಅವರ ನೆನಪಿನಲ್ಲಿ ಸೃಷ್ಟಿಸಿದ ಭಾವಪೂರ್ಣ ವಿಡಿಯೋಗಳು, ಸಾಮಾಜಿಕಮಾಧ್ಯಮಗಳಲ್ಲಿಅಪಾರ ಜನಪ್ರಿಯತೆ ಪಡೆದಿವೆ. ಮಿಮಿಕ್ರಿ, ನೃತ್ಯ, ಅಭಿನಯ ಹಾಗೂ ಗಾನದ ಸಂಯೋಜನೆಯ ಮೂಲಕ,ಅವರು ಈ ದಿಗ್ಗಜರನ್ನು ನವ ತಲೆಮಾರಿಗೆ ಪರಿಚಯಿಸುವ ಮಹತ್ವದ ಕೆಲಸ ಮಾಡುತ್ತಿದ್ದಾರೆ.

ತಮ್ಮ ಸರಳ ವ್ಯಕ್ತಿತ್ವ, ನಿಷ್ಠೆ ಹಾಗೂ ಸಮಾಜಮುಖಿದೃಷ್ಟಿಕೋನದೊಂದಿಗೆ, ಬೀದಿನಾಟಕಗಳಮೂಲಕಸಾವಿರಾರು ಪ್ರೇಕ್ಷಕರ ಮನಸ್ಸುಗೆದ್ದಿರುವ ಅವರು, ನಾಟಕ ವೇದಿಕೆಯಲ್ಲಿ ಮಾತ್ರವಲ್ಲ, ಜನಮನದಲ್ಲಿಯೂ ದಪ್ಪ ಹೆಜ್ಜೆ ಹಾಕಿದ್ದಾರೆ. ಅವರ ಶ್ರಮ, ನಿಷ್ಠೆ ಹಾಗೂ ಕಲಾತ್ಮಕ ದೃಷ್ಟಿಕೋನವು, ಕನ್ನಡನಾಟಕಮತ್ತುಕಲೆಗೆನಿಜವಾದ ಸೇವೆಯಾಗಿ ಪರಿಗಣಿಸಬಹುದು.

ಶಂಕರಯ್ಯ ಸ್ವಾಮಿಯವರು ಕೇವಲ ಕಲಾವಿದರಷ್ಟೇ ಅಲ್ಲ, ಅವರು ಕಲೆ ಮೂಲಕ ಸಮಾಜಕ್ಕೆ ಸಂದೇಶ ನೀಡುವ ಜವಾಬ್ದಾರಿಯ ಕಲಾವಿದರೂ ಹೌದು. ಇವರು ಮುಂದಿನ ದಿನಗಳಲ್ಲಿ ಚಿತ್ರರಂಗಕ್ಕೆ ಪ್ರವೇಶಿಸಲಿ ಎಂಬ ಆಶಯವನ್ನು ಅಭಿಮಾನಿಗಳುಹೃದಯಪೂರ್ವಕವಾಗಿ ಹೊಂದಿದ್ದಾರೆ.!

# ಟೇಕ್ ಬರ್ಹಾನಾ ಆರ್ ಎಚ್ ದರ್ಗಾಕ್ಕೆ 20 ಸೀಲಿಂಗ್ ಫ್ಯಾನ್ ಕೊಡುಗೆ



ಕಲಬುರಗಿ : ಸೆ.6:ನಗರದ ಮಾರ್ಕೆಟ್ ರಸ್ತೆಯಲ್ಲಿ ಇರುವ ಟೇಕ್ ಬರ್ಹಾನಾ ಆರ್ ಎಚ್ ದರ್ಗಾ ಸೆಪ್ಟೆಂಬರ್ 20ರಂದು ಉರುಸ್ ಹಾಗೂ ಸಂದಾಲ ಜಾತ್ರಾ ಮಹೋತ್ಸವದ ಪ್ರಯುಕ್ತ ಸಮಾಜ ಸೇವಕರಾದ ಶ್ರೀಕಾಂತ್ ರೆಡ್ಡಿ ಅವರು ಇಪ್ಪತ್ತು ಸೀಲಿಂಗ್ ಫ್ಯಾನ್ ಉಡುಗೊ-ರೆಯಾಗಿ ನೀಡಿದರು. ನಂತರ ಟೇಕ್ ಬರ್ಹಾನಾ ಆರ್ ಎಚ್ ದರ್ಗಾದ ಸಾಹೇಬ್‌ಆದಂತಹಹಜರತ್‌ಸೈಯದ್ ಷಾ ಹಿಸಾಮುದ್ದಿನ್ ಮೊಹಮ್ಮದ್ ಅಲ್-ಹುಸೇನಿ ಅಸ್ತಾನಾ ಅವರ ಆಶೀರ್ವಾದ ಪಡೆದರು:ಜರತ್ ಸೈಯದ್ ಷಾ ಹಿಸಾಮುದ್ದಿನ್ ಮೊಹಮ್ಮದ್ ಅಲ್-ಹುಸೇನಿ ಅಸ್ತಾನಾ ಅವರು ಮಾತನಾಡಿ ಶ್ರೀಕಾಂತ್ ರೆಡ್ಡಿ ಅವರು ಸದಾ ಸಾಮಾಜ ಸೇವ ಆಗ್ಲಿ ಯಾರೇ ಕಷ್ಟಾ ಅಂತಾ ಬಂದ್ರುಕೂಡಅವರಿಗೆ ಕೈಲಾದಷ್ಟು ಸಹಾಯ ಮಾಡಿ ಜನರಮನಸ್ಸು ಗೆಲ್ಲುತ್ತಾರೆ ಆ ಭಗವಂತನ ಆಶೀರ್ವಾದ ಸದಾ ಅವರ ಮೇಲೆ ಹೀಗೆ ಇರಲಿ ಮತ್ತು ಸಮಾಜಸೇವೆ ಮಾಡಲು ಇನ್ನೂ ಹೆಚ್ಚು ಶಕ್ತಿ ನೀಡಲಿ ಎಂದು ಹೇಳಿದರು.ಈ ಸಂದರ್ಭದಲ್ಲಿ ಆಸೀಫ್ ಪಟೇಲ್,ಮೊಹಮ್ಮದ್ ನಿಜಾಮುದ್ದೀನ್,ಸತೀಶ್ ಪಾಟೀಲ್ ಸೇರಿದಂತೆ ಅನೇಕ ಜನರು ಉಪಸ್ಥಿತರಿದ್ದರು.

# ಸೆ. 10 ರಂದು ಕಲಬುರಗಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟ ಆಯೋಜನೆ

ಕಲಬುರಗಿ,ಸೆ.06-ಪ್ರಸಕ್ತ 2025-26ನೇ ಸಾಲಿನ ಕಲಬುರಗಿ ವಿಭಾಗಮಟ್ಟದ ದಸರಾ ಕ್ರೀಡಾ-ಕೂಟದ ಅಂಗವಾಗಿ ಅಥ್ಲೇಟಿಕ್ಸ್, ಬಾಸ್ಕೆಟ್‌ಬಾಲ್, ಹ್ಯಾಂಡಬಾಲ್, ಫುಟಬಾಲ್, ಟೆನ್ನಿಸ್, ಈಜು ಹಾಗೂ ಜೂಡೋ ಕ್ರೀಡೆಗಳು ಇದೇ ಸೆಪ್ಟೆಂಬರ್ 10 ರಂದು ಬೆಳಿಗ್ಗೆ 9.30 ಗಂಟೆಗೆ ಕೆಳಕಂಡ ಸ್ಥಳಗಳಲ್ಲಿ ನಡೆಯಲಿದೆ.

ವಿಭಾಗದ ಎಲ್ಲಾ ಜಿಲ್ಲೆಗಳ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದಂತಹ (ಗುಂಪು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದ ಪುರುಷ ಮತ್ತು ಮಹಿಳಾ ಕ್ರೀಡಾಪಟುಗಳು) ಕ್ರೀಡಾಪಟುಗಳು ಭಾಗವಹಿಸಲು ಅರ್ಹರಿರುತ್ತಾರೆ ಎಂದು ಕಲಬುರಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 9.30 ಗಂಟೆಗೆ ಕಲಬುರಗಿ ನಗರದ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಅಥ್ಲೇಟಿಕ್ಸ್, ಈಜು, ಜೂಡೋ, ಟೆನ್ನಿಸ್ ಕ್ರೀಡೆಗಳು. ಕಲಬುರಗಿಯ ಹೈಕೋರ್ಟ್ ಹತ್ತಿರದ ಕೆ.ಹೆಚ್.ಬಿ. ಅಕ್ಕಮಹಾದೇವಿ ಕಾಲೋನಿಯ ಬಾಸ್ಕೆಟಬಾಲ್ ಕ್ರೀಡಾಂಗಣದಲ್ಲಿ ಬಾಸ್ಕೆಟಬಾಲ್

ಕ್ರೀಡೆಯನ್ನು. ಕಲಬುರಗಿಯ ಹೆಚ್.ಕೆ.ಇ. ಪಾಲಿಟೆಕ್ನಿಕ್ ಕ್ರೀಡಾಂಗಣದಲ್ಲಿ ಹ್ಯಾಂಡಬಾಲ್ ಕ್ರೀಡೆಯನ್ನು ಹಾಗೂ ಕಲಬುರಗಿಯ ವಿರೇಂದ್ರ ಪಾಟೀಲ ಬಡಾವಣೆಯ ಎಂ.ಬಿ ನಗರದ ಫುಟಬಾಲ್ ಅಂಕಣದಲ್ಲಿ ಫುಟಬಾಲ್ ಕ್ರೀಡೆಗಳು ನಡೆಯಲಿವೆ. ಕ್ರೀಡಾಕೂಟದಲ್ಲಿ ಭಾಗವಹಿಸುವ ವಿಜೇತಕ್ರೀಡಾಪಟುಗಳು ಕಡ್ಡಾಯವಾಗಿ ಆನ್‌ಲೈನ್ ನೋಂದಣಿ ಮಾಡಿರಬೇಕು ಎಂದು ಅವರು ತಿಳಿಸಿದ್ದಾರೆ.

# ಶುಲ್ಕ ಮರುಪಾವತಿ ಮತ್ತು ಆರೈಕೆದಾರರಿಗೆ ಪ್ರೋತ್ಸಾಹಧನ ಯೋಜನೆಯಡಿ ಅರ್ಜಿ ಆಹ್ವಾನ

ಯಾದಗಿರಿ : ಸೆ.06 : 2025-26ನೇ ಸಾಲಿನ ಶುಲ್ಕ ಮರುಪಾವತಿ ಮತ್ತು ಆರೈಕೆದಾರರಿಗೆ ಪ್ರೋತ್ಸಾಹಧನ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಶರಣಪ್ಪ ಪಾಟೀಲ ಅವರು ತಿಳಿಸಿದ್ದಾರೆ. ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆದಿಂದ ಅನುಷ್ಠಾನಗೊಳ್ಳುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಯೋಜನೆ ಹಾಗೂ ವಿಕಲಚೇತನ ವ್ಯಕ್ತಿಗಳಿಗೆ ಸೆರಬ್ರಲ್ ಪಾಲ್ಸಿ, ಮುಸ್ಕು ಲರ್ ಡಿಸ್ಟ್ರೊ ರೇಪಿ, ಪಾರ್ಕಿನ್ಸನ್ಸ್ ಮತ್ತು ಮಲ್ಟಿಪಲ್ ಸ್ಲೆ ರೊಸಿನ್ ಆಟಿಸಂ, ಬೌದ್ಧಿಕ ವಿಕಲತೆ ಮತ್ತು ಬಹುವಿಧ ಅಂಗವಿಕಲತೆ (ಶ್ರವಣ ಅಂಧತ್ವ)ವುಳ್ಳ ಕಾಯಿಲೆಗಳಿಂದ ಬಳಲುತ್ತಿರುವ ವ್ಯಕ್ತಿಗಳಿಗೆ ಆರೈಕೆದಾರರಿಗೆ ಪ್ರೋತ್ಸಾಹಧನ ಸೌಲಭ್ಯಕ್ಕೆ 2025ರ ಸೆಪ್ಟೆಂಬರ್ 30ರ ಒಳಗೆ ಅರ್ಜಿ ಸಲ್ಲಿಸಬೇಕು. ಇಲಾಖಾ ಯೋಜನೆಗಳಿಗೆ ಸಂಬಂಧಿಸಿದಂತೆ ಯಾವುದೇ ಕಾರಣಕ್ಕೂ ಹೆಚ್ಚುವರಿ ಕಾಲಾವಕಾಶ ನೀಡಲಾಗುವುದಿಲ್ಲ, ಈ ಜಿಲ್ಲಾ ವ್ಯಾಪ್ತಿಯ ವಿಕಲಚೇತನ ಫಲಾನುಭವಿಗಳು ನಿಗದಿಪಡಿಸಿದ ಸಲ್ಲಿಸಬೇಕು, ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಸಹಾಯವಾಣಿ ಕೇಂದ್ರದ ದೂ.ಸಂ.08473 253531ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಲಬುರಗಿ: ನಗರದ ಸಿದ್ಧಾರ್ಥ ಅಡಿಟೋರಿಯಂ ಹಾಲ್‌ನಲ್ಲಿ ಕರ್ನಾಟಕ ಪೀಪಲ್ಸ್ ಶಿಕ್ಷಣ ಸಂಸ್ಥೆ ಶ್ರೀಮತಿ ಪಿಲ್ಲೂ ಹೋಮಿ ಇರಾಣಿ ಮಹಿಳಾ ಮಹಾವಿದ್ಯಾಲಯ ವತಿಯಿಂದ ಸ್ವಾಗತ ಸಮಾರಂಭ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಮಹಾನಗರ ಪಾಲಿಕೆ ಮಹಾಪೌರರಾದ ವರ್ಷಾ ಜಾನೆ ಅವರು ಉದ್ಘಾಟಿಸಿದರು. ಸಮಾಜಶಾಸ್ತ್ರ ವಿಭಾಗ ಕೆ.ಬಿ.ಎನ್. ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ: ಸಮೀನಾ ಸಿಂದಗಿಕರ್, ಶ್ರೀಮತಿ ಪಿಲ್ಲೂ ಹೋಮಿ ಇರಾಣಿ ಮಹಿಳಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜ್ಯೋತಿ ಎಮ್.ಸ್ವಾಮಿ ಸೇರಿದಂತೆ ಸಮಾಜಶಾಸ್ತ್ರ ಹಾಗೂ ಅರ್ಥಶಾಸ್ತ್ರ ವಿಭಾಗ ಕಾರ್ಯಕ್ರಮ ಸಂಯೋಜಕರು, ಸಿಬ್ಬಂದಿವರ್ಗದವರು, ವಿದ್ಯಾರ್ಥಿ ವೃಂದದವರು ಇದ್ದರು.

# ನಾರಾಯಣ ಗುರು ಜಯಂತಿ: ಸೆ. 16ರಂದು ಭವ್ಯ ಮೂರ್ತಿಯ ಶೋಭಾ ಯಾತ್ರೆ



ಕಲಬುರಗಿ: ಸೆ.6- ಬ್ರಹ್ಮ ಶ್ರೀ ನಾರಾಯಣ ಗುರುಗಳ 171ನೇ ಜಿಲ್ಲಾ ಮಟ್ಟದ ಜಯಂತಿ ಉತ್ಸವವನ್ನು ಸೆಪ್ಟೆಂಬರ್ 16ರಂದು ನಗರದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ಪೂರ್ಣಗೊಂಡಿದ ಜಯಂತಿ ಉತ್ಸವದ ಜಿಲ್ಲಾಧ್ಯಕ್ಷ ಡಾ. ವಿನಯ್ ಗುತ್ತೇದಾರ್ ಟಗಾರಂಪಳ್ಳಿ ಅವರು ಹೇಳಿದರು.

ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದಿನ ಜಯಂತಿ ಉತ್ಸವಗಳಿಂದ ಭಿನ್ನವಾಗಿ ಗುರುಗಳ ತತ್ವಮತ್ತುಸಿದ್ಧಾಂತವನ್ನು ಜನಮನಕ್ಕೆ ಮುಟ್ಟಿಸಲು ವಿಶಿಷ್ಟರೀತಿ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಈ ಬಾರಿ 16 ಮಂದಿ ಬೇರೆ ಬೇರೆ ಜಾತಿ ಸಮುದಾಯಗಳ ಸಾಧಕರಿಗೆ ಬ್ರಹ್ಮಶ್ರೀ ನಾರಾಯಣ ಗುರು ಪ್ರಶಸ್ತಿ ನೀಡುವ ಮೂಲಕ ನಾರಾಯಣ ಗುರುಗಳ ತತ್ವದ ಅನುಷ್ಠಾನಕ್ಕೆ ನಿರ್ಧರಿಸಲಾಗಿದೆ ಎಂದರು.

ಜೊತೆಗೆ 11 ಮಂದಿ ವಿದ್ಯಾರ್ಥಿಗಳನ್ನು ಮೂರು ವರ್ಷಗಳ ಕಾಲ ಎಂಟರಿಂದ ಹತ್ತನೇ ತರಗತಿಯವರೆಗೆ ಪೂರ್ಣ ಶಿಕ್ಷಣ ನೀಡುವ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ದತ್ತು ಸ್ವೀಕಾರ ಮಾಡಲಾಗುವುದು ಅವರಿಗೆ ಶಾಲಾ ಖರ್ಚು ವೆಚ್ಚವಲ್ಲದೆ ಪ್ರವಾಸ ಮತ್ತು ಸೈಕಲ್ ವಿತರಣೆಗೂ ನೆರವು ನೀಡಲಾಗುವುದು. ಈ ಬಾರಿಯ ಮೆರವಣಿಗೆಯಲ್ಲಿ ವಿಶೇಷ ಆಕರ್ಷಣೆ ಎಂಬಂತೆ ಬ್ರಹ್ಮಶ್ರೀ ನಾರಾಯಣ ಗುರುಗಳ ಐದು ಅಡಿ ಎತ್ತರದ ಭವ್ಯಮೂರ್ತಿಯನ್ನು ನಿರ್ಮಾಣ ಮಾಡಲಾಗಿದ್ದು ಶೋಭಾಯಾತ್ರೆಯ ಮೂಲಕ ಎಸ್.ಎಂ. ಪಂಡಿತ್ ರಂಗಮಂದಿರಕ್ಕೆ ಕರೆತರಲಾಗುವುದು ಎಂದು ಅವರು ಹೇಳಿದರು.

ಮೆರವಣಿಗೆಯಲ್ಲಿ ಡಿಜೆಯನ್ನು ಪೂರ್ಣ ನಿಷೇಧಿಸಲಾಗಿದ್ದು ವಿಶೇಷ ಆಕರ್ಷಣೆಯಾಗಿ ಖ್ಯಾತ ಚಲನಚಿತ್ರ ನಟ ವಿಜಯ ರಾಘವೇಂದ್ರ ಅವರು ಭಾಗವಹಿಸಲಿದ್ದಾರೆ. ಸಾಂಪ್ರದಾಯಿಕ ಶೈಲಿ ಮತ್ತು ಭಕ್ತಿಯನ್ನು ಉದ್ದೀಪನಗೊಳಿಸುವ ಪೂರ್ಣ ಕಲಶ ಹೊತ್ತ ಮುತ್ತೈದೆಯರು, ಭಜನಾ ತಂಡ, ಚೆಂಡೆ ಮೇಳ, ಡೊಳ್ಳು ಮೇಳ ಸಹಿತ ಗುರುಗಳ ಮೂರ್ತಿಯ ಮೆರವಣಿಗೆ ನಡೆಯಲಿದೆ. ಈ ಬಾರಿ ವಿಶೇಷವಾಗಿ ಜೀವಾ ಆಸ್ಪತ್ರೆಯ ಸಹಯೋಗದೊಂದಿಗೆ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಮತ್ತಿತರ ವಿಧಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಮುಖ ಭಾಷಣಕಾರರಾಗಿ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹಾಗೂ ಉದ್ಘಾಟಕರಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್ ಖಾತೆಯ ಸಚಿವ ಪ್ರಿಯಾಂಕ್ ಖರ್ಗೆಯವರು ಭಾಗವಹಿಸಲಿದ್ದಾರೆ. ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರು ಆರೋಗ್ಯಶಿಬಿರವನ್ನು ಉದ್ಘಾಟಿಸಲಿದ್ದಾರೆ. ಸಚಿವ ಶರಣಬಸಪ್ಪ ದರ್ಶನಪುರ್ ಅವರು 11 ವಿದ್ಯಾರ್ಥಿಗಳ ದತ್ತು ಸ್ವೀಕಾರಕ್ಕೆ ಚಾಲನೆ ನೀಡಲಿದ್ದಾರೆ. ನಾರಾಯಣ ಗುರುಗಳ ಕೃತಿಯನ್ನು ವಿಧಾನ ಪರಿಷತ್ ರಾಜ್ಯ ಜಗದೇವ್ ಗುತ್ತೇದಾರ್ ಹಾಗೂ ಚಿಕಿತ್ಸಾ ಶಿಬಿರದ ವೈದ್ಯರಿಗೆ ಡಾ. ಅಜಯ್‌ಸಿಂಗ್ ಅವರು ಸನ್ಮಾನ ನೆರವೇರಿಸಲಿದ್ದಾರೆ. ಜಿಲ್ಲೆಯ ಎಲ್ಲ ಶಾಸಕರು ವಿಧಾನ ಪರಿಷತ್ ಸದಸ್ಯರು ಹಾಗೂ ಸಮಾಜದ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.ಚಿತಾಪುರ ತಾಲ್ಲೂಕು ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದ ಡಾ. ಪ್ರಣವಾನಂದ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ 2016ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ನಾರಾಯ-ಣಗುರು ಜಯಂತಿಯನ್ನು ರಾಜ್ಯಾದ್ಯಂತ ಆಚರಿಸಬೇಕು ಎಂಬ ಸರ್ಕಾರಿ ಆದೇಶವನ್ನು ಹೊರಡಿಸಿದ ನಂತರ ಇದೀಗ ಜನರಲ್ಲಿ ಜಾಗೃತಿ ಮೂಡಿದ್ದು ಸೆಪ್ಟೆಂಬರ್ 7ರಂದು ಪಂಚಾಯಿತಿ ಮಟ್ಟದಲ್ಲೂ ನಾರಾಯಣ ಗುರು ಜಯಂತಿ ಆಚರಣೆಗೊಳ್ಳುತ್ತಿರುವುದು ಗುರುಗಳ ಬಗ್ಗೆ ಜಾಗೃತಿ ಹೊಂದಿರುವುದರ ಸಂಕೇತ ಎಂದರು.

ನಾರಾಯಣ ಗುರುಗಳ ಜಯಂತಿ ಆಚರಣೆಯಿಂದ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ನಾರಾಯಣ ಗುರು ತತ್ವವನ್ನು ಮುಟ್ಟಿಸಲು ಮತ್ತು ಹೊಸ ಸಮಾಜವನ್ನು ನಿರ್ಮಾಣ ಮಾಡಲು ಪ್ರಯತ್ನ ಮಾಡುತ್ತಿದ್ದು ಈಡಿಗ ಬಿಲ್ಲವ ಸೇರಿದಂತೆ 26 ಪಂಗಡಗಳ ಸಮಗ್ರ ಅಭಿವೃದ್ಧಿಯನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಈಗಾಗಲೇ ಅನೇಕ ಬೇಡಿಕೆಗಳನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಕಲಬುರಗಿಯಲ್ಲಿ ಈಡಿಗ ಸಮಾಜಕ್ಕೆ ಸ್ವಂತ ನಿವೇಶನ ಹಾಗೂ ಸಭಾಭವನದ ಕೊರತೆಯಿದ್ದು ಅದನ್ನು ಸರ್ಕಾರ ಕೂಡಲೇ ನೀಡುವಂಗತೆ, ಬ್ರಹ್ಮ ಶ್ರೀ ನಾರಾಯಣ ಗುರುಗಳ ಭವ್ಯ ಮೂರ್ತಿಯನ್ನು ರಾಜಧಾನಿ ಬೆಂಗಳೂರಿನಲ್ಲಿ ಸ್ಥಾಪಿಸುವಂತೆ, ಸುಮಾರು ಒಂದುವರೆ ಲಕ್ಷದಷ್ಟು ಸಮುದಾಯದ ಕುಲಕಸುಬು ವಂಚಿತ ಜನರಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂಬಿತ್ಯಾದಿ ಹಲವು ಬೇಡಿಕೆಗಳನ್ನು ಕೂಡ ಮುಂದಿಟ್ಟುಕೊಂಡು ಸರ್ಕಾರದ ಗಮನ ಸೆಳೆಯಲಾಗುವುದು ಎಂದು ಅವರು ಹೇಳಿದರು.

ನಾರಾಯಣಗುರು ಜಯಂತಿಯನ್ನು ಸರಕಾರಿ ಮಟ್ಟದಲ್ಲಿ ಆಚರಿಸಲು ಆದೇಶ ಹೊರಡಿಸಿದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಜೊತೆಗೆ ಮೈಸೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದ ಆರು ಜನ ವಿದ್ವಾಂಸರು ಈಡಿಗ ಬಿಲ್ಲವ ಸೇರಿದಂತೆ 26 ಪಂಗಡಗಳ ಕುಲಶಾಸ್ತ್ರೀಯ ಅಧ್ಯಯನ ಆರಂಭಿಸಿದ್ದು ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಈ ಸಮುದಾಯದ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಸ್ಥಿತಿಗತಿಯ ನಿಖರ ಅಂಕಿ ಅಂಶ ದೊರೆಯಲಿದೆ. ಸಮಾಜದ ಎಲ್ಲರೂ ಅಧ್ಯಯನ ತಂಡಕ್ಕೆ ಸಹಕಾರ ನೀಡಬೇಕು ಎಂದು ಸಮಾಜದ ಬಾಂಧವರಲ್ಲಿ ಅವರು ಕೋರಿದರು.

ಮಹಾತ್ಮ ಗಾಂಧೀಜಿ ಅವರು ಮತ್ತು ನಾರಾಯಣ ಗುರುಗಳು ಶಿವಗಿರಿಯಲ್ಲಿ ಭೇಟಿಯಾಗಿ ಇದೀಗ ನೂರನೇ ವರ್ಷ. ಇದನ್ನು ಕೂಡ ಈ ಬಾರಿ ಜಯಂತಿ ಉತ್ಸವದಲ್ಲಿ ಸ್ಮರಿಸಲಾಗುವುದು. ನಾರಾಯಣ ಗುರುಗಳು ಈಳವ ಜಾತಿಯಲ್ಲಿ ಹುಟ್ಟಿದರೂ ಒಂದೇ ಜಾತಿ ಒಂದೇ ಮತ ಒಬ್ಬನೇ ದೇವರು ಎಂಬ ಲೋಕ ಸಂದೇಶ ನೀಡಿ ಮಾನವರೆಲ್ಲರೂ ಒಂದೇ ಎಂಬುದನ್ನು ಸಾರಿದ ಮಹಾತ್ಮ.ಅದಕ್ಕಾಗಿ ಎಲ್ಲ ಜಾತಿ ಸಮುದಾಯದವರು ಒಟ್ಟಾಗಿ ಜಯಂತಿ ಆಚರಣೆಗೊಂಡರೆ ಅರ್ಥಪೂರ್ಣ ಎಂದು ಡಾ. ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶಿವರಾಜ್ ಬಿ. ಗುತ್ತೇದಾರ್, ಜಗದೇವ್ ಎಂ. ಗುತ್ತೇದಾರ್ ಕಲ್ಲಬೇನೂರು ಮಲ್ಲಿಕಾರ್ಜುನ್ ಗುತ್ತೇದಾರ್ ಕುಕ್ಕುಂದ ಕಾಶಿನಾಥ ಗುತ್ತೇದಾರ್ ಚಿತ್ತಾಪುರ ಮಹೇಶ್ ಗುತ್ತೇದಾರ್ ಹೊಳಕುಂದ್, ವೆಂಕಟೇಶ್ ಕಡೇಚೂರ್, ಡಾ. ಸದಾನಂದ ಪೆರ್ಲ, ದೇವೇಂದ್ರ ಗುತ್ತೇದಾರ್ ಮುಂತಾದವರು ಉಪಸ್ಥಿತರಿದ್ದರು.

# ಪರಂಪರೆಯಿಂದ ಹೊಸ ವ್ಯವಸ್ಥೆ ಕಟ್ಟಿ:ಡಾ. ಕಟ್ಟಿ ಕರೆ



ಕಲಬುರಗಿ: ಸೆ.6 (ಲಿಂ. ಗುರುಬಸಪ್ಪ ಸಜ್ಜನಶೆಟ್ಟಿ ವೇದಿಕೆ): ಓದು ನಮಗೆ ಸ್ವಾತಂತ್ರ್ಯ ನೀಡಿದ್ದು ನಮ್ಮನ್ನು ಬಿಡುಗಡೆಗೊಳಿಸುತ್ತದೆ. ಆದರೆ ವಿಮರ್ಶೆ ಅದಕ್ಕೆ ಪೂರಕ ಶಕ್ತಿ ನೀಡುತ್ತದೆ. ವಿಮರ್ಶಕನು ವಿಶ್ಲೇಷಣೆ ಮಾಡುವ ಜವಾಬ್ದಾರಿ ಹೆಚ್ಚಿದೆ. ಪರಂಪರೆಯಿಂದ ಹೊಸ ವ್ಯವಸ್ಥೆಯನ್ನು ಕಟ್ಟಬೇಕು. ಇಂಥ ಹೊಸ ಸಿದ್ದಾಂತ ಇಂದಿನ ಯುವ ಬರಹಗಾರರು ಅನುಸರಿಸಬೇಕು ಎಂದು ಕುವೆಂಪು ಭಾಷಾ ಪ್ರಾಧಿಕಾರದ ಅಧ್ಯಕ್ಷ ಡಾ. ಚನ್ನಪ್ಪ ಕಟ್ಟಿ ಅವರು ಕರೆ ನೀಡಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಕನ್ನಡ ಭವನದಲ್ಲಿ ಶನಿವಾರ ಜರುಗಿದ ತಾಲ್ಲೂಕು 9ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅನೇಕ ಸಂಘರ್ಷಗಳನ್ನು ಎದುರಿಸಿದ ಕಲಬುರಗಿ ಜಿಲ್ಲೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಂಸ್ಕೃತಿಕ ವಿಶೇಷ ನೆಲೆಯಾಗಿದೆ. ಇಡೀ ದೇಶಕ್ಕೆ ಸಾಂಸ್ಕೃತಿಕ ಕೊಡುಗೆ ನೀಡಿದ್ದು ಅನನ್ಯವಾಗಿದೆ ಎಂದು ಜನಪದಕಾರರು, ತತ್ವಪದಕಾರರು ಈ ನಾಡು ದೇಶಕ್ಕೆ ಬಹು ಮೌಲಿಕ ಕೊಡುಗೆ ನೀಡಿದೆ. ಸಾಹಿತ್ಯ ಉತ್ಪನ್ನವಾಗದೆ ಪ್ರಕ್ರಿಯೆ ರೀತಿಯಲ್ಲಿ ಸಾಹಿತ್ಯ ರಚಿಸಬೇಕಾಗಿದೆ ಎಂದರು.

ಸಮ್ಮೇಳನಾಧ್ಯಕ್ಷ ಡಾ. ಶ್ರೀಶೈಲ್ ನಾಗರಾಳ್ ಅವರು ಮಾತನಾಡಿ, ಕಲ್ಯಾಣ ಕರ್ನಾಟಕದ ಕೇಂದ್ರಸ್ಥಾನವಾಗಿರುವ ಕಲಬುರ್ಗಿ ತನ್ನದೇ ಆದ ವಿಶಿಷ್ಟ ಇತಿಹಾಸ-ಪರಂಪರೆ ಹೊಂದಿದೆ. ಮೌರ್ಯ, ಶಾತವಾಹನ, ಕಲ್ಯಾಣ ಚಾಲೂಕ್ಯರು, ಬಹಮನಿ ಸುಲ್ತಾನರು, ಅದಿಲ್ ಶಾಹಿ ಹಾಗೂ ನಿಜಾಮ ಅರಸರು ಆಳ್ವಿಕೆ ನಡೆಸಿದ್ದಾರೆ. ಆಯಾ ಕಾಲಘಟ್ಟದಲ್ಲಿ ಕಲೆ, ಸಾಹಿತ್ಯ, ಧರ್ಮ, ಭಾಷೆ, ಸಂಸ್ಕೃತಿ ಬೆಳೆದು ಬಂದಿದೆ ಎಂದರು. ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ನೃಪತುಂಗನ ಕವಿರಾಜ ಮಾರ್ಗ, ವಚನ ಸಾಹಿತ್ಯ, ತತ್ವಪದ ಸಾಹಿತ್ಯ, ಸೂಫಿ ಸಂತರ ತವರೂರು ಇದಾಗಿದೆ ಎಂದರು.

ಆಧುನಿಕ ಸಂದರ್ಭದಲ್ಲೂ ಇಲ್ಲಿನ ಕವಿ, ಸಾಹಿತಿ, ಲೇಖ-ಕರು,. ರಂಗಭೂಮಿ ಕಲಾವಿದರು ಸಾಕಷ್ಟು ಕೊಡುಗೆ ನೀಡಿದ್ದಾರೆ. ಇದೆಲ್ಲದಕ್ಕೂ ಮಿಗಿಲಾಗಿ ಈ ನೆಲ ಸೌಹಾರ್ದತೆಯ ನೆಲೆವನೆಯಾಗಿದೆ. ಕಲಬುರ್ಗಿ ಶಿಕ್ಷಣ ಕಾಶಿ, ಪುಸ್ತಕ ಕಾಶಿಯೂ ಆಗಿದ್ದು, ಈ ನೆಲದಲ್ಲಿ ಈವರೆಗೆ ನಾಲ್ಕು ಅಖಿಲ ಭಾರತ ಸಾಹಿತ್ಯ ಸಮ್ಮೇಳನ, 21 ಜಿಲ್ಲಾ ಸಮ್ಮೇಳನ, 9 ತಾಲೂಕು ಸಮ್ಮೇಳನ ಜರುಗಿವೆ. ಆ ಮೂಲಕ ಕಲಬುರ್ಗಿ ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಸಾಕಷ್ಟು ಪ್ರಗತಿ ಕಂಡಿದೆ ಎಂದರು. ಆದರೆ ಶಾಲಾ ಕಾಲೇಜು ಹಂತದ ಪಠ್ಯ ಪುಸ್ತಕಗಳಲ್ಲಿ ಈ ಭಾಗದ ಲೇಖಕರ, ಕವಿಗಳ ಜೀವನ ಚರಿತ್ರೆಯನ್ನು ಸೇರಿಸಬೇಕು ಎಂದು ಅವರು ಆಗ್ರಹಿಸಿದರು.

ಜಾನಪದ ಸಮಾಜೋ ಸಂಸ್ಕೃತಿ ಕೃತಿ ಬಿಡುಗಡೆ ಮಾಡಿದ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ. ಹೆಚ್.ಟಿ. ಪೋತೆ ಅವರು ಮಾತನಾಡಿ, ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸಾಂಸ್ಕೃತಿಕವಾಗಿ ಅನ್ಯಾಯವಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಮನವಿ ಮಾಡಿದರೂ ಬೇಡಿಕೆ ಈಡೇರಿಲ್ಲ. ಸೃಜನಶೀಲ ಕತೆಗೆ ಸಿಕ್ಕ ಗೌರವ ಜನಪದ ಸಾಹಿತ್ಯಕ್ಕೆ ಸಿಗುತ್ತಿಲ್ಲ. ಜನಪದ ಸಾಹಿತ್ಯ ನಿರ್ಲಕ್ಷ್ಯಕ್ಕೊಳಗಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಮ್ಮ ಮಕ್ಕಳಲ್ಲಿ ಜನಪದ ಕಲೆ ಸಂಸ್ಕೃತಿ ಉಳಿಸಿ ಬೆಳೆಸಬೇಕಾದರೆ ಜಾಗೃತಿ ಮೂಡಸಬೇಕು. ಮಡಿವಂತಿಕೆಯಿಂದ ಹೊರಬಂದು ಸಂಸ್ಕೃತಿಯನ್ನು ಗೌರವಿಸಬೇಕು. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲೆಯಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರತಿಭಾವಂತರಿಗೆ ವೇದಿಕೆ ಒದಗಿಸಿಕೊಡುವ ಕಾರ್ಯ ಮಾಡುತ್ತಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಪರಿಷತ್ ಜಿಲ್ಲಾ ಅಧ್ಯಕ್ಷ ವಿಜಯಕುಮಾರ್ ಪಾಟೀಲ್ ತೇಗಲತಿಪ್ಪಿ ಅವರು ಸಮ್ಮೇಳನದ ನೇತೃತ್ವವಹಿಸಿದ್ದರು. ತಾಲ್ಲೂಕಾಧ್ಯಕ್ಷೆ ಶಿವಲೀಲಾ ಕಲಗುರ್ಕಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಹಿತ್ಯಪ್ರೇರಕರಾದ ಲಕ್ಷ್ಮೀದತ್ತಾತ್ರೇಯ ಪಾಟೀಲ್ ರೇವೂರ್ ಅವರು ಕವಿ ಹೂವಾನಂದ್ ಸಲಗಾರ್ ಅವರ ಜಗದ ಜನಕ ಕೃತಿ ಬಿಡುಗಡೆ ಮಾಡಿದರು. ಸಮ್ಮೇಳನದ ಸ್ಮರಣ ಸಂಚಿಕೆ ಕಾವ್ಯ ಕಳಸ ಕೃತಿಯನ್ನು ಸಾಹಿತ್ಯ ಪ್ರೇರಕಿ ಜಯಶ್ರೀ ಬಸವರಾಜ್ ಮತ್ತಿಮೂಡ ಅವರು ಜನಾರ್ಪಣೆಗೊಳಿಸಿದರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷೆ ಪ್ರಮೀಳಾ ಜಾನಪ್ಪಗೌಡ ಚಿಂಚೋಳಿ ಅವರು ಮಾತನಾಡಿದರು.

ಸ್ವಾಗತ ಸಮಿತಿಯ ದಯಾನಂದ್ ದೇವರಮನಿ, ವಿಶ್ವನಾಥ ಹುಲಿ, ಫಾರೂಕ್ ಅಹ್ಮದ್ ಮಣೂರ್, ವಿಶಾಲಾಕ್ಷಿ ಮಾಯಣ್ಣವರ್, ಮಲ್ಲಿಕಾರ್ಜುನ್ ಇಬ್ರಾಹಿಂಪುರ, ಕುಪೇಂದ್ರ ಬರಗಾಲಿ, ಪ್ರಭವ ಪಟ್ಟಣಕರ್, ರೇವಯ್ಯಾ ಸ್ವಾಮಿ, ಭಾಗ್ಯಶ್ರೀ ಮರಗೋಳ್, ಕವಿತಾ ಕವಳೆ, ಧರ್ಮಣ್ಣ ಹೆಚ್ ಧನ್ನಿ, ಶಿವರಾಜ್ ಅಂಡಗಿ, ಶರಣರಾಜ್ ಚಪ್ಪರಬಂದಿ, ಕಲ್ಯಾಣಕುಮಾರ್ ಶೀಲವಂತ, ಶಕುಂತಲಾ ಪಾಟೀಲ್, ಜ್ಯೋತಿ ಕೋಟನೂರ್, ಜಯಶ್ರೀ ಜಮಾದಾರ್, ಚನ್ನಮಲ್ಲಯ್ಯ ಹಿರೇಮಠ, ಕಲ್ಯಾಣಕುಮಾರ್ ಸಂಗಾವಿ, ಮಹಾನಂದಾ ಹುಲಿ, ಎಸ್.ಕೆ. ಬಿರಾದಾರ್, ನಾಗಪ್ಪ ಸಜ್ಜನ್, ಸಂತೋಷ ಕುಡಳ್ಳಿ, ಸುರೇಶ್ ದೇಶಪಾಂಡೆ, ಸುರೇಶ್ ಲೇಂಗಟಿ, ಶರಣಬಸಪ್ಪ ಕೋಬಾಳ್, ವೀರಭದ್ರಪ್ಪ ಗುರುಮಿಠಕಲ್, ಎಂ.ಎನ್. ಸುಗಂಧಿ, ಶಿವಾನಂದ್ ಸುರವಸೆ ಮುಂತಾದವರು ಉಪಸ್ಥಿತರಿದ್ದರು.

ಸಾಹಿತ್ಯ ಸಿಂಚನ ಗೋಷ್ಠಿ:

ಹಿರಿಯ ಸಾಹಿತಿ ಡಾ. ಸ್ವಾಮಿರಾವ್ ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಾಹಿತ್ಯ ಸಿಂಚನ ಗೋಷ್ಠಿಯಲ್ಲಿ ವಿಮರ್ಶಾ ನೋಟಗಳು-ಸಾಹಿತ್ಯದ ಮೌಲ್ಯಗಳು ಕುರಿತು ಡಾ. ಜಗನ್ನಾಥ ತರನಳ್ಳಿ, ಆಧುನಿಕ ಸಾಹಿತ್ಯಕ್ಕಿರುವ ಸವಾಲುಗಳು-ಪರಿಹಾರೋಪಾಯಗಳು ಕುರಿತು ಡಾ. ಅಪ್ಪಗೆರೆ ಸೋಮಶೇಖರ್, ಸಮ್ಮೇಳನಾಧ್ಯಕ್ಷರ ಬದುಕು ಬರಹದ ಕುರಿತು ಡಾ. ಸಂತೋಷಕುಮಾರ್ ಕಂಬಾರ್ ಅವರು ಮಾತನಾಡಿದರು.

ಕಾವ್ಯಕಿರಣ ಎಂಬ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ಲೇಖಕಿ ಡಾ. ಜಯದೇವಿ ಗಾಯಕವಾಡ ಅವರು ಮಾತನಾಡಿ, ಕಾವ್ಯ ಪರಂಪರೆಯನ್ನು ಅಧ್ಯಯನ ಮುಖ್ಯ. ಆಗ ಮಾತ್ರ ಕಾವ್ಯಕ್ಕೆ ಹೊಸ ಸ್ಪರ್ಶ ಕೊಡಲು ಸಾಧ್ಯ. ಅನುಭವದ ಕೊರತೆಯಿಂದ ಕಾವ್ಯ ಮಿಡಿಯುತ್ತಿಲ್ಲ. ಬದುಕು ಮತ್ತು ಬರಹ ಒಂದಾಗಬೇಕು. ಸಾಹಿತಿಗೆ ವರ್ತಮಾನದ ತಲ್ಲಣಗಳಿಗೆ ಸ್ಪಂದಿಸಬೇಕು ಹಾಗೂ ಸಾಮಾಜಿಕ ಜವಾಬ್ದಾರಿ ಇರಬೇಕಾಗಿದೆ ಎಂದರು. ಸುಮಾರು 20 ಕವಿಗಳು ಪ್ರಚಲಿತ ವಿದ್ಯಮಾನಗಳ ಮೇಲೆ ಬೆಳಕು ಚೆಲ್ಲಿದರು. ಪತ್ರಕರ್ತ-ಸಾಹಿತಿ ಡಾ. ಶಿವರಂಜನ್ ಸತ್ಯಂಪೇಟೆ ಸಮಾರೋಪ ನುಡಿಗಳನ್ನಾಡಿ, ಕನ್ನಡ ಭಾಷೆ ಉಳಿಯಬೇಕಾದರೆ ಕನ್ನಡ ಸಾಹಿತ್ಯವನ್ನು ಓದಬೇಕು. ಇಂದಿನ ಯುವಕರಿಗೆ ಸಾಹಿತ್ಯದ ಸಂಗವಿಲ್ಲದಿರುವುದರಿಂದ ಮನುಷ್ಯ ಸಂಬಂಧಗಳು ಹಾಳಾಗುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು. ವಿವಿಧ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರ ಗಮನ ಸೆಳೆದರು. ವಿವಿಧ ಕ್ಷೇತ್ರಗಳ ಸಾಧಕರಿಗೆ ಸತ್ಕರಿಸಲಾಯಿತು.

ಮಿನಿ ವಿಧಾನಸೌಧದಿಂದ ಆರಂಭಗೊಂಡ ಸಮ್ಮೇಳನಾಧ್ಯಕ್ಷರ ಸಾಂಸ್ಕೃತಿಕ

ಮೆರವಣಿಗೆಗೆ ಪಾಲಿಕೆ ಉಪ ಮಹಾಪೌರರಾದ ಶ್ರೀಮತಿ ತೃಪ್ತಿ ಲಾಖೆ ಅವರು ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು. ಮಕ್ಕಳ ಕೋಲಾಟ,

ಲೇಜಿಮು ಜನರ ವಿಶೇಷ ಗಮನ ಸೆಳೆಯಿತು. ಡೊಳ್ಳಿನ ನಾದಕ್ಕೆ ಸಮ್ಮೇಳನಾಧ್ಯಕ್ಷ ಡಾ. ಶ್ರೀಶೈಲ್ ನಾಗರಾಳ ಹಾಗೂ ಪರಿಷತ್ ಜಿಲ್ಲಾಧ್ಯಕ್ಷ ವಿಜಯಕುಮಾರ್ ಪಾಟೀಲ್ ತೇಗಲತಿಪ್ಪಿ ಅವರು ಭರ್ಜರಿ ನೃತ್ಯ ಮಾಡಿದರು. ಮಕ್ಕಳು ಧರಿಸಿದ ಶರಣರ ವೇಶಧಾರಿಗಳು ಹನ್ನೆರಡನೆಯ ಶತಮಾನದ ಸನ್ನಿವೇಶ ಕಣ್ಮುಂದೆ ಬಂದ ಅನುಭವ ನಿರ್ಮಾಣವಾಗಿತ್ತು.

# ದಸರಾ - ದೀಪಾವಳಿಗೆ ಜಿಎಸ್‌ಟಿ ಇಳಿಕೆ ಕೇಂದ್ರ ಸರ್ಕಾರದ ಬಂಪರ್ ಕೊಡುಗೆ: ಡಾ. ಅಷ್ಠಗಿ



ಕಲಬುರಗಿ: ಸೆ.6: ದಿನಬಳಕೆ ವಸ್ತುಗಳು, ಆರೋಗ್ಯ, ವಾಹನ, ವೈಯುಕ್ತಿಕ ವಿಮೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಜಿಎಸ್‌ಟಿ ಕಡಿತಗೊಳಿಸುವ ಮೂಲಕ ಪ್ರಧಾನಿ ನರೇಂದ್ರಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು ಜನಸಾಮಾನ್ಯರಿಗೆ ಬಂಪರ್ ಕೊಡುಗೆ ನೀಡಿದೆ ಎಂದು ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಡಾ. ಅಂಬಾರಾಯ ಅಷ್ಠಗಿ ಅವರು ಬಣ್ಣಿಸಿದ್ದಾರೆ. ಜಿಎಸ್‌ಟಿ ದರ ಕಡಿತ ಮತ್ತು ಪ್ರಕ್ರಿಯೆ ಸುಧಾರಣೆಗಳ ಈ ಐತಿಹಾಸಿಕ ನಿರ್ಧಾರವು ಬಡವರು ಮತ್ತು ಮಧ್ಯಮ ವರ್ಗಕ್ಕೆ ಭಾರಿ ಅನುಕೂಲವಾಗಲಿದ್ದು, ಆರ್ಥಿಕತೆಗೆ ಹೊಸ ಚೈತನ್ಯ ತುಂಬಲಿದೆ. ಔಷಧಗಳು, ಆರೋಗ್ಯ ಪರಿಕರಗಳು, ವೈಯುಕ್ತಿಕ ಆರೋಗ್ಯ ವಿಮೆಗಳ ಮೇಲಿನ ಜಿಎಸ್ಟಿ ದರವನ್ನು 18% ದಿಂದ ಕೇವಲ ಶೇಕಡಾ 5ಕ್ಕೆ ಇಳಿಕೆ ಮಾಡಲಾಗಿದ್ದು, ಸರ್ಕಾರ ಜನಸಾಮಾನ್ಯರ ಬೇಡಿಕೆಗೆ ಸ್ಪಂದಿಸದೆ ಎಂಬುದನ್ನು ಕೇಂದ್ರ ಸರ್ಕಾರ ಖಚಿತಪಡಿಸಿದೆ ಎಂದು ಅವರು ಹೇಳಿಕೆಯಲ್ಲಿ ಸಂತೋಷ ಹೊರಹಾಕಿದ್ದಾರೆ.ಈ ಐತಿಹಾಸಿಕ ಜಿಎಸ್‌ಟಿ ಸುಧಾರಣೆಗಳು ಪ್ರಧಾನಿ ನರೇಂದ್ರಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಜನಕೇಂದ್ರಿತ, ಜನಸ್ನೇಹಿ ಆಡಳಿತಕ್ಕೆ ಮತ್ತೊಂದು ನಿದರ್ಶನವಾಗಿದೆ ಎಂದು ಅವರು ತಿಳಿಸಿದ್ದಾರೆ.

# ಭಾವೈಕ್ಯತೆಯ ಈದ್ ಮಿಲಾದ್ ಆಚರಣೆ



**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**

ಪ್ರವಾದಿ ಮಹಮ್ಮದ್ ಅವರ ಜನ್ಮದಿನ ಆಚರಣೆ ಅಂಗವಾಗಿ ಮತ್ತು ಪವಿತ್ರ ಈದ್ ಮಿಲಾದ್ ಆಚರಣೆ ಮಾಡಲಾಯಿತು ಈದ್ ಮಿಲಾದ್ ಪ್ರಯುಕ್ತ ಮುಸ್ಲಿಂ ಸಮಾಜದ ಯುವಕರು ಮತ್ತು ಹಿರಿಯರು ಸೇರಿ ಹಿಂದೂ ಸಮಾಜದ ಸರ್ವಧರ್ಮದವರಿಂದ ಶುಭ ಕೋರಿದರು ಮತ್ತು ಸನ್ಮಾನ ಸಮಾರಂಭ ಏರ್ಪಡಿಸಿದ್ದರು ಈ ಸಂದರ್ಭದಲ್ಲಿ ಮಾತನಾಡಿದ ಮುಸ್ಲಿಂ ಸಮಾಜದ ಮುಖಂಡರು ಮತ್ತು ಪತ್ರಿಕೆಯ ವರದಿಗಾರರಾದ ಅಲ್ಲಾಭಕ್ಷಿ ಮುಲ್ಲಾರ್ ಮಾತನಾಡಿ ಗಂಗಾವತಿ ವಿಧಾನಸಭಾ ಕ್ಷೇತ್ರದಲ್ಲಿ ಇರ್ಕಲ್ಲಗಡ ಗ್ರಾಮ ಹಿಂದೂ ಮುಸ್ಲಿಂ ಭಾವೈಕ್ಯತೆಯ ಗ್ರಾಮವಾಗಿದೆ ಮತ್ತು ಕೋಮು ಸೌಹಾರ್ದತೆಯಿಂದ ಇಲ್ಲಿ ಹಿಂದೂ ಮುಸಲ್ಮಾನ್ರು ಬದುಕಿತ್ತಿದ್ದಾರೆ ಇದು ರಾಜ್ಯದಲ್ಲಿ ಮಾದರಿ ಗ್ರಾಮವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಮಾರುತಿ ತೋಟಗಂಟಿ ಗಣೇಶನ ಹಬ್ಬದ ಪ್ರಯುಕ್ತ ಹಿಂದೂ ಸಾಮ್ರಾಟ್ ವತಿಯಿಂದ ಗಣೇಶ ಹಬ್ಬ ಪ್ರತಿಷ್ಠಾಪನೆ ಮಾಡಲಾಗಿತ್ತು . ಈ ಸಂದರ್ಭದಲ್ಲಿ ಮುಸಲ್ಮಾನ್ ಯುವಕರು ಖುದ್ದಾಗಿ ತಾವೇ ಮುಂದೆ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಅನ್ನ ಸಂತರ್ಪಣೆ ಮಾಡುವುದು ಮತ್ತು ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ತನು ಮನದಿಂದ ಸಹಾಯ ಮಾಡಿದ್ದಾರೆ ಇದು ಮಾದರಿಯಾಗಿದೆ. ಇದೇ ರೀತಿ ಮುಂದಿನ ದಿನಮಾನಗಳಲ್ಲಿ ಯಾವುದೇ ಮುಸ್ಲಿಂ ಕಾರ್ಯಕ್ರಮಗಳು ಬಂದರೂ ನಾವೆಲ್ಲ ಅನ್ಯತ ಭಾವಿಸದೆ ನಾವೆಲ್ಲರೂ ಒಂದೇ ಎಂದು ಅವರ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಮಾದರಿಯಾಗುತ್ತೇವೆ ಎಂದು ಹೇಳಿದರು ಈ ಸಂದರ್ಭದಲ್ಲಿ ಮಾರುತಿ ತೆ- ೂಟಗಂಟಿ ಮುಸ್ಲಿಂ ಸಮಾಜದ ಎಲ್ಲರಿಗೂ ಅನ್ನ ಸಂತರ್ಪಣೆ ವ್ಯವಸ್ಥೆಯನ್ನು ಮಾಡಿದ್ದರು. ಬಿಜೆಪಿ ಮುಖಂಡ ಗಂಗಾಧರಸ್ವಾಮಿ ಹಿರೇಮಠ ಮಾತನಾಡಿ ಪ್ರವಾದಿ ಮೊಮ್ಮದರು 570ರಲ್ಲಿ ಮೆಕ್ಕಾದಲ್ಲಿ ಜನಿಸಿದರು ಮತ್ತು 632 ರಲ್ಲಿ ಮದೀನಾದಲ್ಲಿ ನಿಧನ ಹೊಂದಿದರು ಇಸ್ಲಾಂ ಧರ್ಮದ ಪೂಜ್ಯ ಪ್ರವಾದಿ ಮಹಮ್ಮದ್ ಏಕದೇವತವಾದದ ನಂಬಿಕೆಯನ್ನು ಹರಡುವ ಮೂಲಕ ಇತಿಹಾಸದ ಅತ್ಯಂತ ಪ್ರಭಾವಶಾಲಿ ಧಾರ್ಮಿಕ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು ಮತ್ತು ಅತಿ ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಂಡ ಪ್ರವಾದಿ ಮೊಹಮ್ಮದರು ಅಜ್ಜ ಮತ್ತು ಚಿಕ್ಕಪ್ಪನ ಆಸರೆಯಲ್ಲಿ ಬೆಳೆದರು 40ನೇ ವಯಸ್ಸಿನಲ್ಲಿ ಅಲ್ಲಾಹನಿಂದ ದೇವದೂತ ಬ್ರೆಜಿಲ್ ಮೂಲಕ ಕುರ್ ಅನ್ನಾನಾ ಮೊದಲ ವಾಕ್ಯಗಳನ್ನು ಸ್ವೀಕರಿಸಿದರು ಅವರು ಏಕದೇವ ವಾಸನೆಯ ಸಂತೋಷವನ್ನು ಪ್ರಚಾರ ಮಾಡಿದರು ಮತ್ತು ಅತಿ ಚಿಕ್ಕ ವಯಸ್ಸಿನಲ್ಲಿ ತಮ್ಮ ಚಿಕ್ಕಪ್ಪನ ವ್ಯಾಪಾರದಲ್ಲಿ ಸಹಾಯ ಮಾಡಿದರು ಮತ್ತು ಚಿಕ್ಕ ವಯಸ್ಸಿನಲ್ಲಿ ಕುರಿಗಳನ್ನು ಮೇಯಿಸುತ್ತಿದ್ದರು ತಮ್ಮ 25ನೇ ವಯಸ್ಸಿನಲ್ಲಿ ಖದೀಜಾ ಎಂಬ ಶ್ರೀಮಂತ ವಿಧವಾ ಮಹಿಳೆಯನ್ನು ಮದುವೆಯಾದರು 40ನೇ ವಯಸ್ಸಿನಲ್ಲಿ ಮೊಹಮ್ಮದ್ ಮೆಕ್ಕಾದ ಹಿರಾದ ಗುಹೆಯೊಂದರಲ್ಲಿ ಧ್ಯಾನ ಮಾಡುತ್ತಿದ್ದಾಗ ದೇವದೂತ ಬ್ರೆಜಿಲ್ ನ ಮೂಲಕ ಅಲ್ಲಾಹುವಿನ ಸಂದೇಶವನ್ನು ಸ್ವೀಕರಿಸಲು ಪ್ರಾರಂಭಿಸಿದರು ಎಂದು ಈ ಸಂದರ್ಭದಲ್ಲಿ ಹೇಳಿದರು.

ಬಿಜೆಪಿ ಮುಖಂಡ ರವಿ ದೇಸಾಯಿ ಮಾತನಾಡಿ ಜಾತಿ ಧರ್ಮ ಧರ್ಮದ ನಡುವೆ ಬರುವಂತಹ ಗೊಂದಲಗಳಿಗೆ ಇರ್ಕಲ್ಲಗಡ ಗ್ರಾಮವು ಮಾದರಿಯಾಗಿದೆ ಇಲ್ಲಿ ಯಾವುದೇ ರೀತಿಯ ಹಿಂದೂ ಮತ್ತು ಮುಸ್ಲಿಂ ಹಬ್ಬಗಳಿಗೆ ಎಲ್ಲಾ ಸರ್ವಧರ್ಮದ ಜನರು ಸೇರಿ ಹಬ್ಬವನ್ನು ಆಚರಿಸುತ್ತಾರೆ ಇದಕ್ಕೆ ನಮ್ಮೆಲ್ಲರ ಸಂಪೂರ್ಣ ಬೆಂಬಲವಿರುತ್ತದೆ ಎಂದು ಹೇಳಿದರು ಈ ಸಂದರ್ಭದಲ್ಲಿ ಊರಿನ ಮುಖಂಡರಾದಂತ ವೀರಬಸಪ್ಪ ಪಟ್ಟಣ ಶೆಟ್ಟರ್ ನಾಗರಾಜ ಆರ್ ಗುಡಿ ಹನುಮಂತಪ್ಪ ಕಾಟಾಪುರ ಮಂಜುನಾಥ್ ಪಾಟೀಲ್ ಬಸವರಾಜ್ ಬೋವಿ ರುದ್ರಪ್ಪ ಕುಂಬಾರ್ ನಾಗಪ್ಪ ದೇಸಾಯಿ ಶಾಮಿದ್ ದಾದು ಸಾಬ್ ಮಿರಾಜ್ ನಾಗರಾಜ್ ಬಡಿಗೇರ್ ಸಿದ್ದು ಹೊಸಮಠ ಮತ್ತು ಸರ್ವ ಧರ್ಮದ ಎಲ್ಲಾ ಯುವಕರು ಹಿರಿಯರು ಪಾಲ್ಗೊಂಡಿದ್ದರು.

## ಸಡಗರ ಸಂಭ್ರಮದ ಈದ್ ಮಿಲಾದ್ ಆಚರಣೆ:ಪ್ರವಾದಿ ಮಹಮ್ಮದ್ ಪೈಗಂಬರ್ ಜನ್ಮದಿನ



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಹಜರತ್ ಪ್ರವಾದಿ ಮಹಮ್ಮದ್ ಪೈಗಂಬರ್ ಜನ್ಮದಿನದ ಅಂಗವಾಗಿ ಮುಸ್ಲಿಂ ಸಮುದಾಯದವರು ಆಚರಿಸುವ ಈದ್ ಮಿಲಾದ್ ಹಬ್ಬವನ್ನು ಯಾದಗಿರಿ ನಗರದಲ್ಲಿ ಶ್ರದ್ಧಾ ಭಕ್ತಿಯಿಂದ,ಸಡಗರ-ಸಂಭ್ರಮದ ನಡುವೆ ಆಚರಿಸಲಾಯಿತು.

ಹಬ್ಬದ ಪ್ರಯುಕ್ತ ನಗರದ ಬೀದಿಗಳು ಹಾಗೂ ಮಸೀದಿಗಳ ಸಂಪರ್ಕಿಸುವ ರಸ್ತೆಗಳನ್ನು ಆಕರ್ಷಕ ವಿದ್ಯುತ್ ದೀಪಾಲಂಕಾರಗಳಿಂದ ಅಲಂಕರಿಸಲಾಗಿತ್ತು. ಪ್ರವಾದಿಯವರ ಸಂದೇಶಗಳನ್ನು ಗೌರವಿಸುವ ಬರಹಗಳನ್ನು ದೀಪದ ಬೆಳಕಿನಲ್ಲಿ ವಿನ್ಯಾಸಗೊಳಿಸಲಾಗಿತ್ತು. ಮುಸ್ಲಿಂ ಬಾಂಧವರು ಭಾವೈಕ್ಯತೆ ಮತ್ತು ಶಾಂತಿಯ ಸಂದೇಶ ಸಾರುವಂತೆ ಮೆರವಣಿಗೆ ನಡೆಸಿ, ನಗರದ ಹೃದಯಭಾಗದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಸಮಾಜದ ಎಲ್ಲ ವರ್ಗದ ಜನರು ಭಾಗವಹಿಸಿ, "ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಾಂತಿಯ ಹಾದಿಯಲ್ಲಿ ಸಾಗಬೇಕು. ಹಿಂದೂ-ಮುಸ್ಲಿಂ ಸಹೋದರರಂತೆ ಒಂದಾಗಿ ಬಾಳಬೇಕು" ಎಂಬ ಸಂದೇಶ ನೀಡಿದರು.

# ದೊರಿಗುಡ್ಡ ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ಪಾಲಕರ ಸಭೆ



**ಮಲ್ಲಮ್ಮ ನುಡಿ ವಾರ್ತೆ ಶಹಾಪುರ:**

ಶಹಾಪುರದ ಹೃದಯಭಾಗದಲ್ಲಿ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ದೊರಿಗುಡ್ಡ(ಉಕ್ಕಿನಾಳ) ಶಾಲೆಯಲ್ಲಿ ಶನಿವಾರ ಪಾಲಕರ ಸಭೆ ಕರೆಯಲಾಗಿತ್ತು ಅದರ ನಿಮಿತ್ತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲಕರು ಭಾಗವಹಿಸಿದ್ದರು ಪಾಲಕರ ಸಭೆಯಲ್ಲಿ ಶಾಲೆಯ ವಿದ್ಯಾರ್ಥಿಗಳು ಶಿಕ್ಷಕರು ಪ್ರಾಂಶುಪಾಲರು ಭಾಗವಹಿಸಿ ಮಕ್ಕಳ ಶೈಕ್ಷಣಿಕ ಶಿಕ್ಷಣದ ಬಗ್ಗೆ ಮತ್ತು ಪರೀಕ್ಷೆ ಫಲಿತಾಂಶಗಳ ಬಗ್ಗೆ ಸುದೀರ್ಘವಾಗಿ ಸಭೆಯಲ್ಲಿ ಚರ್ಚಿಸಲಾಯಿತು ಪಾಲಕರು ನಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ನೀಡುವುದರ ಜೊತೆಗೆ ಶೈಕ್ಷಣಿಕವಾಗಿ ಫಲಿತಾಂಶ ಸುಧಾರಣೆಗೆ ಹೆಚ್ಚಿನ ಹೊತ್ತು ಕೊಡಬೇಕೆಂದು ಶಿಕ್ಷಕರಿಗೆ ಮನವಿ ಮಾಡಿದರು ಪಾಲಕರ ಮನವಿಗೆ ಉತ್ತರಿಸಿದ ಶಾಲೆಯ ಪ್ರಾಂಶುಪಾಲರಾದ ಶರಣು ನಾಯ್ಕಲ್ ನಿಮ್ಮ ಮಕ್ಕಳ ಏಳಿಗೆಗಾಗಿ ಶಿಕ್ಷಕರು ನಾವು ಸತತವಾದಂತ ಪ್ರಯತ್ನ ಮಾಡುತ್ತಿದ್ದೇವೆ ಆದರೂ ಮಕ್ಕಳು ಕೂಡ ಶ್ರದ್ಧೆ ಭಕ್ತಿಯಿಂದ ಅಭ್ಯಾಸದ ಕಡೆ ಹೆಚ್ಚಿನ ಒತ್ತು ನೀಡಬೇಕಾಗಿದೆ ಆ ಕೆಲಸವನ್ನು ಪಾಲಕರು ಶಿಕ್ಷಕರು ಸೇರಿಕೊಂಡು ಅವರ ಫಲಿತಾಂಶ ಸುಧಾರಣೆಗಾಗಿ ಹೆಚ್ಚಿನ ಪ್ರಯತ್ನ ಮಾಡೋಣ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶಿಕ್ಷಕರಾದ ಮಡಿವಾಳಪ್ಪ ಪಾಟೀಲ್ ಹೆಗ್ಗಣದೊಡ್ಡಿ, ಸುಭಾಷ್ ನಾಯಕ್, ಚಂದ್ರು ರಾಠೋಡ, ಭಾಗ್ಯಮ್ಮ ಪಾಟೀಲ್, ವಿದ್ಯಾ ಬಿರಾದಾರ, ಬಸವರಾಜ ನಾಯಕ, ನಿಲಯ ಪಾಲಕರಾದ ಸಂತೋಷ ಜೋಗೂರ,ಮಲ್ಲಿಕಾರ್ಜುನ ಮಳಿಕೇರಿ,ರಾಜಕುಮಾರ ಬಡಿಗೇರ್, ಶಕುಂತಲಾ ಸುರಪುರ ದೀಪಾ ಮೇಡಂ, ಸೌಮ್ಯ ಕುಲಕರ್ಣಿ, ಶಾಲೆಯ ಮಕ್ಕಳು ನೂರಾರು ಪಾಲಕರು ಹಾಜರಿದ್ದರು.

# ವಿಧ್ಯಾರ್ಥಿಗಳ ಶೈಕ್ಷಣಿಕ ಅಭುಧ್ಯಯಕ್ಕೆ ನಿವೃತ್ತ ಶಿಕ್ಷಕರು ಮುಂದಾಗಲಿ-ಎನ್,ಸಿ,ಪಾಟೀಲ್



**ಮಲ್ಲಮ್ಮ ನುಡಿ ವಾರ್ತೆ ಶಹಾಪುರ,**

ಶಿಕ್ಷಕರ ಕೊರತೆಯಿಂದ ಶೈಕ್ಷಣಿಕ ಅಭಿವೃದ್ಧಿ ಕುಂದುತ್ತಿದೆ,ಮಕ್ಕಳಿಗೆ ವಿಷಯವಾರು ಪಠ್ಯ ಅಭ್ಯಾಸಗಳಿಗೆ ಸ್ಥಳಿಯ ನಿವೃತ್ತ ಶಿಕ್ಷಕರು ಶಾಲೆಗಳಿಗೆ ಹೋಗಿ ವಿಷಯ ಕೊರತೆಗಳನ್ನು ನೀಗಿಸಿ ತಾವುಗಳು ವಿಧ್ಯಾರ್ಥಿಗಳ ಶೈಕ್ಷಣಿಕ ಅಭ್ಯುಧ್ಯಯಕ್ಕೆ ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷರಾದ ಎನ್,ಸಿ,ಪಾಟೀಲರವರು ಕರೆ ನೀಡಿದರು, ಅವರು ತಾಲುಕಿನ ಸಿರವಾಳ ಗ್ರಾಮದ ಸರ್ಕಾರಿ ಪ್ರೌಡ ಶಾಲೆಯ ಅವರಣದಲ್ಲಿ ಹಮ್ಮಿಕೊಂಡ, ಕಸಾಪ ಆಶ್ರೆಯದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉಧ್ಘಾಟಿಸಿ ಮಾತನಾಡಿದರು, ಮುಂದುವರದು ಮಾತನಾಡಿದ ಅವರು,.!!ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕ್ತಿ!! ಎಂದು ಹಾಡಿದ ಶರಣ ವಚನದಂತೆ ಗುರುವಿಗೆ ಅಧ್ಬುತ ಶಕ್ತಿ ಇರುತ್ತದೆ, ಗುರುವಿನಿಂದ ಸಮಾಜ ನಿರ್ಮಾಣಕ್ಕೆ ಅಡಿಪಾಯವಾಗಿದೆ, ಎಂದ ಅವರು, ಇಂದು ಸಕಾಲಕ್ಕೆ ಸರ್ಕಾರ ಸಮರ್ಪಕವಾಗಿ ಶಿಕ್ಷಕರನ್ನು ಭರ್ತಿ ಮಾಡುತ್ತಿಲ್ಲ, ಈ ಅವ್ಯವಸ್ಥೆಯಿಂದ ಇಂದು ಮಕ್ಕಳಿಗೆ ಶಿಕ್ಷಣದ ಕುಂಟಿತಕ್ಕೂ ಕಾರಣವಾಗುತ್ತಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು, ಈ ದಿಸೆಯಿಂದ ನಿವೃತ್ತ ಶಿಕ್ಷಕರು ಊರು ಶಾಲೆಯ ಶೈಕ್ಷಣಿಕ ಸುಧಾರಣೆಯತ್ತ ಸಾಗಬೇಕಾಗಿದೆ ಎಂದು ಅವರು ತಿಳಿಸಿದರು, ವಿಶೇಷ ಉಪನ್ಯಾಷಕರಾಗಿ ಆಗಮಿಸಿದ್ದ ಶಿಕ್ಷಕರಾದ ಶ್ರೀಮತಿ ಅನುಸುಯಾ ಚಲುವಾದಿಯವರು ಮಾತನಾಡಿ, ಶಿಕ್ಷಣದಿಂದ ಸರ್ವ ನೈತಿಕ ಬಲವರ್ಧನೆ ಶಕ್ತಿ ಸಾಧ್ಯ, ಡಾ, ಎಸ್,ರಾಧಾಕೃಷ್ಣನ್ ರವರು ದೇಶದ ಆದರ್ಶದ ಶಿಕ್ಷಕರಾಗಿ ಅವರ ಜನ್ಮ ದಿನವನ್ನು ಶಿಕ್ಷಕರಿಗೆಸಮರ್ಪಣೆ ಮಾಡಿದರು, ಮೌಲ್ಯಾಧಾರಿತ ಆದರ್ಶದ ಶಿಕ್ಷಕರನ್ನು ಗುರುತಿಸಿ ಗೌರವಿಸುವಲ್ಲಿ,. ಸಮಾಜದ ಸುಧಾರಣೆಗೆ ಮುನ್ನುಡಿಯಾಗುತ್ತದೆ ಎಂದರು, ಶೀಕ್ಷಕರು ದೇಶದ ಪರಿವರ್ತನೆಯ ರೂವಾರಿಗಳಾಗಿದ್ದಾರೆ, ಗುರುಗಳು ಮಕ್ಕಳಿಗೆ ಶಿಸ್ತು, ಶಾಂತಿ, ಸಂಸ್ಕಾರದ ಗುಣಧರ್ಮಗಳನ್ನು ಅಳವಡಿಸಬೇಕು, ಎಂದು ಅವರು ಮಾರ್ಮಿಕವಾಗಿ ಮಾತನಾಡಿದರು, ಕಸಾಪ ಹಿರಿಯ ನಿಕಟ ಪೂರ್ವ ಅಧ್ಯಕ್ಷರಾದ ಸಿದ್ದಲಿಂಗಣ್ಣ ಆನೆಗುಂದಿ ಮಾತನಾಡಿ, ಬಹುಮುಖ ಪ್ರತಿಭೆಯನ್ನೊಂದಿದ ರಾಷ್ಟ್ರದ ಆದರ್ಶ ಶಿಕ್ಷಕರಾಗಬೇಕು, ಶೈಕ್ಷಣಿಕ ಅಭಿವೃದ್ದಿ ಮಕ್ಕಳ ಭವಿಷ್ಯದ ಜಿವಾಳ ಶಿಕ್ಷಕರಲ್ಲಿದೆ, ಶಿಕ್ಷಕರು ದೇಶದ ಭದ್ರ ಬುನಾದಿಯ ಶಕ್ತಿಯಾಗಿದ್ದಾರೆ,ಎಂದರು,ಮುಖ್ಯ ಅತಿಥಿಗಳಾಗಿ ತಾಲುಕಾ ಕಸಾಪ ಅಧ್ಯಕ್ಷರಾದ ಡಾ, ರವಿಂದ್ರನಾಥ ಹೊಸಮನಿ,ಪತ್ರಕರ್ತರಾದ ಈರಣ್ಣ ಹಾದಿಮನಿ, ಸುಧೀಪ ಶಿಕ್ಷಣ ಸಂಸ್ಥಾಪಕರಾದ ಸಾಹೇಬಣ್ಣ ಪುರ್ಲೆ, ಕಸಾಪ ಗೌರವ ಕಾರ್ಯದರ್ಶಿ ಸುರೇಶ ಬಾಬು ಅರುಣ ',ಎಸ್,ಡಿ,ಎಮ್,ಸಿ,ಅಧ್ಯಕ್ಷರಾದ ಶರಣಪ್ಪ ಚಪಟ್ಲಾ,ಪ್ರೌಡ ಶಾಲಾ ಮುಖ್ಯಗುರುಗಳಾದ ನಿಂಗಣಗೌಡ ಪಾಟೀಲ್, ಪ್ರಾಥಮಿಕ ಶಾಲಾ ನೌಕರರ ಸಂಘದ ಕಾರ್ಯದರ್ಶಿಗಳಾದ ಶ್ರೀಮತಿ ಕಾವೇರಿ ಪಾಟೀಲ್, ನಿಲಯ ಮೇಲ್ವಿಚಾರಕರಾದ ಶ್ರೀಮತಿ ಪಾರ್ವತಿ ಜೋಗುರು,ವೆಂಕಟೇಶ ದೊರೆ ಹಾಜರಿದ್ದರು, ಈ ಸಂಧರ್ಭದಲ್ಲಿ ಆದರ್ಶ ಶಿಕ್ಷಕರಾದ ಸಂತೋಷ ಶಿಕ್ಷಕರು ಸ,ಪ್ರೌ,ಶಾಲೆ ಚಂದಾಪುರ,ರಮೇಶ ದಾಮಿನಿ ಶಿಕ್ಷಕರು ಆದರ್ಶ ಪ್ರೌ,ಶಾ, ಶಹಾಪುರ,ಗೌರಿಶ ಶಿಕ್ಷಕರ ಸ,ಕಿ,ಪ್ರಾ, ಶಾಲೆ ಕರಣಿಗಿ, ಶ್ರೀಮತಿ ರಾಜೇಶ್ವರಿ ಹೀರೆಮಠ ಸ,ಪ್ರೌ,ಶಾ;\. ಬೇವಿನಳ್ಳಿರವರಿಗೆ ಗೌರವಸಿ ಪ್ರಶಸ್ತಿ ನೀಡಲಾಯಿತು, ಕಸಾಪ ವಲಯ ಗೌರವಾಧ್ಯಕ್ಷರಾದ ಭೀಮನಗೌಡ ಹೀರೆಗೌಡ್ರು ಪ್ರಾಸ್ತಾವಿಕವಾಗಿ ಮಾತನಾಡಿದರು, ವಲಯ ಕಸಾಪ ಅಧ್ಯಕ್ಷರಾದ ಮಲ್ಲಣ್ಣ ಹೋಸಮನಿ ಮಾತನಾಡಿ ಇಂದಿನವರೆಗೂ ವಲಯ ಕಸಾಪದಿಂದ 60 ಜನ ಆದರ್ಶ ಶಿಕ್ಷಕರಿಗೆ ಗುರುತಿಸಿ ಗೌರವಿಸಿ ಪ್ರಶಸ್ತಿ ಪುರಷ್ಕಾರ ಮಾಡಲಾಗುತ್ತಿದೆ, ಎಂದರು, ಶ್ರೀಮತಿ ಜುಬೇದಬೇಗಂ, ಸ್ವಾಗತಿಸಿದರು, ಸಾಹೇಬಣ್ಣ ಹುಲಕಲ್ ಕಾರ್ಯಕ್ರಮ ನೀರೂಪಿಸಿದರು, ಕೊನೆಯಲ್ಲಿ ಗೌರವ ಕಾರ್ಯದರ್ಶಿ ಡಾ, ಮಾರ್ಥಂಡಪ್ಪ ವಂದಿಸಿದರು,ಶಾಲಾ ಮಕ್ಕಳು ಶಿಕ್ಷಕರು, ಶಿಕ್ಷಣಪ್ರೇಮಿಗಳು ಪಾಲ್ಗೊಂಡಿದ್ದರು,




ಹುಮನಾಬಾದ: 64ನೇ ಶಿಕ್ಷಕರ ದಿನಾಚರಣೆ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಪಟ್ಟಣದ ಬಸವರಾಜ್ ಹೆಚ್.ಪಾಟೀಲ ಮಂಟಪದಲ್ಲಿ ಸಡಗರ ಸಂಭ್ರಮ ಮಧ್ಯೆ ಶಿಕ್ಷಕರ ದಿನಾಚರಣೆ ಜರುಗಿತು. ರಾಮ ಮತ್ತು ರಾಜ್ ಶಾಲೆಯ ಮಕ್ಕಳು ಭರತ ನಾಟ್ಯ ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಮಕ್ಕಳಿಗೆ ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಭೀಮರಾವ ಪಾಟೀಲ, ಶಾಸಕ ಸಿದ್ಧಲಿಂಗಪ್ಪಾ ಪಾಟೀಲ ಶಾಲು ಹೊದಿಸಿ ಸನ್ಮಾನಿಸಿದರು. ಶಿಕ್ಷಕಿಯರಿದ್ದರು. ( ಮಲ್ಲಮ್ಮ ನುಡಿ ಚಿತ್ರ)

# ಯುವ ಜನಾಂಗದ ಬದುಕು ನುಂಗುತ್ತಿದೆ ಮೊಬೈಲ್

ಮೊಬೈಲ್ ಎಂದಾಕ್ಷಣ ಚಿಕ್ಕ ಮಕ್ಕಳನಿಂದ ಹಿಡಿದು ವೃದ್ಧಾಪ್ಯದ ಅಜ್ಜ-ಅಜ್ಜಿಯರು ಚಾರ್ಜ್ ಆಗಿ ಎಚ್ಚರಗೊಳ್ಳುತ್ತಾರೆ ಮೊಬೈಲ್ ಎಂಬ ಮಾಯಾಜಾಲ ಮಾನವ ಕುಲವನ್ನೇ ತನ್ನ ಬಲೆಯಲ್ಲಿ ಸೆಳೆದುಕೊಂಡು ಬದುಕಿನದ್ದಕ್ಕೂ ಹೆಣಕಾಡುವಂತೆ ಮಾಡುತ್ತಿದೆ.

ಮೊಬೈಲ್ ಹಿಡಿದುಕೊಳ್ಳುವ ಪ್ರತಿಯೊಬ್ಬರು ಹತೋಟಿ ಕಳೆದುಕೊಂಡು ಮೊಬೈಲ್ ಎಂಬ ಮಾಯಾಜಾಲ ಅತಿ ಹೆಚ್ಚು ಯುವಕ-ಯುವತಿಯರ ಮೇಲೆ ಪರಿಣಾಮ ಬೀರುತ್ತಿದ್ದು ಬದುಕನ್ನು ನುಂಗಿ ಹಾಕಿ ಜೀವನ ಕಟ್ಟಿಕೊಳ್ಳಬೇಕಾಗಿದ್ದ ಯುವ ಜನತೆಯ ಭವಿಷ್ಯವನ್ನೇ ಜಂಗಮವಾಣಿಗುಂಗು ಹಿಡಿಸಿ ಗುಂಗಿನ ವಾಣಿಯಾಗಿ ಪರಿವರ್ತನೆಯಾಗಿ ಹಾಳು ಮಾಡುತ್ತಿದ್ದು ಯುವಕ ಯುವತಿಯರು ಬದುಕು ಮೊಬೈಲ್ ಎಂಬ ಆಟದಲ್ಲಿ ಭವಿಷ್ಯ ಹಾಳು ಮಾಡಿಕೊಳ್ಳುತ್ತಿರುವ ಅದೆಷ್ಟು ಯುವಕ ಯುವತಿಯರು ಮೊಬೈಲ್ ಎಂಬ ಮಾಯೆ ನಂಬಿ ಜೀವನದ ಬದುಕನ್ನು ಹಾಳು ಮಾಡಿಕೊಂಡಿದ್ದು ಮೊಬೈಲ್ ಎನ್ನುವುದು ಯುವ ಜನತೆಯ ಮಾರ್ಗ ಬದಲಾವಣೆ ಮಾಡುವ ತಂತ್ರವಾಗಿ ತನ್ನ ಮಂತ್ರಶಕ್ತಿ ತೋರಿಸುತ್ತಾ ಯುವಜನತೆಯ ಬದುಕನ್ನು ನಿತ್ರಾಣದೆಡೆಗೆ ಒಯ್ಯುತ್ತಿರುವುದು ವಿಷಾಧನೀಯ ಎನಿಸಿದರು ಸತ್ಯ..

ಮೊಬೈಲ್ ಹೆಚ್ಚಿನ ಬಳಕೆಯಿಂದ ಆರೋಗ್ಯ ಮತ್ತು ಕೌಟುಂಬಿಕ ಸಮಸ್ಯೆ ತರುತ್ತದೆ ಎಂದು ಗೊತ್ತಿದ್ದರೂ ಅದಕ್ಕೆ ಅಂಟಿಕೊಂಡಿರುವುದು ಆರೋಗ್ಯ ಹಾಳು ಮಾಡಿಕೊಳ್ಳುವುದರ ಜೊತೆಗೆ ಅನೇಕ ತೊಂದರೆ ಅನುಭವಿಸುತ್ತಿದೇವೆ ಎಂದು ಗೊತ್ತಿದ್ದರೂ ಮೊಬೈಲ್ ಇಲ್ಲದೆ ಜೀವನ ಇಲ್ಲ ಎನ್ನುವಷ್ಟರ ಮಟ್ಟಿಗೆ ಉಪಯೋಗಿಸುತ್ತಿರುವುದು ಮಾನವರಿಗೆ ಮಾರಕವಾಗುತ್ತಿದೆ ಕಿವಿ ,ಕಣ್ಣು, ಮೆದಳು ಮತ್ತು ಹೃದಯಕ್ಕೆ ತೊಂದರೆ ಆಗುತ್ತಿದೆ ಎಂದು ಅನೇಕ ತಜ್ಞರು ಅಭಿಪ್ರಾಯ ವ್ಯಕ್ತಪಡಿಸುತ್ತ ಬಂದಿದ್ದರು ಅದರ ಯೋಚನೆ ಮಾಡುವ ಗೋಜಿಗೆ ಹೋಗದೆ ತಲೆಕೆಡಿಸಿಕೊಳ್ಳದೆ ದಿನ ಕಳೆದಂತೆ ಮೊಬೈಲಿಗೆ ಹೆಚ್ಚು ಅಂಟಿಕೊಳ್ಳುತ್ತಿರುವುದು ಆರೋಗ್ಯ ಮತ್ತು ಕೌಟುಂಬಿಕ ಸಮಸ್ಯೆಗೆ ಒಳಗಾಗಿ ಅನಾಹುತಗಳು ಹೆಚ್ಚಾಗುತ್ತಿದ್ದರು ಮೊಬೈಲ್ ಉಪಯೋಗಿಸುವುದು ಮಾತ್ರ ಕಡಿಮೆಯಾಗುತ್ತಿಲ್ಲ.

ಮೊಬೈಲ್ ಮೂಲಕ ಯೂಟ್ಯೂಬ್ ಫೇಸ್ಬುಕ್ ವಾಟ್ಸಪ್ ಇನ್ಸ್ಟಾಗ್ರಾಮ್ ನಲ್ಲಿ ಅನೇಕ ಸಂದೇಶಗಳಿಂದ ಇವತ್ತಿನ ಯುವಜನತೆ ಹೊಸ ಹೊಸ ಆವಿಷ್ಕಾರಗಳನ್ನು ಕಂಡು ಹಿಡಿದು ತಮ್ಮ ಭವಿಷ್ಯದ ಜೀವನದ ಬದುಕನ್ನು ಮೊಬೈಲ್ ಮೂಲಕವೇ ಕಟ್ಟಿಕೊಂಡು ಅದ್ದೂರಿ ಬದುಕು ನಡೆಸುತ್ತಿರುವ ಅನೇಕ ಯುವಕರ ಮಧ್ಯೆ ಕೆಲವೊಂದಿಷ್ಟು ಯುವಕರು ಮೊಬೈಲ್ ಮಾಯಾಜಾಲದಲ್ಲಿ ಮುಳುಗಿ ಹಾಳು ದಾರಿ ಹಿಡಿದು ಹಾಳಾಗುತ್ತಿರುವ ಅನೇಕ ಯುವಕರು ಆನ್ಲೈನ್ ನಲ್ಲಿ ಬರುವ ಗೇಮ್ ಗಳ ಮೂಲಕ ತಮ್ಮ ಭವಿಷ್ಯದ ಬದು-ಕಿಗೆ ತಾವೇ ಕೊಳ್ಳಿ ಇಟ್ಟುಕೊಂಡು ಮೊಬೈಲ್ ಗೇಮ್ ನಿಂದ ಆತ್ಮಹತ್ಯೆ ಮಾಡಿಕೊಂಡ ಸಾಕಷ್ಟು ಯುವಕರು ಉದಾಹರಣೆಗಳು ನಮ್ಮ ಕಣ್ಣು ಮುಂದೆ ಇವೆ ಅಂದರೆ ಇದರ ಅರ್ಥ ಮೊಬೈಲ್ ಉಪಯೋಗಿಸುವುದು



ತಪ್ಪು ಎಂದರ್ಥ ಅಲ್ಲ ಊಟದಲ್ಲಿ ಹರಳು ಬಂದಾಗ ಆ ತುತ್ತನ್ನೇ ನಾವು ಉಗಿದು ಬಿಡುತ್ತೇವೆ ಒಳ್ಳೆ ಆಹಾರವನ್ನು ಮಾತ್ರ ಹೇಗೆ ಸೇವಿಸುತ್ತೇವೆಯೋ, ಅದೇ ರೀತಿ ಮೊಬೈಲ್ ನಮ್ಮ ಬದುಕಿನಲ್ಲಿ ಉಪಯೋಗಿಸಿಕೊಳ್ಳುವುದು ಕಲಿತಾಗ ಮಾತ್ರ ಈ ಮೊಬೈಲ್ ನಿಂದ ಬಚಾವಾಗಲು ಸಾಧ್ಯ ಮೊಬೈಲ್ ನಲ್ಲಿ ಬರುವ ಒಳ್ಳೆಯ ಸಂದೇಶ ತೆಗೆದುಕೊಂಡು ಕೆಟ್ಟ ಸಂದೇಶ ದೂರು ಮಾಡಿದರೆ ಮಾತ್ರ ಈ ಮೊಬೈಲ್ ಮಾಯಾಜಾಲದಿಂದ ಬದುಕಲು ಸಾಧ್ಯ ಇಲ್ಲದಿದ್ದರೆ ಈ ಮೊಬೈಲ್ ಎನ್ನುವ ಮಾಯಾಜಾಲ ಭವಿಷ್ಯದ ಬದುಕನ್ನು ನುಂಗಿ ಹಾಕಿ ಜೀವ ಕಳೆದುಕೊಳ್ಳುವ ಹಂತದವರಿಗೂ ಪರಿವರ್ತನೆ ಮಾಡುವ ಶಕ್ತಿ ಈ ಮೊಬೈಲ್ ಜಾಲತಾಣಕ್ಕಿದೆ ಎನ್ನುವುದು ತಪ್ಪಲ್ಲ...

ಯುವಜನತೆ ಮೊಬೈಲ್ ಗುಂಗಿನಲ್ಲಿ ಪೋಷಕರು ದಂಗಾಗುವಂತೆ ಮಗ್ನರಾಗಿದ್ದು ವಾಟ್ಸಾಪ್ ಇನ್ಸ್ಟಾಗ್ರಾಮ್ ಮೂಲಕ ಹಲೋ ಹಾಯ್ ಎಂದು ಪ್ರಾರಂಭವಾಗುವ ಸಂದೇಶಗಳು ಪ್ರೀತಿ ಪ್ರೇಮ ಪ್ರಣಯಕ್ಕೆ ತಿರುಗಿ ದೈಹಿಕ ಸಂಬಂಧದವರೆಗೂ ತನ್ನ ಮಾಯಾಜಾಲದಲ್ಲಿ ಸೆಳೆದು ಬಿಡುವದು ಮೊಬೈಲ್ ನ್ನು ಉಪಯೋಗಿಸುವಾಗ ಜಾಗೃತರಾಗಿರದಿದ್ದರೆ ಭವಿಷ್ಯದ ಬದುಕನ್ನು ಕಸಿದು ಹೊಸೆದು ಹಾಕಿಬಿಡುತ್ತದೆ ಮದುವೆ ಆಗಬೇಕೆಂದರೆ ಎರಡು ಮನೆಯ ಕಡೆಯವರು ಒಪ್ಪಿಗೆ ಕೊಟ್ಟ ಮೇಲೆ ಹಿರಿಯರ ಸನ್ಮುಖದಲ್ಲಿ ಮಾಡುವ ಮದುವೆ ಒಪ್ಪಿಗೆ ಸಹಿತ ಮದುವೆ ಎನ್ನುತ್ತೇವೆ ಆದರೆ ಇವತ್ತಿನ ದಿನಮಾನದಲ್ಲಿ ಮೊಬೈಲ್ ಮೂಲಕ ಪರಿಚಯ ಆಗುವ ಹುಡುಗ ಹುಡುಗಿಯರು ಯಾವ ಹಿರಿಯರು ಸಂಬಂಧಿಕರು ಶಾಸ್ತ್ರಿಗಳು ಇಲ್ಲದೆ ಮೊಬೈಲ್ ನಲ್ಲಿಯೇ ಮದುವೆ ಹಂತಕ್ಕೆ ಹೋಗಿ ತಾವೇ ನಿರ್ಧಾರ ಮಾಡಿಕೊಳ್ಳುವಂತ ಸ್ಥಿತಿಗೆ ಬಂದು ನಿಂತಿದ್ದಾರೆ ಇವತ್ತಿನ ಯುವ ಜನತೆ ಒಮ್ಮೆ ಮದುವೆಯಾದರೆ ಸಾವಿರ ವರ್ಷ ಸಂಬಂಧಗಳು ಎನ್ನುವ ಹಿರಿಯರ ಮಾತಿಗೆ ಎಳ್ಳಷ್ಟು ಕಿಮ್ಮತ್ತು ಇಲ್ಲದಂತಾಗುತ್ತಿದೆ ಪರಸ್ಪರ ಅವರವರ ಗುಣ ಸ್ವಭಾವ ಅರಿಯದೆ ಯುವಕ ಯುವತಿಯರು ಮೊಬೈಲ್ ನಲ್ಲಿಯೇ ಪ್ರೀತಿ ಪ್ರೇಮದ ಅಂಕುರವನ್ನು ಬೆಳೆಸಿಕೊಂಡು ತಂದೆ ತಾಯಿಗಳ ಅನುಮತಿ ಪಡೆಯದೆ ಮದುವೆ ಹಂತಕ್ಕೆ ಮುಟ್ಟಿ ಆಗಿಂದಾಗಲೇ ರಜಿಸ್ಟರ್ ಮ್ಯಾರೇಜ್ ಆಗಿಬಿಡುತ್ತಾರೆ ಸ್ವಲ್ಪ ದಿನ ಕಳೆದ ನಂತರ ಪ್ರೀತಿಸಿ ಮದುವೆಯಾದ ಯುವಕ ಯುವತಿಯರ ವೈಮನಸ್ಸು ಪ್ರಾರಂಭವಾಗಿ ಕೇವಲ ಐದಾರು ತಿಂಗಳಲ್ಲಿ ಡೈವರ್ಸ್ ಗೆ ಬಂದು ನಿಂತಾಗ ಅವರ ಕುಟುಂಬ ಮತ್ತು ಸಂಬಂಧಿಕರ ಸಂಪರ್ಕ ಬೆಳೆಸುವ ಪ್ರಯತ್ನ ಮಾಡುತ್ತಾರೆ ಮಿಂಚಿಹೋದ ಕಾಲಕ್ಕೆ ಚಿಂತಿಸಿ



**ಜಗದೀಶ.ಎಸ್.ಗಿರಡ್ಡಿ.**
**ಲೇಖಕರು.**
**ಗೊರಬಾಳ.**
**ಮೊ.9902470856**

ಫಲವೇನು ಎಂಬಂತೆ ಮೊಬೈಲ್ ನಿಂದ ಪ್ರಾರಂಭವಾದ ಪ್ರೀತಿ ಪ್ರೇಮ ಪ್ರಣಯ ಮದುವೆಯಾಗಿ ಪರಿವರ್ತನೆ ಆಗುವಾಗ ವಿಚಾರ ಮಾಡದ ಯೌವ್ವನ ತುಂಬಿದ ಯುವಕ ಯುವತಿಯರು ಇವತ್ತಿನ ಸಣ್ಣಪುಟ್ಟ ಮನಸ್ತಾಪಗಳಿಂದ ವಿಚ್ಛೇದನ ವರೆಗೂ ಬಂದು ನಿಲ್ಲುವ ತಾತ್ಕಾಲಿಕ ಮದುವೆಗಳು ಸಾವಿರ ವರ್ಷದ ಸಂಬಂಧಗಳಾಗಿ ನಿಲ್ಲಲು ಸಾಧ್ಯ ಎನ್ನುವ ವಿಚಾರವನ್ನು ಮದುವೆಯಾಗುವಾಗ ವಿಚಾರಿಸಿದರೆ ಈ ರೀತಿ ಆಗುತ್ತಿರಲಿಲ್ಲ ಎಂದು ಪಶ್ಚಾತಾಪ ಪಟ್ಟ ಅನೇಕ ಉದಾಹರಣೆಗಳು ಇವತ್ತಿನ ಸಮಾಜದಲ್ಲಿ ಕಾಣ ಸಿಗುತ್ತವೆ ಹಾಗಾಗಿ ತಂದೆ ತಾಯಿಗಳು ಮಕ್ಕಳಿಗೆ ಮೊಬೈಲ್ ಕೊಡಿಸಿ ಸುಮ್ನೆ ಕುಂದ್ರುವುದಷ್ಟೇ ಅಲ್ಲ ದಿನಂಪ್ರತಿ ಮಕ್ಕಳುಗಳು ಮೊಬೈಲ್ನಲ್ಲಿ ಏನು ಮಾಡುತ್ತಾರೆ ಯಾರ ಜೊತೆ ಹೇಗೆ ವರ್ತಿಸುತ್ತಾರೆ ಎನ್ನುವುದನ್ನು ಗಮನ ಹರಿಸಬೇಕಾದ ಜವಾಬ್ದಾರಿಯು ತಂದೆ ತಾಯಿಗಳ ಮೇಲಿದೆ ತಂದೆ ತಾಯಿಗಳು ಮೊಬೈಲ್ ಗಮನಿಸಲು ಹೋದಾಗ ಮಕ್ಕಳು ವಿರೋಧ ಮಾಡುತ್ತಾರೆ ಎಂದರೆ ಈ ಮೊಬೈಲ್ ನಿಂದ ಏನೋ ಅವಾಂತರ ನಡೆಯುತ್ತಿದೆ ಎನ್ನುವುದು ಮನನ ಮಾಡಿಕೊಳ್ಳದಿದ್ದರೆ ನಮ್ಮ ಮಗ ಅಥವಾ ಮಗಳು ದಾರಿ ತಪ್ಪುತ್ತಿದ್ದಾರೆ ಎನ್ನುವ ವಿಚಾರ ಗಣನಿಗೆ ತೆಗೆದುಕೊಳ್ಳದೆ ಇರುವುದೇ ಇವತ್ತಿನ ಮೊಬೈಲ್ ಅವಾಂತರಕ್ಕೆ ಕಾರಣವಾಗುತ್ತಿದೆ....

ಮೊಬೈಲ್ ನಿಂದ ಪ್ರೀತಿ ಪ್ರೇಮ ಪ್ರಣಯದಲ್ಲಿ ಮಗ್ನ ವಾಗುವ ಹುಚ್ಚು ಪ್ರೀತಿಯನ್ನು ಮನಸ್ಸಿಗೆ ಹಚ್ಚಿಕೊಂಡು ಯುವ ಜನತೆ ತಮ್ಮ ಭವಿಷ್ಯದ ಜೀವನದ ಬದುಕನ್ನು ಮರೆತು ಸಂಪೂರ್ಣ ಪ್ರೀತಿಯಲ್ಲಿ ಮಗ್ನರಾಗಿ ತಂದೆ ತಾಯಿ ಬಂಧು ಬಳಗ ಅಣ್ಣ ತಮ್ಮ ಅಕ್ಕ ತಂಗಿ ಭಾವಮೈದುನ ಎಲ್ಲ ಸಂಬಂಧಗಳನ್ನು ಕಳಚಿಕೊಂಡು ಬರಿ ಪ್ರೀತಿ ಮಾಡಿದ ಹುಡುಗಿಯ ಜೊತೆನೇ ದಿನ ಪೂರ್ತಿ ಕಳೆಯಬೇಕೆಂಬ ಅಭಿಲಾಷೆಯಿಂದ ಮೊಬೈಲ್ ಮೂಲಕವೇ ತಮ್ಮ ಪ್ರೀತಿಯ ಹುಚ್ಚನ್ನು ಹೆಚ್ಚಿಸಿಕೊಂಡು ಮಗ್ನರಾಗಿ ನಿನ್ನ ಬಿಟ್ಟರೆ ನಾನು ಇರಲ್ಲ ನನ್ನ ಬಿಟ್ಟರೆ ನೀನು ಇರಲ್ಲ ಎನ್ನುವಷ್ಟರ ಮಟ್ಟಿಗೆ ಪಾಗಲ್ ಪ್ರೇಮಿಗಳಾಗಿ ಬಿಡುತ್ತಾರೆ ಕುಂತರೂ ನಿಂತರು ಎದ್ದರೂ ಮೊಬೈಲ್ ಇಲ್ಲದೆ ಬದುಕಲಿಕ್ಕೆ ಆಗುವುದಿಲ್ಲ ಎನ್ನುವಂತೆ ವರ್ತಿಸಲು ಪ್ರಾರಂಭಿಸಿ ತಂದೆ ತಾಯಿ ಪೋಷಕರುಗಳಿಗೆ ಸಂಕಷ್ಟ ಮತ್ತು ಸಂದಿಗ್ಧ ಪರಿಸ್ಥಿತಿ ಬಂದುಬಿಟ್ಟಿದೆ ಮಕ್ಕಳ ವರ್ತನೆಯಿಂದ ತಂದೆ ತಾಯಿಗಳು ದಿನಂಪ್ರತಿ ಕಣ್ಣೀರಿನಲ್ಲಿ ಕೈ ತೊಳೆಯುವಂತ ವಾತಾವರಣ ಮನೆಯಲ್ಲಿ ನಿರ್ಮಾಣ ಮಾಡಿ ತಾವು ಮಾತ್ರ ಹುಡುಗ ಹುಡುಗಿಯರು ತಮ್ಮ ಪ್ರೇಮಿಯ ಜೊತೆ ಹಾಯಾಗಿ ಜೀವನ ಕಳೆಯುತ್ತಿದ್ದು ತಂದೆ ತಾಯಿ ಪೋಷಕರ ಗೋಳು ದೇವರೇ ಬಲ್ಲ ಎನ್ನುವಂತ ಪರಿಸ್ಥಿತಿ ನಿರ್ಮಾಣವಾಗಿ ಬಿಟ್ಟಿದೆ ಹಾಗಾಗಿ ಮೊಬೈಲ್ ಕೊಡುವುದು ಎಷ್ಟು ಸರಿನೋ ಆ ಮೊಬೈಲ್ ನಿಂದ ನಮ್ಮ ಮಕ್ಕಳು ಏನು ಮಾಡುತ್ತಿವೆ ಏನೆಲ್ಲಾ ಮಾಡುತ್ತಿದ್ದಾರೆ ಅದರಿಂದ ಒಳ್ಳೇದು ಮಾಡುತ್ತಿವೆಯೋ ಕೆಟ್ಟದ್ದು ಮಾಡುತ್ತಿವೆಯೋ ಎನ್ನುವ ಗಮನ ಹರಿಸದಿದ್ದರೆ ಮುಂದೊಂದು ದಿನ ತಂದೆ ತಾಯಿಗಳಿಗೆ ಮುಳ್ಳಾಗುವುದರಲ್ಲಿ ಯಾವ ಸಂದೇಹವೂ .

ಹೆಚ್ಚಾಗಿ ಇನ್ನು ಮದುವೆಯಾಗದ ಯುವಜನತೆಯನ್ನು ತನ್ನತ್ತ ಸೆಳೆಯುವ ಮೊಬೈಲ್ ಒಳ್ಳೆಯದನ್ನು ಕಲಿಸುತ್ತದೆ ಕೆಟ್ಟದ್ದನ್ನು ಕಲಿಸುತ್ತದೆ ಕಲಿಯುವವರು ಮಾತ್ರ ಅದರ ಬಗ್ಗೆ ಸರಿಯಾದ ನಿರ್ಧಾರ ಕೈಗೊಂಡಾಗ ಮಾತ್ರ ಮೊಬೈಲ್ ಮಾಯಾಜಾಲದಿಂದ ಉತ್ತಮ ಬದುಕು ಕಟ್ಟಿಕೊಳ್ಳಬಹುದು ಮೊಬೈಲ್ ಉಪಯೋಗಿಸುವಾಗ ಸ್ವಲ್ಪ ದಾರಿ ತಪ್ಪಿದರೂ ಯುವಕರು ಭವಿಷ್ಯ ಹಾಳು ಮಾಡಿಕೊಳ್ಳುವ ಹಂತಕ್ಕು ಹೋಗಿ ಸಮಸ್ಯೆ ಅನುಭವಿಸುತ್ತಿರುವ ಸಾಕಷ್ಟು ಯುವಕರನ್ನು ಇವತ್ತಿನ ಸಮಾಜದಲ್ಲಿ ನೋಡುತ್ತಿದ್ದೇವೆ ಮೊಬೈಲ್ ಎನ್ನುವ ಮಾಯಾಜಾಲ ಶಿಕ್ಷಣ ಪಡೆಯುತ್ತಿರುವ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಅವಶ್ಯಕತೆ ಇದೆ ಎನ್ನುವುದು ಎಲ್ಲರಿಗೂ ಗೊತ್ತು ಆದರೆ ತಂದೆ ತಾಯಿಗಳು ಕಷ್ಟಪಟ್ಟು ಕೊಡಿಸುವ ಮೊಬೈಲ್ ನಿಂದ ಶಿಕ್ಷಣಕ್ಕೆ ಉಪಯೋಗಿಸಿದರೆ ಮಾತ್ರ ಅದರಿಂದ ಅದ್ದೂರಿಯದ ಭವಿಷ್ಯದ ಬದುಕನ್ನು ಕಟ್ಟಿಕೊಳ್ಳಬಹುದು ಆದರೆ ಇವತ್ತಿನ ಯುವಕ ಯುವತಿಯರು ಅದೇ ಮೊಬೈಲ್ ನಿಂದ ಅನ್ಯ ಮಾರ್ಗ ಹಿಡಿದು ತಮ್ಮ ಭವಿಷ್ಯದ ಬದುಕನ್ನು ಹಾಳು ಮಾಡಿಕೊಂಡು ತಮ್ಮ ಜೀವಕ್ಕೆ ತಾವೇ ಕೊಳ್ಳೆ ಇಟ್ಟುಕೊಳ್ಳುತ್ತಿದ್ದಾರೆ ಎನ್ನುವುದು ಸತ್ಯವಾಗಿದೆ

ತಮ್ಮ ಮಕ್ಕಳ ಕೈಗೆ ಮೊಬೈಲ್ ಕೊಡುವ ತಂದೆ ತಾಯಿಗಳೆ ಮೊಬೈಲ್ ಕೊಡಿಸುವುದು ತಪ್ಪಲ್ಲ ಕೊಡಿಸಿದ ನಂತರ ಅವರ ಚಲನವಲನಗಳ ಬಗ್ಗೆ ಪ್ರತಿದಿನ ನಾವು ಗಮನಿಸಿದಾಗ ಮಾತ್ರ ಅದರಿಂದ ಸೇಫ್ ಆಗಿ ಇದ್ದಾರೆ ಎನ್ನುವುದು ನಮಗೆ ಮನವರಿಕೆ ಆಗುತ್ತದೆ ಮೊಬೈಲ್ ನಿಂದ ದಾರಿ ತಪ್ಪಿದ ಮಕ್ಕಳು ತಂದೆ ತಾಯಿಗಳಷ್ಟೇ ಅಲ್ಲ ಯಾರ ಮಾತನ್ನು ಕೇಳುವ ಪರಿಸ್ಥಿತಿಯಲ್ಲಿ ಇರುವುದಿಲ್ಲ ಪ್ರೀತಿಯೆಂಬ ಮಾಯಾಜಾಲದಲ್ಲಿ ಬಿದ್ದಂತ ಯುವ ಜನತೆಯಂತೂ ತಾವು ಇರುವ ಜಗತ್ತನ್ನೇ ಮರೆತು ತಮ್ಮದೇ ಆದ ಇನ್ನೊಂದು ಜಗತ್ತಿನಲ್ಲಿ ಮಗ್ನರಾಗಿ ಹುಚ್ಚರಾಗುವವರೆಗೂ ಮುಂದುವರೆಯುತ್ತಾರೆ ಹಾಗಾಗಿ ಮೊಬೈಲ್ ಉಪಯೋಗಿಸುವ ಮಕ್ಕಳ ಮೇಲೆ ತಂದೆ ತಾಯಿಯ ಅದ್ದಿನ ಕಣ್ಣಿನ ನಿಗಾ ಇರದಿದ್ದರೆ ಬೇಲಿಯೇ ಎದ್ದು ಹೊಲ ಮೈದಂತೆ ತಂದೆ ತಾಯಿಗಳೆ ಮಕ್ಕಳ ಭವಿಷ್ಯಕ್ಕೆ ಕುತ್ತಾಗುತ್ತಾರೆ ಎನ್ನುವುದು ಈಗಾಗಲೇ ಜಗಜ್ಜಯಿರಾಗಿದೆ.....

# ಸಾರ್ವಜನಿಕರು ಬಾಕಿ ಇರುವ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳಿ: ನ್ಯಾಯಾಧೀಶ ಪ್ರಮೋದ್ ಬಿ.ಜಿ ಕರೆ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಸೆ.06–ರಾಷ್ಟ್ರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಗಳ ನಿರ್ದೇಶನದಂತೆ, ಬಳ್ಳಾರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಇದೇ ಸೆ.13 ರಂದು ಈ ವರ್ಷದ ಮೂರನೇ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಲಿದ್ದು, ಸಾರ್ವಜನಿಕರು ಬಾಕಿ ಇರುವ ತಮ್ಮ ವ್ಯಾಜ್ಯಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಮೋದ್ ಬಿ.ಜಿ ಅವರು ಕರೆ ನೀಡಿದರು.

ನಗರದ ತಾಳೂರು ರಸ್ತೆಯ ನೂತನ ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಮೂರನೇ ಮಹಡಿಯ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಉಭಯ ಕಕ್ಷಿದಾರರ ಪರಸ್ಪರ ಹೊಂದಾಣಿಕೆಗಾಗಿ ಮತ್ತು ತ್ವರಿತ ನ್ಯಾಯಕ್ಕಾಗಿ ರಾಷ್ಟ್ರೀಯ ಲೋಕ್ ಅದಾಲತ್ ಸಹಕಾರಿ. ಅಖಂಡ (ಬಳ್ಳಾರಿ ಮತ್ತು ವಿಜಯನಗರ) ಜಿಲ್ಲೆಯ 31 ನ್ಯಾಯಾಲಯಗಳಲ್ಲಿ ಅಂದು ಬಗೆಹರಿಸಬಹುದಾದ ವಿವಿಧ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು ಹಾಗೂ ನ್ಯಾಯಾಲಯದ ಶುಲ್ಕವನ್ನು ಮರು ಪಾವತಿಸಲಾಗುತ್ತದೆ ಎಂದರು.

ವೈವಾಹಿಕ, ಕೌಟುಂಬಿಕ, ಮೋಟಾರು ಅಪಘಾತ, ಚೆಕ್ ಅಮಾನ್ಯದ, ವಾಣಿಜ್ಯ, ಸೇವಾ ಪ್ರಕರಣಗಳು ಮತ್ತು ರಾಜೀಯಾಗಬಲ್ಲ, ಗ್ರಾಹಕ ವ್ಯಾಜ್ಯ, ಡಿಆರ್ ಟಿ, ಪಾಲುದಾರಿಕೆ, ಸಾರಿಗೆ ಹಾಗೂ ಇತರೇ ಸಿವಿಲ್ ಪ್ರಕರಣಗಳು ಸೇರಿದಂತೆ ಎಲ್ಲಾ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಅವರು ಹೇಳಿದರು.

ಲೋಕ್ ಅದಾಲತ್ ನಲ್ಲಿ ಜನರಿಗೆ ಸುಲಭವಾಗಿ, ವೇಗವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ನ್ಯಾಯ ಒದಗಿಸಲಾಗುತ್ತದೆ. ಇದರಿಂದ ನ್ಯಾಯಾಲದ ಮೇಲಿನ ಹೊರೆ ಇಳಿಕೆಯಾಗಲಿದೆ. ನ್ಯಾಯಾಧೀಶರು ಹೆಚ್ಚು ಸಂಕೀರ್ಣವಾದ ಪ್ರಕರಣಗಳ ಮೇಲೆ ಗಮನ ಕೇಂದ್ರೀಕರಿಸಲು ಸಹಾಯವಾಗುತ್ತದೆ ಎಂದು ಹೇಳಿದರು.



*"ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ – 90 ದಿನಗಳ ವಿಶೇಷ ಅಭಿಯಾನ:*

ಜಿಲ್ಲೆಯ ನ್ಯಾಯಾಲಯಗಳಲ್ಲಿ ಬಾಕಿ ಪ್ರಕರಣಗಳ ವಿಲೇವಾರಿಗಾಗಿ ಈಗಾಗಲೇ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಕಳೆದ ಜುಲೈ 1 ರಿಂದ ಆರಂಭಗೊಂಡಿರುವ "ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ – 90 ದಿನಗಳ ವಿಶೇಷ ಅಭಿಯಾನ" ಬರುವ ಅಕ್ಟೋಬರ್ 07 ರಂದು ಮುಕ್ತಾಯಗೊಳ್ಳಲಿದ್ದು, ಹೆಚ್ಚಿನ ಸಂಖ್ಯೆಯ ಕಕ್ಷಿದಾರರು ಇದರ ಲಾಭ ಪಡೆಯುವ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬೇಕು ಎಂದು ಸಹ ಅವರು ಹೇಳಿದರು.

ಇದು ರಾಜ್ಯವ್ಯಾಪಿ ನಡೆಯುತ್ತಿರುವ ಅಭಿಯಾನವಾಗಿದ್ದು, ತರಬೇತಿ ಪಡೆದ ನುರಿತ ಹಿರಿಯ ವಕೀಲರು ಮಧ್ಯಸ್ಥಿಕೆ ವಹಿಸುತ್ತಾರೆ. ಜಿಲ್ಲೆಯಲ್ಲೂ ತರಬೇತಿ ಪಡೆದ ವಕೀಲರಿಂದ ಯಶಸ್ವಿಯಾಗಿ ನಡೆಯುತ್ತಿದೆ. ಇಲ್ಲಿ ಉಭಯ ಪಕ್ಷಗಾರರನ್ನು ಕರೆಸಿಕೊಂಡು ನ್ಯಾಯಾಲಯಗಳ ಮಧ್ಯಸ್ಥಿಕೆ ಕೇಂದ್ರಗಳಲ್ಲಿ ರಾಜೀ ಸಂಧಾನ ಮಾಡುವ ಮೂಲಕ ಬಗೆಹರಿಸಲಾಗುತ್ತದೆ. ಇದನ್ನು ಗೌಪ್ಯವಾಗಿಯೂ ಸಹ ಇಡಲಾಗುತ್ತದೆ. ಇಂತಹ ವಿಶೇಷ ಅವಕಾಶದ ಸದುಪಯೋಗಪಡೆದುಕೊಳ್ಳಬಹುದು ಎಂದು ಅವರು ಹೇಳಿದರು.

*ದಂಡ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ:*

ರಾಜ್ಯ ಸರ್ಕಾರವು ಪೊಲೀಸ್ ಇಲಾಖೆಯ ಸಂಚಾರಿ ಇ–ಚಾನೆಲ್ ನಲ್ಲಿ ದಾಖಲಾಗಿರುವ ಬಾಕಿ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಿದ್ದು, ಸೆ.12 ರ ವರೆಗೆ ಈ ರಿಯಾಯಿತಿ ಸೌಲಭ್ಯವು ಇರಲಿದೆ. ಸೆಪ್ಟೆಂಬರ್ 13 ರಂದು ನಡೆಯಲಿರುವ ರಾಷ್ಟ್ರೀಯ ಲೋಕ್ ಅದಾಲತ್ ಪ್ರಯುಕ್ತ ಈ ರಿಯಾಯಿತಿ ನೀಡಲಾಗಿದೆ. ಸಾರ್ವಜನಿಕರು ಈ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಮಾತನಾಡಿ, ಮಕ್ಕಳಿಗೆ, ಮಹಿಳೆಯರಿಗೆ, ಹಿರಿಯ ನಾಗರಿಕರಿಗೆ ಮತ್ತು ದುರ್ಬಲ ವರ್ಗದ ಜನರಿಗೆ ಕಾನೂನಿನ ನೆರವು ನೀಡಲು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ತಿಳಿಸಿದರು.

ಮಾನವ ಕಳ್ಳ ಸಾಗಾಣಿಕೆ ಮತ್ತು ವಾಣಿಜ್ಯ ಲೈಂಗಿಕ ಶೋಷಣೆ ಸಂತ್ರಸ್ತರಿಗೆ, ಅಸಂಘಟಿತ ವಲಯ ಕಾರ್ಮಿಕರಿಗೆ, ಮಾನಸಿಕ ಅಸ್ವಸ್ಥತೆ ಮತ್ತು ಬುದ್ಧಿ ಮಾಂದ್ಯತೆ ಇರುವ ವ್ಯಕ್ತಿಗಳಿಗೆ ಕಾನೂನು ಸೇವೆಗಳು, ಬುಡಕಟ್ಟು ಹಕ್ಕುಗಳ ರಕ್ಷಣೆ ಮತ್ತು ಜಾರಿ, ಬಡತನ ನಿವಾರಣಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಆಸಿಡ್ ದಾಳಿಯ ಸಂತ್ರಸ್ತರಿಗೆ ಕಾನೂನು ಸೇವೆಗಳ ಒದಗಿಸುವ ಯೋಜನೆಗಳನ್ನು ಜಾರಿಗೊಳಿಸಿರುವುದಲ್ಲದೇ, ಅವುಗಳನ್ನು ಜನ ಸಾಮಾನ್ಯರಲ್ಲಿ ಅರಿವು ಮೂಡಿಸುವ ಗುರಿಯನ್ನು ಸಹ ಹೊಂದಲಾಗಿದೆ ಎಂದು ಅವರು ವಿವರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯದ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.

# ಸಾಮಾನ್ಯ ಜ್ವರ; ಸಾರ್ವಜನಿಕರು ಗಾಬರಿಗೊಳ್ಳುವ ಅಗತ್ಯವಿಲ್ಲ– ಡಿಹೆಚ್ಒ ಡಾ.ಯಲ್ಲಾ ರಮೇಶ್ ಬಾಬು

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮಳೆಯಿಂದ ಜಿಲ್ಲೆಯಾದ್ಯಂತ ವಾತಾವರಣ ಬದಲಾಣೆಯಿಂದ ಸಾಮಾನ್ಯ ಜ್ವರ ಪ್ರಕರಣಗಳು ಕಂಡು ಬಂದಿದ್ದು, ಈ ಹಿನ್ನಲೆಯಲ್ಲಿ ಅಗತ್ಯ ಔಷಧಿಗಳನ್ನು ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆಗಳಲ್ಲಿ ದಸ್ತಾನು ಇಡಲಾಗಿದೆ. ಸಾರ್ವಜನಿಕರು ಗಾಬರಿಗೊಳ್ಳುವ ಅಗತ್ಯವಿಲ್ಲ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಜಿಲ್ಲೆಯಲ್ಲಿ ಜ್ವರ ಪ್ರಕರಣಗಳು ಹೆಚ್ಚಾಗಿ ಕಂಡು ಬಂದ ಹಿನ್ನಲೆಯಲ್ಲಿ ಶನಿವಾರ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ದಾಖಲಾದ ರೋಗಿಗಳ ಯೋಗಕ್ಷೇಮ ಮತ್ತು ಆರೋಗ್ಯ ವಿಚಾರಿಸಿ ಮಾತನಾಡಿದರು.

ಮಳೆ ಬಂದಿರುವ ಹಿನ್ನಲೆಯಲ್ಲಿ ವೈರಸ್‌ಗಳು ಸಾಮಾನ್ಯವಾಗಿದ್ದು, ಶೀತ ತಾಪಮಾನದಲ್ಲಿಯೂ ಸಹ ಉತ್ಪತ್ತಿಯಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಸಾರ್ವಜನಿಕರು ಪೌಷ್ಟಿಕ ಮತ್ತು ಬೆಚ್ಚಗಿನ ಆಹಾರ ಸೇವಿಸಬೇಕು ಎಂದು ನಿರ್ದೇಶನ ನೀಡಿದರು.

ರೋಗನಿರೋಧಕ ಶಕ್ತಿಯನ್ನು ಬಲಪಡಿಸಲು ಮತ್ತು ವೈರಲ್ ಕಾಯಿಲೆಗಳನ್ನು ಎದುರಿಸಲು ಆರೋಗ್ಯಕರ ಜೀವಸತ್ವವುಳ್ಳ ಆಹಾರ ಸೇವಿಸಬೇಕು. ಕಲುಷಿತ ನೀರನ್ನು ಕುಡಿವುದನ್ನು ತಪ್ಪಿಸಬೇಕು. ಮನೆಯ ಸುತ್ತ ಮುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಸಾರ್ವಜನಿಕರಿಗೆ ವಿನಂತಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಶುಶೂಷ್ರಕ ಅಧೀಕ್ಷಕಿ ವಿಮಲಾ ಸೇರಿದಂತೆ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# "ಮೈಸೂರು ದಸರಾ ಕನ್ನಡ ಪುಸ್ತಕ ಮಾರಾಟ ಮೇಳ"; ಮಳಿಗೆ ಕಾಯ್ದಿರಿಸಲು ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಸೆ.06–ಮೈಸೂರು ದಸರಾ ಉತ್ಸವ–2025ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ದಸರಾ ಉತ್ಸವ ಸಮಿತಿ, ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಸೆ.22 ರಿಂದ ಅ.01 ರವರೆಗೆ "ಮೈಸೂರು ದಸರಾ ಕನ್ನಡ ಪುಸ್ತಕ ಮಾರಾಟ ಮೇಳ–2025"ನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೆ ಡಿ.ಸಿ. ಕಚೇರಿ ಎದುರು, ಮೈಸೂರು, ಇಲ್ಲಿ ಏರ್ಪಡಿಸಲಾಗಿದ್ದು, ಪುಸ್ತಕ ಮೇಳದಲ್ಲಿ ಕನ್ನಡ ಪ್ರಕಾಶಕರು/ಮಾರಾಟಗಾರರು ಭಾಗವಹಿಸಬಹುದಾಗಿದೆ.

ಮಳಿಗೆಯೊಂದಕ್ಕೆ ರೂ.1000 ಗಳ ಭದ್ರತಾ ಠೇವಣಿ ಡಿ.ಡಿ.ಯನ್ನು ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಅವರ ಹೆಸರಿನಲ್ಲಿ ಡಿಡಿಗಳನ್ನು ಸಲ್ಲಿಸಿ ಮೇಳದಲ್ಲಿ ಭಾಗವಹಿಸಲು ಇಚ್ಚಿಸುವ ಪ್ರಕಾಶಕರು/ಮಾರಾಟಗಾರರು ನಿಗದಿತ ಅರ್ಜಿ ನಮೂನೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರಿನ ಕಚೇರಿ ಅಥವಾ ಕನ್ನಡ ಮತ್ತು ಸಂಸ್ಕೃತಿ ಸಹಾಯಕ ನಿರ್ದೇಶಕರು ಕಚೇರಿಯಲ್ಲಿ, ಇಲ್ಲವೇ ಪ್ರಾಧಿಕಾರದ ಆನ್‌ಲೈನ್ ವೆಬ್‌ಸೈಟ್ ಋಣಣಿಫ:// ಇ೬೬. ಇಚಡಿಟಚಿಣಚಿಇಚಿ. ರಠಡ.ಟ ನಲ್ಲಿ ಅರ್ಜಿಯನ್ನು ಪಡೆಯಬಹುದು.

ಭರ್ತಿಮಾಡಿ ಅರ್ಜಿಯನ್ನು ಡಿ.ಡಿ.ಯೊಂದಿಗೆ ಸೆ.18 ರಂದು ಸಂಜೆ 05 ಗಂಟೆಯ ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ಅವರ ಹೆಸರಿಗೆ ಅಂಚೆಯ ಮೂಲಕ ಅಥವಾ ಇ–ಮೇಲ್ ಇಚಿಟ– nadappradhikara@gmail.com ರ ಮೂಲಕ ಸಲ್ಲಿಸಬಹುದು. ನಿರ್ಮಿಸಲಾಗುವ ಮಳಿಗೆಗಳನ್ನು ಆದ್ಯತೆಯ ಮೇರೆಗೆ ಹಂಚಿಕೆ ಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕನ್ನಡ ಪುಸ್ತಕ ಪ್ರಾಧಿಕಾರ ಆಡಳಿತಾಧಿಕಾರಿ ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002, ಅಥವಾ ದೂ.080–22484516 /22107704 ಗೆ ಸಂಪರ್ಕಿಸಬಹುದು ಎಂದು ಎಂದು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಣೆ ತಿಳಿಸಿದೆ.

# ಬಳ್ಳಾರಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ

## ಕ್ರೀಡಾಪಟುಗಳ ಪ್ರೋತ್ಸಾಹಕ್ಕೆ ರಾಜ್ಯ ಸರ್ಕಾರ ಬದ್ಧ: ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ರಾಜ್ಯದಲ್ಲಿನ ಕ್ರೀಡಾಪಟುಗಳಿಗೆ ಸೂಕ್ತ ತರಬೇತಿ, ವಸತಿ ನಿಲಯ ವ್ಯವಸ್ಥೆ ಸೇರಿದಂತೆ ಅವರನ್ನು ಪ್ರೋತ್ಸಾಹಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಡಾ.ಬಾಬು ಜಗಜೀವನರಾಮ್ ಚರ್ಮ ಮತ್ತು ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಬಳ್ಳಾರಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಒಳ ಮೀಸಲಾತಿ ಸಮೀಕ್ಷೆಯಿಂದ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳು ಸ್ಥಗಿತಗೊಂಡಿದ್ದವು. ಮೀಸಲಾತಿ ವರ್ಗೀಕರಣದಿಂದ ಪ್ರಸ್ತುತದಿಂದ ಹುದ್ದೆಗಳ ನೇಮಕ ಚಾಲನೆಗೊಂಡಿದ್ದು, ರಾಜ್ಯ ಸರ್ಕಾರವು ವಿವಿಧ ಇಲಾಖೆಗಳ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ವಿಶೇಷವಾದ ಮೀಸಲಾತಿ ಕಲ್ಪಿಸಿದೆ. ಹಾಗಾಗಿ ಕ್ರೀಡಾಪಟುಗಳು ಇದರ ಅವಕಾಶ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಕ್ರೀಡೆಗಳಲ್ಲಿ ಭಾಗವಹಿಸಿದರೆ ದೈಹಿಕ, ಮಾನಸಿಕ ಹಾಗೂ ಬೌದ್ಧಿಕ ಆರೋಗ್ಯ ಬೆಳವಣಿಗೆಯಾಗುತ್ತದೆ. ಕ್ರೀಡೆಗಳು ನಮ್ಮ ಜೀವನವನ್ನು ಸಮೃದ್ಧಗೊಳಿಸುತ್ತವೆ. ಕ್ರೀಡೆಗಳಲ್ಲಿ ಸೋಲು–ಗೆಲುವು ಸಾಮಾನ್ಯ. ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಜಿಲ್ಲೆಗೆ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಆಶಿಸಿದರು.

ಇಂದಿನ ಯುವಕರು ಹೆಚ್ಚಾಗಿ ಮೊಬೈಲ್ ಬಳಸದೆ ಹಾಗೂ ದುಶ್ಚಟಗಳಿಂದ ದೂರವಿದ್ದು, ಕ್ರೀಡಾಸಕ್ತಿ ಬೆಳಿಸಿಕೊಳ್ಳಬೇಕು. ಪ್ರತಿದಿನ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಬೆಳೆ ಸಮೃದ್ಧಿಗೊಂಡರೆ ಉತ್ತಮ ಫಸಲು, ಮನುಷ್ಯ ಆರೋಗ್ಯದಿಂದಿದ್ದರೆ ಸದೃಢರಾಗಲು ಸಾಧ್ಯ. ಹಾಗಾಗಿ ಸದೃಢ ರಾಷ್ಟ್ರ ನಿರ್ಮಾಣಕ್ಕೆ ಯುವಪೀಳಿಗೆಯ ಪಾತ್ರ ಬಹಳ ಮುಖ್ಯವಾಗಿದೆ. ಯುವಕರು ಕ್ರೀಡೆಗಳಲ್ಲಿ ಭಾಗವಹಿಸಿ ಸದೃಢರಾಗರಬೇಕು. ವಯಸ್ಸಿನಲ್ಲಿರುವಾಗಲೇ ಕ್ರೀಡೆಗಳಲ್ಲಿ ಭಾಗವಹಿಸಬೇಕು. ಸೋಲು–ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಬೇಕು ಎಂದು ಹೇಳಿದರು.

ಮನುಷ್ಯ ಸದೃಢನಾಗಬೇಕಾದರೆ ಆಹಾರ ಮುಖ್ಯ. ಯಾರೂ ಹಸಿವಿನಿಂದ ಬಳಲಬಾರದು ಎನ್ನುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆ ಅನ್ನಭಾಗ್ಯ ಮೂಲಕ ಅಕ್ಕಿ ನೀಡುತ್ತಿದೆ. ನಿರುದ್ಯೋಗ ಯುವಕರಿಗೆ ಯುವನಿಧಿ ಮೂಲಕ ಸಹಾಯಧನ ನೀಡುತ್ತಿದೆ ಎಂದು ತಿಳಿಸಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಗ್ರೇಸಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಕ್ರೀಡಾಪಟುಗಳು ಯಶಸ್ಸು ಹೊಂದಲು ಸೂಕ್ತ ತರಬೇತಿ ಹೊಂದುವ ಮೂಲಕ ನಿರಂತರ ಪ್ರಯತ್ನ ಹಾಗೂ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಏರ್ಪಡಿಸಿದ್ದ 400 ಮೀ. ಓಟ ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ಮತ್ತು ಪ್ರಮಾಣಪತ್ರ ವಿತರಿಸಲಾಯಿತು.

ವಿಜೇತರ ಪಟ್ಟಿ:

ಪುರುಷರ ವಿಭಾಗ: ಆನಂದ, ಇಂಡಿ ಬಸವರಾಜ, ದೀಪಕ್.

ಮಹಿಳೆಯರ ವಿಭಾಗ: ರೇಣುಕಮ್ಮ, ರೋಹಿಣಿ, ಜ್ಯೋತಿ.

ಬಳಿಕ ಅಥ್ಲೆಟಿಕ್ಸ್, ವಾಲಿಬಾಲ್, ಕಬಡ್ಡಿ, ಖೋ–ಖೋ, ಫುಟ್ಬಾಲ್ (ಪುರುಷರಿಗೆ ಮಾತ್ರ), ಥ್ರೋಬಾಲ್, ಬಾಲ್ ಬ್ಯಾಡ್ಮಿಂಟನ್, ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಹಾಕಿ, ಹ್ಯಾಂಡ್ ಬಾಲ್, ಟೇಬಲ್ ಟೇನ್ನಿಸ್, ಕುಸ್ತಿ ಮತ್ತು ಯೋಗಾ. ಟೆನ್ನಿಸ್, ನೆಟ್ ಬಾಲ್ ಮತ್ತು ಈಜು ಸೇರಿದಂತೆ ವಿವಿಧ ಕ್ರೀಡೆಗಳು ಜರುಗಿದವು.

ಜಿಲ್ಲೆಯ ವಿವಿಧ ತಾಲ್ಲೂಕು ಮಟ್ಟದ ದಸರಾ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಟಾಪಟುಗಳಿಗೆ ಬಳ್ಳಾರಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಆನ್ ಲೈನ್ ಮೂಲಕ ನೋಂದಣಿ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾ ಕ್ರೀಡಾಂಗಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ವೈದ್ಯಕೀಯ ವ್ಯವಸ್ಥೆ ಕಲ್ಪಿಸಲಾಗಿತ್ತು.

ಈ ವೇಳೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿವಿಯ ದೈಹಿಕ ಶಿಕ್ಷಣ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಶಶಿಧರ್ ಕೆಲ್ಲೂರ, ಹಾಕಿ ತರಬೇತುದಾರ ಜಾಕೀರ್, ಕ್ರೀಡಾಪಟು ಶಮೀನಾ. ಜೆ ಇಲಾಖೆಯ ಸಿಬ್ಬಂದಿ ವರ್ಗ ಸೇರಿದಂತೆ ತರಬೇತುದಾರರು, ಬಳ್ಳಾರಿ ಜಿಲ್ಲಾ ವ್ಯಾಪ್ತಿಯ ಕ್ರೀಡಾಪಟುಗಳು, ಸಾರ್ವಜನಿಕರು ಹಾಗೂ ಇತರರು ಭಾಗವಹಿಸಿದ್ದರು.

# ಅನಾಮಧೇಯ ಮೃತ ವ್ಯಕ್ತಿ ವಾರಸುದಾರರ ಪತ್ತೆಗೆ ಮನವಿ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಸೆ.06–ನಗರದ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆ ವ್ಯಾಪ್ತಿಯ ಅಂದಾಜು 35–40 ವರ್ಷದ ಅನಾಮಧೇಯ ವ್ಯಕ್ತಿಯನ್ನು ಅಪರಿಚಿತ ವ್ಯಕ್ತಿಗಳಿಂದ ಯಾವುದೋ ಉದ್ದೇಶಕ್ಕಾಗಿ ಕಲ್ಲುಗಳಿಂದ ಹೊಡೆದು ಸೆ.04 ರಂದು ಕೊಲೆ ಮಾಡಿದ್ದು, ಈ ಕುರಿತು ಪ್ರಕರಣ ದಾಖಲಾಗಿದ್ದು, ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

ಮೃತನ ಚಹರೆ:

ಎತ್ತರ ಅಂದಾಜು 5.7 ಅಡಿ, ದುಂಡು ಮುಖ, ಗೋಧಿ ಮೈ ಬಣ್ಣ, ತಲೆಯಲ್ಲಿ ಅಂದಾಜು 3–1/2 ಇಂಚು ಉದ್ದದ ಬಿಳಿ ಮಿಶ್ರಿತ ಕಪ್ಪು ಬಣ್ಣದ ಕೂದಲು, ಅರ್ಧ ಇಂಚು ಉದ್ದದ ಕಪ್ಪು ಮೀಸೆ ಮತ್ತು 1 ಇಂಚು ಉದ್ದದ ಕಪ್ಪು ಮಿಶ್ರಿತ ಬಿಳಿ ಗಡ್ಡ ಇರುತ್ತದೆ. ಮೃತನ ಬಲಗಡೆ ಕಣ್ಣಿನ ಮೇಲೆ ಮತ್ತು ಹಣೆಯ ಎಡಭಾಗದ ಮೇಲೆ ಭಾರಿಗಾಯ ಇರುತ್ತದೆ.

ಮೃತನ ಮೈಮೇಲೆ ಮಾಸಿದ ಕೆಂಪು ಮತ್ತು ಕಪ್ಪು ಬಣ್ಣದ ಬಿಳಿ ಗೆರೆಗಳುಳ್ಳ ಪಟ್ಟೆ ಅಂಗಿ ಹಾಗೂ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಹೊಂದಿರುತ್ತಾನೆ.

ಈ ಮೇಲ್ಕಂಡ ಚಹರೆಗುರುತುಗಳುಳ್ಳ ವ್ಯಕ್ತಿಯ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆ–ಯ ದೂ.08392–250033, ಮೊ.9480803096 ಅಥವಾ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ:08392–258100 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ರೈತ ಘಟಕದ ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆ



**ಮಲ್ಲಮ್ಮನುಡಿ ವಾರ್ತೆ ಕೊಪ್ಪಳ :**

ನಮ್ಮ ಕರ್ನಾಟಕ ಸೇನೆಯ ಸಂಘಟನೆಯ ಪದಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ರೈತ ಘಟಕದ ಅಧ್ಯಕ್ಷರನ್ನಾಗಿ ಶ್ರೀ ಹನುಮಂತಪ್ಪ ಸೋಮಲಿಂಗಪ್ಪ ಕೊಲ್ಕಾರ್ ರವರನ್ನು ಇಂದು ಆಯ್ಕೆ ಮಾಡಲಾಯಿತು, ನಾಡು ನುಡಿ, ನೆಲ ಜಲ, ಪರಿಸರದ ಉಳುವಿಗಾಗಿ ಹೋರಾಡಿ ಸಮಾಜಕ್ಕೆ ಒಳಿತು ಮಾಡಲಿ ಎಂದು ಅವರಿಗೆ ಸಂಘಟನೆಯ ಸರ್ವ ಪದಾಧಿಕಾರಿಗಳು ಶುಭ ಆರೈಸಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಸೆ.8ರಂದು ಬಂಜಾರ ಸಮಾಜ ದಿಂದ ಕೂಕನೂರಿನಲ್ಲಿ ಪ್ರತಿಭಟನೆ

**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ಜಿಲ್ಲೆಯ ಕುಕನೂರ ನಿರೀಕ್ಷಣಾ ಮಂದಿರದಲ್ಲಿ ಒಳಮೀಸಲಾತಿಯಲ್ಲಿ ರಾಜ್ಯ ಸರ್ಕಾರ ಮಾಡಿರುವ ಅನ್ಯಾಯದ ವಿರುದ್ಧ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ್ ಬಳೂಟಗಿ ಮಾತನಾಡುತ್ತಾ

ಈ ಮೊದಲು ಬಿಜೆಪಿ ಸರ್ಕಾರ ನಮ್ಮ ನಾಲ್ಕು ಸಮಾಜಗಳಿಗೆ ಶೇಕಡಾ 4.5 ಮೀಸಲಾತಿ ನೀಡಿದ್ದು, ಅದನ್ನು ನಾವು ವಿರೋಧಿಸಿ 2023 ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹಟಾವೋ ತಾಂಡಾ ಬಚಾವೋ ಎಂಬ ಅಭಿಯಾನ ಆರಂಭಿಸಿ ಬಿಜೆಪಿ ಪಕ್ಷವನ್ನು ಸೋಲಿಸಿ ಬಿಸಿ ಮುಟ್ಟಿಸಿದ್ದೆವು.

ನಮ್ಮ ಸಮಾಜಗಳ ಬೆಂಬಲದಿಂದ ಈ ಕಾಂಗ್ರೆಸ್ ಪಕ್ಷ ಬರೋಬ್ಬರಿ 133 ಸ್ಥಾನಗಳಲ್ಲಿ ಗೆಲುವು ಸಾಧಿಸಿ ಸುಭದ್ರ ಸರ್ಕಾರ ರಚನೆ ಮಾಡಿದೆ

ಆದರೆ ಇದನ್ನು ಸಿದ್ದರಾಮಯ್ಯ ಅವರು ಮರೆತು ನಮಗೆ ದ್ರೋಹ ಮಾಡುತ್ತಿದ್ದಾರೆ

ಇದರ ವಿರುದ್ಧ ದಿನಾಂಕ 08/09/2025 ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಕುಕನೂರಿನಲ್ಲಿ ಪ್ರತಿಭಟನೆ ಮಾಡಿ ತಹಸೀಲ್ದಾರ್ ರವರ ಮೂಲಕ ಮನವಿ ಸಲ್ಲಿಸಿ ಸರ್ಕಾರವನ್ನು ಒತ್ತಾಯಿಸಲಿದ್ದೇವೆ ಎಂದು ಹೇಳಿದರು .

ಅದೇ ರೀತಿ ಬೆಂಗಳೂರಿನಲ್ಲಿ ಸೆಪ್ಟೆಂಬರ್ 10 ರಂದು ಫ್ರೀಡಂ ಪಾರ್ಕನಲ್ಲಿ ಪ್ರತಿಭಟನೆ ಮಾಡುವದರ ಮೂಲಕ ಸರಕಾರಕ್ಕೆ ಬಿಸಿ ಮುಟ್ಟಿಸಿ ಇದರ ಮೇಲೂ ಸಿದ್ದರಾಮಯ್ಯ ಎಚ್ಚೆತ್ತುಕೊಳ್ಳದಿದ್ದರೆ ಮುಂಬರುವ ಗ್ರಾಮ ಪಂಚಾಯತ, ತಾಲೂಕು ಪಂಚಾಯತ, ಜಿಲ್ಲಾ ಪಂಚಾಯತ, ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲು ನಮ್ಮ ಎಲ್ಲಾ ಸಮಾಜಗಳು ಸಜ್ಜಾಗಿ ನಿಂತಿವೆ. ಕಾಂಗ್ರೆಸ್ ಪಕ್ಷ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಅದರ ಪ್ರತಿಫಲ ಅನುಭವಿಸಲು ಸಿದ್ಧವಿರಬೇಕು ಎಂಬ ಎಚ್ಚರಿಕೆ ನೀಡಿದರು.



ಈ ಪ್ರತಿಭಟನೆಗಳಿಗೆ ಪಕ್ಷಾತೀತವಾಗಿ ಎಲ್ಲರೂ ಬಂದು ಭಾಗವಹಿಸಿ ನಮ್ಮ ಕೂಗು ವಿಧಾನಸೌಧ ಮುಟ್ಟುವ ಹಾಗೆ ಮಾಡಬೇಕು ಎಂದು ನಮ್ಮ ಸಮಾಜಗಳ ಬಾಂಧವರಿಗೆ ಈ ಮೂಲಕ ಕರೆ ನೀಡಲಾಯಿತು.

ಈ ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಹೋಬಣ್ಣ ಚವ್ಹಾಣ, ಹಂಪಣ್ಣ ಕಟ್ಟಿಮನಿ, ಯಮನೂರ ಕಟ್ಟಿಮನಿ, ಯಮನೂರ ಭಾನಾಪೂರ, ಪ್ರಕಾಶ ಬಳಗೇರಿ, ದುರಗಪ್ಪ ಕಟ್ಟಿಮನಿ, ರಾಘವೇಂದ್ರ ಬಳಗೇರಿ, ನಾಗರಾಜ ಭಾನಾಪೂರ, ಚೇತನ ಬಳಗೇರಿ, ರವಿ ಕಾರಭಾರಿ ಇನ್ನೂ ಹಲವು ಜನ ಯುವ ಜನರು ಭಾಗವಹಿಸಿದ್ದರು.

## ಡಾ.ಜಿ.ಆರ್.ಹಲಗಲಿ ನಿಧನ



**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ,**

ಸೆ.6–ನಗರದ ಹೇಮ ವೇಮ ಸಂಸ್ಥೆಯ ಕಾರ್ಯಾಧ್ಯಕ್ಷ, ಹೆಸರಾಂತ ವೈದ್ಯ ರಡ್ಡಿ ಸಮಾಜದ ಪ್ರಮುಖ ಡಾ.ಜಿ.ಆರ್. ಹಲಗಲಿ(66)ಶನಿವಾರ ಬೆಳಿಗ್ಗೆ ನಿಧನ ಹೊಂದಿದರು.

ಮೃತರಿಗೆ ತಂದೆ, ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

ಸಂತಾಪ: ಡಾ.ಹಲಗಲಿ ಅವರ ನಿಧನಕ್ಕೆ ನಗರದ ಹೇಮ ವೇಮ ಸಂಸ್ಥೆ, ವಿದ್ಯಾಗಿರಿಯ ಹೇಮರಡ್ಡಿ ಮಲ್ಲಮ್ಮ ಸೇವಾ ಸಂಸ್ಥೆ, ಬೆನಕಟ್ಟಿಯ ಹೇಮ ವೇಮನ ಸದ್ಬೋಧನ ಪೀಠ, ಜಿಲ್ಲಾ ರಡ್ಡಿ ನೌಕರರ ಕ್ಷೇಮಾಭವೃದ್ಧಿ ಸಂಘ, ಜಿಲ್ಲಾ ರಡ್ಡಿ ನೌಕರರ ಪತ್ತಿನ ಸಹಕಾರ ಸಂಘ ಸೇರಿದಂತೆ ಜಿಲ್ಲೆಯ ಎಲ್ಲ ರಡ್ಡಿ ಸಮಾಜದ ಸಂಘಟನೆಗಳು, ಮುಖಂಡರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜು

**ಮಲ್ಲಮ್ಮ ನುಡಿ ವಾರ್ತೆ**
**ಬಾಗಲಕೋಟೆ:**

ಸೆ.6– ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಮೆಡಿಕಲ್ ಕಾಲೇಜು ಹಾಗೂ ಆಸ್ಪತ್ರೆ ಸ್ಥಾಪಿಸುವ ಗುರಿಯಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಆಲಮಟ್ಟಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಂತ ಹಂತವಾಗಿ ಈ ಗುರಿಯನ್ನು ಸಾಧಿಸಲಾಗುವುದು. 2025–26 ನೇ ಬಜೆಟ್ ನಲ್ಲಿ ಬಾಗಲಕೋಟೆ, ಮಂಗಳೂರು, ಕೋಲಾರ ಘೋಷಿಸಲಾಗಿದೆ. ವಿಜಯಪುರದಲ್ಲಿಯೂ ವೈದ್ಯಕೀಯ ಕಾಲೇಜು ಸ್ಥಾಪಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್ ಸ್ಥಾಪನೆಯ ಯೋಜನೆಯನ್ವಯ್ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಕಾಲೇಜು ನಿರ್ಮಿಸಿ, ಸರ್ಕಾರಿ ದರದಲ್ಲಿ ಚಿಕಿತ್ಸೆ ನೀಡಬೇಕೆಂಬ ಸೂಚನೆ ಆಧರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಿಎಂ ಹೇಳಿದರು.

## ಬಾಲಕಿ ಮೇಲೆ ಅತ್ಯಾಚಾರ– ಆರೋಪಿ ಬಂಧನ

**ಮಲ್ಲಮ್ಮ ನುಡಿ ವಾರ್ತೆ**
**ಬೀದರ:**

ಸೆ. 06 :– ಔರಾದ್ ಪಟ್ಟಣದ ಯುವಕನೊಬ್ಬ 11ವರ್ಷದ ಬಾಲಕಿಯನ್ನು ಅತ್ಯಾಚಾರ ಮಾಡಿರುವ ಘಟನೆ ನಡೆದಿದೆ. ಘಟನೆ ಸಂಬಂಧ 27 ವರ್ಷದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಬಾಲಕಿ ಹಾಗೂ ಯುವಕ ಒಂದೇ ಬಡಾವಣೆಯಲ್ಲಿ ವಾಸವಿದ್ದು, ಆಗಾಗ ಯುವಕ ಬಾಲಕಿ ಜತೆ ಅನುಚಿತವಾಗಿ ವರ್ತಿಸುತ್ತಿದ್ದ.

ಪಾಲಕರಿಗೆ ವಿಷಯ ಗೊತ್ತಾದಾಗ ಪ್ರಕರಣ ಬೆಳಕಿಗೆ ಬಂದಿದೆ. ಬಾಲಕಿಯನ್ನು ವೈದ್ಯಕೀಯ ಪರೀ–ಕ್ಷೆಗೆ ಒಳಪಡಿಸಲಾಗಿದ್ದು, ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ₹1.80 ಲಕ್ಷ ಮಾದಕ ವಸ್ತು ಸಮೇತ ತೆಲಂಗಾಣದಲ್ಲಿ ವ್ಯಕ್ತಿ ಬಂಧನ



**ಮಲ್ಲಮ್ಮ ನುಡಿ ವಾರ್ತೆ**
**ಬೀದರ:**

ಸೆ. 06 :– ಜಿಲ್ಲೆಗೆ ಮಾದಕ ವಸ್ತುಗಳನ್ನು ಸಾಗಾಣಿಕೆ ಮಾಡುತ್ತಿದ್ದ ವ್ಯಕ್ತಿಯನ್ನು ನೆರೆಯ ತೆಲಂಗಾಣ ರಾಜ್ಯದ ಸಂಗಾರೆಡ್ಡಿಯಲ್ಲಿ ಜಿಲ್ಲೆಯ ಪೊಲೀಸರು ವಶಕ್ಕೆಪಡೆದು, ನ್ಯಾಯಾಂಗ ಬಂಧನಕ್ಕೆ ಕಳಿಸಿದ್ದಾರೆ.

ಸಂಗಾರೆಡ್ಡಿ ಜಿಲ್ಲೆಯ ರಾಮಚಂದ್ರಪುರದ ಜಗದೀಶ್ವರ ಮೆಡಿಕಲ್ ಸ್ಟೋರ್‌ನ ಮಾಲೀಕ ಮೇದಿಶೆಟ್ಟಿ ಪ್ರಸಾದ್ ಜನಾರ್ದನ ಬಂಧಿತ. ಈತನ ಬಳಿಯಿಂದ ₹1.80 ಲಕ್ಷ ಮೌಲ್ಯದ ನಶೆ ಏರಿಸುವ ಗುಳಿಗೆ, ಸಿರಪ್ ಜಪ್ತಿ ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ಶನಿವಾರ ಹೊರಡಿಸಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 'ನಗರದ ಮಾರ್ಕೆಟ್ ಪೊಲೀಸ್ ಠಾಣೆ ವ್ಯಾಪ್ತಿಯ ದೀನದಯಾಳ್ ನಗರದ ವಿಕಾಸ ಈಶ್ವರ ಕಸಬೆ ಹಾಗೂ ಆತನ ಸಹೋದರ ಸುದೇಶ ಈಶ್ವರ ಕಸಬೆಯನ್ನು ಆಗಸ್ಟ್ 21ರಂದು ಮಾದಕ ವಸ್ತುಗಳೊಂದಿಗೆ ಬಂಧಿಸಲಾಗಿತ್ತು. ಮೇದಿಶೆಟ್ಟಿ ಪ್ರಸಾದ್ ಎಂಬಾತ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಕೊಟ್ಟಿದ್ದರು. ಅವರ ಮಾಹಿತಿ ಆಧರಿಸಿ ಸಿಪಿಐ ಪಾಲಾಕ್ಷಯ್ಯ, ಪಿಎಸ್ಐ ಗಿರಿಗೌಡರ, ಸಿಬ್ಬಂದಿ ನಾರಾಯಣ, ಸಿದ್ರಾಮ, ಈರಾರೆಡ್ಡಿ, ಆರೀಫ್, ಕಮಲಾಕರ, ಶಿವರಾಜ, ಮುತ್ತಣ್ಣ ಅವರಿದ್ದ ತಂಡವು ಕಾರ್ಯಾಚರಣೆ ನಡೆಸಿ, ಮೇದಿಶೆಟ್ಟಿಯನ್ನು ಮಾದಕ ವಸ್ತುಗಳ ಸಮೇತ ವಶಕ್ಕೆ ಪಡೆದಿದ್ದಾರೆ. ವೈದ್ಯರ ಸಲಹೆ ಇಲ್ಲದೆ ಅನಧಿಕೃತವಾಗಿ ಗುಳಿಗೆ, ಸಿರಪ್ ಮಾರಾಟ ಮಾಡುತ್ತಿದ್ದರು. ನಶೆಗಾಗಿ ಈ ವಸ್ತುಗಳನ್ನು ಬಳಸಲಾಗುತ್ತದೆ' ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

## ಪರಿಸರೋತ್ಸವಕ್ಕೆ ಕುಲಪತಿಗಳಿಗೆ ಆಹ್ವಾನ




**ಮಲ್ಲಮ್ಮ ನುಡಿ ವಾರ್ತೆ**
**ಬೀದರ:**

ತಾಲೂಕಿನ ಮರಕುಂದಾದಲ್ಲಿ ಸಪ್ಟೆಂಬರ್ 15ರಂದು ಜರುಗುವ ಪರಿಸರೋತ್ಸವಕ್ಕೆ ಕಾರ್ಯಕ್ರಮಕ್ಕೆ ಬೀದರ್ ವಿಶ್ವ ವಿದ್ಯಾಲಯದ ಕುಲಪತಿಗಳಾದ ಪ್ರೋ. ಬಿ.ಎಸ್. ಬಿರಾದಾರ್ ಪರಿಸರ ಉತ್ಸವ ಪ್ರಶಸ್ತಿ ವಿತರಿಸಲು ಆಹ್ವಾನಿಸಲಾಯಿತು. ಪರಿಸರವಾದಿ ಶೈಲೇಂದ್ರ ಕಾವಡಿ ಸಸಿ ಕೊಟ್ಟು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ವಿಶೇಷ ಅಧಿಕಾರಿ ರವಿ ಗಬಾಡೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಜಾತಿ ಜನ ಗಣತಿಯಲ್ಲಿ ಹಡಪದ ಎಂದು ನಮೂದಿಸಲು ಈರಣ್ಣ ಹಡಪದ ಸಣ್ಣೂರ ಮನವಿ

**ಮಲ್ಲಮ್ಮ ನುಡಿ ವಾರ್ತೆ**
**ಕಲಬುರಗಿ:**

ಜಿಲ್ಲೆಯ ಒಳಪಡುವ ಎಲ್ಲಾ ತಾಲೂಕಿನ ಹಡಪದ ಅಪ್ಪಣ್ಣ ಸಮಾಜದದವರು ಜಾತಿ ಗಣತಿಯಲ್ಲಿ ಹಡಪದ ಅಪ್ಪಣ್ಣ ಸಮುದಾಯದ ಸೇರಿದ ಅನೇಕ ಉಪಜಾತಿಯ ಪದಗಳು ನಾವಿ, ನಾವಿಂದ, ನಾಯಿಂದ, ನಯನಜ, ಕೆಲಸಿ, ನ್ಹಾವಿ, ಕ್ಷೌರಿಕ, ಕ್ಷೌರ, ಭಂಡಾರಿ, ನಾವಲಿಗ, ಕ್ಷೌರದ ಈ ಹೆಸರುಗಳು ಹಡಪದ ಸಮಾಜದ ಉಪ ಪಂಗಡಗಳಾಗಿದ್ದು. ಈ ಸಮುದಾಯದವರು ತಪ್ಪದೆ ಜಾತಿ



ಜನ ಗಣತಿಯಲ್ಲಿ ಈ ಮೇಲಿನ ಎಲ್ಲಾ ಹೆಸರುಗಳು ನಮೂದಿಸದೇ. ಹಡಪದ ಎಂದು ನಮೂದಿಸಲು ಕಲಬುರಗಿ ಜಿಲ್ಲಾ ಹಡಪದ ಅಪ್ಪಣ್ಣ ಸಮಾಜದ ಜಿಲ್ಲಾಧ್ಯಕ್ಷ ಈರಣ್ಣ ಸಿ ಹಡಪದ ಸಣ್ಣೂರ ಅವರು ಬಸವರಾಜ ಹಡಪದ ಹಳ್ಳಿ, ಗೌರವಾಧ್ಯಕ್ಷ ಬಸವರಾಜ ಹಡಪದ ಸುಗೂರ ಎನ್, ಜಿಲ್ಲಾ ಪ್ರದಾನ ಕಾರ್ಯದರ್ಶಿ ರಮೇಶ್ ಹಡಪದ ನೀಲೂರ, ಜಿಲ್ಲಾ ಕಾರ್ಯಾಧ್ಯಕ್ಷ ಭಗವಂತ ಹಡಪದ ಹೊನ್ನಕಿರಣಗಿ. ಜಿಲ್ಲಾ ಉಪಾಧ್ಯಕ್ಷ ರುದ್ರಮಣಿ ಅಪ್ಪಣ್ಣ ಬಟಗೇರಾ, ಮಹಾತೇಶ ಇಸ್ಲಾಂಪೂರೆ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಲ್ಲಿಕಾರ್ಜುನ ಬಿ ಹಡಪದ ಸುಗೂರ ಎನ್, ಆನಂದ ಖೇಳಗಿ, ಸಂತೋಷ ಬಗದುರಗಿ, ಮಲ್ಲಿಕಾರ್ಜುನ ಬನ್ನೂರ, ಮಹಾದೇವ ಹಡಪದ ರಾವೂರ, ನಗರ ಘಟಕ ಅಧ್ಯಕ್ಷ ಮಲ್ಲಿಕಾರ್ಜುನ ಸಾವಳಗಿ, ತಾಲೂಕಾಧ್ಯಕ್ಷ ಚಂದ್ರಶೇಖರ ತೊನಸನಹಳ್ಳಿ ಸೇರಿದಂತೆ ಅನೇಕ ಪದಾಧಿಕಾರಿಗಳ ಸಮ್ಮುಖದಲ್ಲಿ ಚರ್ಚೆ ಮಾಡಿ ಜಾತಿ ಹಡಪದ, ಉಪಜಾತಿ – ಹಡಪದ, ಧರ್ಮ ಹಿಂದು ಎಂದು ನಮೂದಿಸಲು ನಿರ್ಣಯ ಮಾಡಲಾಗಿದೆ ಎಂದು ಈರಣ್ಣ ಹಡಪದ ಸಣ್ಣೂರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸಡಗರದಿಂದ ಜರುಗಿದ ಶಿಕ್ಷಕರ ದಿನಾಚರಣೆ

## ಶಿಕ್ಷಕರು ದೇಶದ ಸಂಪತ್ತು





**ಮಲ್ಲಮ್ಮ ನುಡಿ ವಾರ್ತೆ**
**ಹುಮನಾಬಾದ:**

ಪಟ್ಟಣದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ 64ನೇ ಶಿಕ್ಷಕರ ದಿನಾಚರಣೆ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಸಡಗರ ಸಂಭ್ರಮ ಮಧ್ಯೆ ಶಿಕ್ಷಕರ ದಿನಾಚರಣೆ ಹುಡಗಿ ಹಿರೇಮಠದ ವೀರೂಪಾಕ್ಷ ಶಿವಾಚಾರ್ಯರ ದಿವ್ಯ ಸಾನ್ನಿಧ್ಯದಲ್ಲಿ ಶಿಕ್ಷಕರ ದಿನಾಚರಣೆ ಜರುಗಿತ್ತು. ಶಾಸಕ ಸಿದ್ದು ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಮಾಜ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಪಾತ್ರ ಅಮೋಘವಾಗಿದೆ. ಡಾ. ಸರ್ವಪಲ್ಲಿ ರಾಧಾಕೃಷ್ಣನವರು ತಮ್ಮ ಹುಟ್ಟುಹಬ್ಬವನ್ನು ಶಿಕ್ಷಕರ ದಿನಾಚರಣೆ ಘೋಷಿಸಿ ಶಿಕ್ಷಕ ಸಮುದಾಯಕ್ಕೆ ಗೌರವ ತಂದಿದ್ದಾರೆ ಎಂದರು. ಶಿಕ್ಷಕರು ಅಧ್ಯಯನ ಮಾಡಿ ಮಕ್ಕಳಿಗೆ ಒಳ್ಳೆಯ ಪಾಠ ಕಲಿಸಬೇಕೆಂದು ತಿಳಿಸಿದರು. ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಬಿ.ಪಾಟೀಲ ಮಾತನಾಡಿ, ಸರ್ವಪಲ್ಲಿ ರಾಧಾಕೃಷ್ಣನ್ ಅವರ ಆದರ್ಶಗಳು ಶಿಕ್ಷಕರು ತಮ್ಮ ಜೀವನದಲ್ಲಿ ಅಳವಡಿಕೊಳ್ಳಲು ಕರೆ ನೀಡಿದರು. ಮೊಬೈಲ್ ಯುಗದಲ್ಲಿ ಮಕ್ಕಳು ಮೊಬೈಲ್ ನೋಡುವ ಹವ್ಯಾಸ ಬೆಳೆಸಿಕೊಂಡು ತಮ್ಮ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರ ಎಂದರು. ಪಾಲಕರು ಶಿಕ್ಷಕರು ಮಕ್ಕಳಿಗೆ ಮೊಬೈಲ್‌ಗಳ ದುಷ್ಪರಿಣಾಮ ಬಗ್ಗೆ ಅರಿವು ಮೂಡಿಸಬೇಕು. ಶಿಕ್ಷಕರು ನಮ್ಮ ದೇಶದ ಸಂಪತ್ತು. ಒಳ್ಳೆಯ ಸಮಾಜ ನಿರ್ಮಾಣ ಸಹಾಯವಾಗುತ್ತದೆ ಎಂದರು. ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ ಬೆಳಿಗ್ಗೆ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಇಲ್ಲಿಯ ಜೂನೀಯರ್ ಕಾಲೇಜದಿಂದ ಆರಂಭಗೊಂಡ ಮೆರವಣಿಗೆ ಬಸವರಾಜ ಹೆಚ್ ಪಾಟೀಲ ಕಲ್ಯಾಣ ಮಂಟಪದ ವರೆಗೆ ಭವ್ಯವಾದ ಮೆರವಣಿಗೆ ಜರುಗಿತ್ತು. ಅತ್ಯುತ್ತಮ ಶಿಕ್ಷಕರಿಗೆ ಆಚರಿಸಲಾಯಿತ್ತು. ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕರಿಗೆ, ತಾಲೂಕ ಮಟ್ಟದ ಅತ್ಯುತ್ತಮ ಶಿಕ್ಷಕರಿಗೆ, ನಿವೃತ್ತಿ ಹೊಂದಿದ ಶಿಕ್ಷಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಪಾರ್ವತಿ ಶೇರಿಕಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯ ನಿರ್ದೇಶಕ ಲಿಂಗರಾಜ ಅರಸ, ಪ್ರೌಢ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಶೇಖ ಮಹೇಬೂಬ್ ಪಟೇಲ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರವೀಂದ್ರರೆಡ್ಡಿ ಮಾಲಿ ಪಾಟೀಲ್, ಶರದಕುಮಾರ ನಾರಾಯಣಪೇಟೆಕರ್, ಮುರಗೇಂದ್ರ ಸಜ್ಜನಶೆಟ್ಟಿ, ರಾಜಪ್ಪ ಸಿಂಧೋಲ್, ಗೋಪಾಲ ಜಮಾದರ್, ಹಾವಶೆಟ್ಟಿ, ಪ್ರೀತಮಸಿಂಗ್ ಜಾಧವ್, ಕಾಶಿನಾಥ ಬೋರಾಳೆ, ಕರುಣಾದೇವಿ ಸಿಂಧೆ ಸೇರಿದಂತೆ ಶಿಕ್ಷಕರು, ನಿವೃತ ಶಿಕ್ಷಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಗಣೇಶ ಲಡ್ಡು ಪ್ರಸಾದ 22,500 ರೂ.ಗೆ ಭಕ್ತಿಯ ಹಾರಜು

## ಸಡಗರದಿಂದ ಜರುಗಿದ ಶಿವಪೂರ ಶಾಂತಿ ಗಣೇಶನ ವಿಸರ್ಜನೆ



**ಮಲ್ಲಮ್ಮ ನುಡಿ ವಾರ್ತೆ**
**ಹುಮನಾಬಾದ:**

ಪಟ್ಟಣದ ಶಿವಪೂರ ಬಡಾವಣೆಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಇಲ್ಲಿಯ ಶಾಂತಿ ಗಣೇಶ ಸಮಿತಿಯವರು 11 ದಿನಗಳವರೆಗೆ ಗಣೇಶ ಪ್ರತಿಷ್ಠಾಪಿಸಿ ದಿನಾಲು ಭಜನೆ ಕೀರ್ತನೆ ವಿಶೇಷ ಪೂಜೆ ಸೇರಿದಂತೆ ಹಲವಾರು ಕಾರ್ಯಕ್ರಮವನ್ನು ಹಮ್ಮಿಕೊಂಡು ಭಕ್ತರ ಹಾಗೂ ಬಡಾವಣೆಯ ಜನರ ಹೃದಯಗೆದ್ದಿದ್ದಾರೆ. ಶುಕ್ರವಾರ ರಂದು ಮಹಿಳೆಯರಿಂದ ಭಜನೆ ಹಾಗೂ ವಿಶೇಷ ದಾಸೋಹ ಜರುಗಿತ್ತು. ಶನಿವಾರ ಗಣೇಶನ ವಿಸರ್ಜನೆ ಅಂಗವಾಗಿ ವಿಶೇಷ ಪೂಜೆ ಹಾಗೂ ಗಣೇಶನ ಪೂಜೆಗ ಇಟ್ಟ ಲಡ್ಡು ಪ್ರಸಾದ ಈ ವರ್ಷವೂ ಕೂಡಾ ಭಕ್ತಿಯ ಒಂದು ಸಂಕೇತವಾಗಿ ಹರಾಜು ಮಾಡಲಾಯಿತ್ತು. ಈ ಹರಾಜಿನಲ್ಲಿ ನಾಗರೆಡ್ಡಿ ಮುನ್ನೂರ 22,500 ರೂ.ಗೆ ಲಡ್ಡು ಪ್ರಸಾದ ಸ್ವೀಕರಿಸಿದನು. ಈ ಗಣೇಶನ ಮೆರವಣಿಗೆಯಲ್ಲಿ ಮಕ್ಕಳಿಂದ ಕೋಲಾಟ, ಹಾಗೂ ಯುವಕರು ಕುಣಿದು ಕುಪ್ಪಳಿಸಿದರು. ಸಮಿತಿ ಅಧ್ಯಕ್ಷ ತಿರುಮಲ್‌ರೆಡ್ಡಿ ಮಂಡಾ, ಉಪಾಧ್ಯಕ್ಷ ವೆಂಕಟರೆಡ್ಡಿ ಪವಾಡೆ, ವಿನಾಯಕರೆಡ್ಡಿ ಮುನ್ನೂರ, ಮೇಗನಾಥರೆಡ್ಡಿ ಮುಡಬಿ, ಚನ್ನರೆಡ್ಡಿ ಕರ್ಣಿ ಅಭಿಷೇಕರೆಡ್ಡಿ ಮುಡಬಿ, ರಮೇಶರೆಡ್ಡಿ ಗರ್ಲಪಟ್ಟಿ, ವಿಜಯಕುಮಾರ ಕೌಡಿಯಾಳ, ಸಂತೋಷರೆಡ್ಡಿ



ಧುಮ್ಮನಸೂರ, ಝುರನೇಶರೆಡ್ಡಿ ಮುನ್ನೂರ, ರಾಹುಲ್‌ರೆಡ್ಡಿ ಕರ್ಣಿ, ಮಂಜುರೆಡ್ಡಿ ಮುನ್ನೂರ, ರಘು ಪೂಜಾರಿ, ವೀರೇಶರೆಡ್ಡಿ ಬಳಗಾರ, ಸೂರ್ಯಕಾಂತ ಮೇತ್ರೆ, ಶ್ರೀಧರರೆಡ್ಡಿ ಕರ್ಣಿ ಉಪಸ್ಥಿತರಿದ್ದರು. ಹಾಗೂ ಭಕ್ತಾದಿಗಳು ಭಾಗವಹಿಸಿ ದರ್ಶನ ಪಡೆದು ಪ್ರಸಾದ ಸ್ವೀಕರಿಸಿ ಪುನಿತರಾದರು.




ಹುಮನಾಬಾದ:ಪಟ್ಟಣದ ಶಿವಪೂರ ಬಡಾವಣೆಯ ಶಾಂತಿ ಗಣೇಶನ ವಿಸರ್ಜನೆ ಸಂದರ್ಭದಲ್ಲಿ ಮಕ್ಕಳಿಂದ ಕೋಲಾಟ ಜರುಗಿತ್ತು. (ಮಲ್ಲಮ್ಮ ನುಡಿ ಚಿತ್ರ)

## ಮದರ್ ತೆರೇಸಾ ಪುಣ್ಯಸ್ಮರಣೆ ಅಂಗವಾಗಿ ಫಲಾನುಭವಿಗಳಿಗೆ ಕುರಿ ವಿತರಣೆ



**ಮಲ್ಲಮ್ಮ ನುಡಿ ವಾರ್ತೆ**
**ಹುಮನಾಬಾದ:**

ಆರ್ಬಿಟ್ ಸಂಸ್ಥೆ ಆರೋಗ್ಯ ಸಂರಕ್ಷಣೆ, ಪರಿಸರ ಜಾಗೃತಿ, ಬಡ ಜನರ ಅಭಿವೃದ್ಧಿಗಾಗಿ ಹಲವಾರು ತರಬೇತಿಗಳು ನೀಡಿ ಬಡಬಗ್ಗುರು ಸ್ವಾವಲಂಬಿಗಳಾಗಿ ಬದುಕಲು ಸಹಾಯ ಮಾಡುತ್ತಿದೆ ಎಂದು ಜಿಲ್ಲಾ ಕುಷ್ಠರೋಗ ಅಧಿಕಾರಿ ಡಾ. ಕಿರಣ ಪಾಟೀಲ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಮದರ್ ತೆರೇಸಾ ಪುಣ್ಯಸ್ಮರಣೆ ಪ್ರಯುಕ್ತ ಹಮ್ಮಿಕೊಂಡಿದ್ದ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮದ ಫಲಾನುಭವಿಗಳಿಗೆ ಸ್ವಯಂಉದ್ಯೋಗಕ್ಕಾಗಿ ಕುರಿ ವಿತರಿಸಿ ಮಾತನಾಡುತ್ತ ತಿಳಿಸಿದರು. ಈ ಸಂಸ್ಥೆಗೆ ಆರೋಗ್ಯ ಸಂರಕ್ಷಣೆ ಜಾಗೃತಿಗೆ ಇಲಾಖೆಯಿಂದ ಸಹಾಯ ಸಹಕಾರ ನೀಡುವುದಾಗಿ ತಿಳಿಸಿದರು. ಕುಷ್ಠರೋಗ ಪ್ರಾಥಮಿಕ ಹಂತದಲ್ಲಿಯೇ ಗುರುತಿಸಿ ಚಿಕಿತ್ಸೆ ಪಡೆದುಕೊಳಲ್ಲು ಕರೆ ನೀಡಿದರು. ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಮಾತನಾಡಿ, ಮದರ್ ತೆರೇಸಾ ಅವರು ಕುಷ್ಠರೋಗಿಗಳಿಗೆ ಅಮೋಘವಾದ ಸೇವೆ ಮಾಡಿದ್ದಾರೆ. ಮದರ್ ತೆರೇಸಾ ರವರ ಆದರ್ಶ ತತ್ವಗಳು ಜೀವನದಲ್ಲಿ ಅಳವಡಿಸಿಕೊಂಡು ಸಮಾಜ ಸೇವೆಗೆ ತೊಡಗಿಸಿಕೊಳ್ಳಲು ಸಲಹೆ ನೀಡಿದರು. ಮದರ್ ತೆರೇಸಾ ಪುಣ್ಯಸ್ಮರಣೆ ಅಂಗವಾಗಿ ಕುರಿ ವಿತರಣೆ ಮಾಡಲಾಗಿದೆ ಎಂದರು. ಅಜೀಂ ಪ್ರೇಮಜಿ ಫೌಂಡೇಶನ್ ಆಶ್ರಯದಲ್ಲಿ ಕಾರ್ಯಕ್ರಮ ಜರುಗಿತ್ತು. ಅರುಣ ಕೋಟೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಅಜೀಂ ಪ್ರೇಮಜಿ ಫೌಂಡೇಶನ್ ಜಿಲ್ಲಾ ಸಂಯೋಜಕ ಶಿವಕುಮಾರ್, ಅಭಿಷೇಕ್, ನವಜೀವನ ಸಂಯೋಜಕ ಪ್ರವೀಣಕುಮಾರ್, ಕಂಟಿ, ಅರುಣ, ಹಣಮಂತ, ಡೇವಿಡ್, ಪೂಜಾ, ಮಹಾದೇವಿ, ಪ್ರೀತಿ ಸೇರಿದಂತೆ ಆರ್ಬಿಟ್ ಸಂಸ್ಥೆಯ ಸಿಬ್ಬಂದಿಗಳು ಹಾಗೂ ಫಲಾನುಭವಿಗಳು ಉಪಸ್ಥಿತರಿದ್ದರು.



ಹುಮನಾಬಾದ:ಅಡತ್ ಬಜಾರ್ ಗಣೇಶ ಸಮಿತಿ ವತಿಯಿಂದ 11 ದಿವಸ ಪ್ರಾತಿಷ್ಠಪಿಸಿದ ಗಣೇಶನಿಗೆ ವಿಶೇಷ ಪೂಜೆ ಜರುಗಿತ್ತು. ತದನಂತರ ವೈಭವದಿಂದ ಮೆರವಣಿಗೆ ಉತ್ಸವ ಜರುಗಿತ್ತು. ಗಣೇಶನ ಉತ್ಸವದಲ್ಲಿ ಬಂದಂತಹ ಭಕ್ತಾಧಿಗಳಿಗೆ ಅನ್ನದಾಸೋಹ ಏರ್ಪಡಿಸಲಾಯಿತ್ತು. ಹಾಗೂ ಬೀಗಿ ಪೋಲೀಸ್ ಬಂದೋಬಸ್ತ್ ಏರ್ಪಡಿಸಲಾಯಿತ್ತು. ಭಕ್ತರ ಮನಸೆಳೆದ ತಿರುಪತಿ ಮಾದರಿಯ ಗಣೇಶ ಮಂಟಪ ಕಾಣಬಹುದು. (ಮಲ್ಲಮ್ಮ ನುಡಿ ಚಿತ್ರ)

# ವಿದ್ಯಾರ್ಥಿಗಳ ಮೌಲ್ಯಮಾಪನ ಮತ್ತು ಬೋಧನಾ ಸಾಮರ್ಥ್ಯ ಸುಧಾರಿಸಲು ಕೃತಕ ಬುದ್ಧಿಮತ್ತೆಯ ಜ್ಞಾನ ನವೀಕರಿಸಿ: ಡಾ. ಬಿಡವೆ



ಕಲಬುರಗಿ;ಸೆ.6: ಪ್ರಾಧ್ಯಾಪಕರು ಬೋಧನಾಕೌಶಲ್ಯಮತ್ತುವಿದ್ಯಾರ್ಥಿಗಳ ಮೌಲ್ಯಮಾಪನವನ್ನುಸುಧಾರಿಸಲು ಇಂದುವೈವಿಧ್ಯಮಯಸಾಧನಗಳನ್ನು ಬಳಸಬೇಕೆಂದು ಹಾಗೂ ಶಿಕ್ಷಕರು ಕೃತಕ ಬುದ್ಧಿಮತ್ತೆಯ ಜ್ಞಾನವನ್ನು ನವೀಕರಿಸುವ ಅಗತ್ಯವಿದೆ ಎಂದು ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿಪ್ರೊ.ಅನಿಲ್‌ಕುಮಾರ್ ಬಿಡವೆ ಅಭಿಪ್ರಾಯಪಟ್ಟರು

ಕಲಬುರಗಿ ನಗರದ ಶರಣ ಬಸವ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಶನಿವಾರ ಶಿಕ್ಷಕರ ದಿನಾಚರಣೆಯಅಂಗವಾಗಿ ಭಾರತದ ಮಾಜಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ನಂತರ ಮಾತನಾಡಿದ ಪ್ರೊ. ಬಿಡವೆ, ಎಐ ಆಗಮನವುಉದ್ಯೋಗಾವಕಾಶಗಳನ್ನು ಕಸಿಯುತ್ತದೆ ಎಂಬ ಜನಪ್ರಿಯ ಕಲ್ಪನೆಯ ಬದಲಿಗೆ, ಕೌಶಲ್ಯಗಳನ್ನು ಸುಧಾರಿಸಲು ಮತ್ತು ಅವಕಾಶಗಳ ಜಗತ್ತನ್ನು ತೆರೆಯಲು ಎಐ ಹೊಸ ಅವಕಾಶಗಳನ್ನು ತೆರೆದಿದೆ ಎಂದು ತಿಳಿಸಿದರು.

ಭವಿಷ್ಯದಲ್ಲಿ ಕೌಶಲ್ಯವಿರದ ವ್ಯಕ್ತಿಗೆ ಯಾವುದೇ ಜಾಗವಿಲ್ಲ ಮತ್ತು ವಿದ್ಯಾರ್ಥಿಗಳಿಗೆ ಕೋರ್ಸ್ ಸಾಮಗ್ರಿಗಳನ್ನುನೀಡುವುದರಜೊತೆಗೆ ವಿದ್ಯಾರ್ಥಿಗಳನ್ನು ಕೌಶಲ್ಯಗೊಳಿಸಿ ಹೊರಗಿನ ಪ್ರಪಂಚದಲ್ಲಿನ ಸವಾಲುಗಳನ್ನು ಎದುರಿಸಲು ಅವರನ್ನು ಸಿದ್ಧಪಡಿಸುವುದು ಅಧ್ಯಾಪಕ ಸಮುದಾಯದ ಕರ್ತವ್ಯವಾಗಿದೆ. ವಿದ್ಯಾರ್ಥಿಗಳ ವೈಯಕ್ತಿಕ ಸಾಮರ್ಥ್ಯಗಳನ್ನು ರೂಪಿಸಲು ಮತ್ತು ವಿದ್ಯಾರ್ಥಿಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳನ್ನುರೂಪಿಸಲು ಸುಧಾರಿತ ಎಐ ಪರಿಕರಗಳನ್ನು ಬಳಸಬಹುದು ಎಂದು ಕಿವಿಮಾತನ್ನು ಹೇಳಿದರು.

ಶರಣಬಸವ ವಿಶ್ವವಿದ್ಯಾಲಯವು ಬೋಧನಾ ಸಮುದಾಯಕ್ಕೆ ಅವರ ಬೋಧನೆ ಮತ್ತು ಸಂಶೋಧನಾ ಕೌಶಲ್ಯಗಳನ್ನು ಸುಧಾರಿಸಲು ಮತ್ತು ವಿದ್ಯಾರ್ಥಿಗಳ ಮಟ್ಟವನ್ನು ನಿರ್ಣಯಿಸಲು ಎಐ ಪರಿಕರಗಳ ಪಾವತಿಸಿದ ಆವೃತ್ತಿಗಳ ಬಳಕೆಗಾಗಿ ಹಣವನ್ನು ನೀಡಲು ಒಪ್ಪಿಕೊಳ್ಳುತ್ತದೆ ಎಂದು ಪ್ರೊ. ಬಿಡವೆ ಹೇಳಿದರು.

ಶಿಕ್ಷಕರು ವೈಯಕ್ತಿಕವಾಗಿ ವಿದ್ಯಾರ್ಥಿಗಳೊಂದಿಗೆಸೌಹಾರ್ದಯುತ ಸಂಬಂಧವನ್ನು ಬೆಳೆಸಿಕೊಳ್ಳಬೇಕು ಮತ್ತು ವೈಯಕ್ತಿಕ ಬಾಂಧವ್ಯವು ಅತ್ಯುತ್ತಮ ಮಟ್ಟದಲ್ಲಿರಬೇಕು. ಇದು ಶಿಕ್ಷಕ–ವಿದ್ಯಾರ್ಥಿ ಸಂಬಂಧವನ್ನು ಸುಧಾರಿಸಲು ಸಹಾಯ ಮಾಡುತ್ತದೆ ಎಂದು ಪ್ರೊ. ಬಿಡವೆ ಹೇಳಿದರು, ಇದು ಅಂತಿಮವಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಮಟ್ಟವನ್ನು ಸುಧಾರಿಸಲು ಕಾರಣವಾಗುತ್ತದೆ."ಶಿಕ್ಷಕರುವಿದ್ಯಾರ್ಥಿಗಳ ದೃಷ್ಟಿಯಲ್ಲಿ ತಮ್ಮ ಖ್ಯಾತಿಯನ್ನು ಕುಗ್ಗಿಸುವ ಯಾವುದೇ ಕೆಲಸವನ್ನು ಮಾಡಬಾರದು ಮತ್ತು ವಿದ್ಯಾರ್ಥಿಗಳ ಜೀವನವನ್ನು ಪರಿವರ್ತಿಸಲು ಯಾವಾಗಲು ಶ್ರಮಿಸಬೇಕು" ಎಂದರು.ವಿದ್ಯಾರ್ಥಿಗಳು ದೇಶದ ಜವಾಬ್ದಾರಿಯುತ ಮತ್ತು ಉತ್ತಮ ನಾಗರಿಕರಾಗಿ ವಿಷಯಗಳನ್ನು ರೂಪಿಸಲು ಅನುವು ಮಾಡಿಕೊಡಲು ತರಗತಿ ಕೊಠಡಿಗಳಲ್ಲಿ ಅನುಕೂಲಕರ ವಾತಾವರಣವನ್ನು ಸೃಷ್ಟಿಸುವುದು ಬೋಧನಾ ಸಮುದಾಯದ ಜವಾಬ್ದಾರಿಯಾಗಿದೆ ಎಂದು ಶರಣಬಸವ ವಿಶ್ವವಿದ್ಯಾಲಯದ ಕುಲಸಚಿವ ಡಾ. ಎಸ್. ಜಿ. ಡೊಳ್ಳೇಗೌಡರ್ ತಮ್ಮ ಭಾಷಣದಲ್ಲಿ ಹೇಳಿದರು.ವಿವಿಯ ಕಂಪ್ಯೂಟರ್ ಅಪ್ಲಿಕೇಶನ್ಸ್ ವಿಭಾಗದ ಡೀನ್ ಪ್ರೊ. ಶ್ರೀಕಾಂತ್ ಪಾಟೀಲ್ ಸ್ವಾಗತಿಸಿದರು ಮತ್ತು ಕಂಪ್ಯೂಟರ್ ಅಪ್ಲಿಕೇಶನ್ ವಿಭಾಗದ ಮುಖ್ಯಸ್ಥೆ ಪ್ರೊ. ನಾಗಮ್ಮ ಪಾಟೀಲ್ ವಂದಿಸಿದರು. ನಂತರ, ಉಪಕುಲಪತಿಗಳು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಡೀನ್‌ಗಳು ಮತ್ತು ಮುಖ್ಯಸ್ಥರನ್ನು ಸನ್ಮಾನಿಸಿದರು.

# ಶಿಕ್ಷಕರದ್ದು ಜ್ಞಾನಧಾರೆ ಎರೆಯುವ ಪವಿತ್ರ ವೃತ್ತಿ: ಶಾಸಕ ಡಾ.ಪಾಟೀಲ



ಬೀದರ. ಸೆ. 06 : 'ಶಿಕ್ಷಕರದ್ದು ಜ್ಞಾನಧಾರೆ ಎರೆದು ಅಂಧಕಾರದಿಂದ ಬೆಳಕಿನೆಡೆಗೆ ಒಯ್ಯುವ ಪವಿತ್ರ ವೃತ್ತಿಯಾಗಿದೆ' ಎಂದು ಹುಮನಾಬಾದ್ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ ಹೇಳಿದರು.

ಬಸವ ಕಲ್ಯಾಣ ನಗರದ ತೇರು ಮೈದಾನದಲ್ಲಿನ ಸಭಾ ಭವನದಲ್ಲಿ ಶುಕ್ರವಾರ ಆಯೋಜಿಸಿದ್ದ ಬಸವಕಲ್ಯಾಣ–ಹುಲಸೂರ ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಶಿಕ್ಷಕರ ಸಮಸ್ಯೆಗಳನ್ನು ಸರ್ಕಾರ ಬಗೆಹರಿಸಬೇಕು. ನಾನೂ ಸಹಕಾರ ನೀಡುತ್ತೇನೆ' ಎಂದರು.

ಕ್ಷೇತ್ರಶಿಕ್ಷಣಾಧಿಕಾರಿ ಸಿದ್ದವೀರಯ್ಯ ರುದನೂರು ಮಾತನಾಡಿ, 'ಶಿಕ್ಷಕರಿಗೆ ಭಾರತೀಯ ಸಂಸ್ಕೃತಿಯಲ್ಲಿ ದೊಡ್ಡ ಸ್ಥಾನವಿದೆ. ನಮ್ಮಿಂದ ಸಮಾಜ ಸುಧಾರಣೆ ಸಾಧ್ಯ ಎಂಬುದನ್ನು ತಿಳಿದು ಮುನ್ನಡೆಯಬೇಕು' ಎಂದರು.

ತಹಶೀಲ್ದಾರ್ ದತ್ತಾತ್ರೇಯ ಜೆ.ಗಾದಾ, ಕ್ಷೇತ್ರ ಸಮನ್ವಯಾಧಿಕಾರಿ ಪ್ರಭಾಕರ ಕಳಮಾಸೆ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಂಜೀವಕುಮಾರ ಕಾಂಗೆ, ಶಿಕ್ಷಕಿ ಶಾಂತಾಬಾಯಿ ಯರನಳ್ಳೆ, ಶಿವಕುಮಾರ ಜಡಗೆ, ಮಹೇಶ ಮುಳೆ ಮಾತನಾಡಿದರು.

ಹುಲಸೂರ ತಹಶೀಲ್ದಾರ್ ಶಿವಾನಂದ ಮೇತ್ರೆ, ಸಾವಿತ್ರಿ ಸಲಗರ, ಸೂರ್ಯಕಾಂತ ಪಾಟೀಲ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಬಸವಕಲ್ಯಾಣ ತಾಲ್ಲೂಕು ಅಧ್ಯಕ್ಷ ಸಂತೋಷ ಅಕ್ಕಣ್ಣ, ಹುಲಸೂರ ಅಧ್ಯಕ್ಷ ರಾಜಪ್ಪ ನಂದೋಡೆ ಮತ್ತಿತರರು ಉಪಸ್ಥಿತರಿದ್ದರು. ನಿವೃತ್ತ ಶಿಕ್ಷಕರನ್ನು, ಎಸ್.ಎಸ್.ಎಲ್.ಸಿ ಯಲ್ಲಿ ಹೆಚ್ಚಿನ ಅಂಕ ಪಡೆದ ಶಾಲೆಗಳ ಹಾಗೂ ಒಂದನೇ ತರಗತಿಯಲ್ಲಿ ಹೆಚ್ಚಿನ ದಾಖಲಾತಿ ಪಡೆದ ಶಾಲೆಗಳ ಮುಖ್ಯ ಶಿಕ್ಷಕರನ್ನು ಸನ್ಮಾನಿಸಲಾಯಿತು. ಇರಾ ಪಬ್ಲಿಕ್ ಶಾಲೆ ಮಕ್ಕಳು ಸಂಗೀತ ಪ್ರಸ್ತುತಪಡಿಸಿದರು.

ಸ್ವಾಮೀಜಿ ಉಪಸ್ಥಿತರಿದ್ದರೂ ಸಂದೇಶ ವಾಚನ

ಹಾರಕೂಡ ಚನ್ನವೀರ ಶಿವಾಚಾರ್ಯರು ಅನೇಕ ವರ್ಷಗಳಿಂದ ಕಾರ್ಯಕ್ರಮಕ್ಕೆ ತಪ್ಪದೇ ಹಾಜರಿದ್ದು ನೇತೃತ್ವ ವಹಿಸುತ್ತಾರೆ. ಆದರೆ ಅವರು ಶುಕ್ರವಾರ ಎಲ್ಲಿಯೂ ಭಾಷಣ ಮಾಡುವುದಿಲ್ಲ. ಆದ್ದರಿಂದ ಅವರು ಬರೆದ ಸಂದೇಶವನ್ನು ಸೂರ್ಯಕಾಂತ ಮಠ . ಬಸವಕಲ್ಯಾಣ ಮತ್ತು ಹುಲಸೂರ ತಾಲ್ಲೂಕುಗಳ ಶಿಕ್ಷಕರ ದಿನಾಚರಣೆ ಇದಾಗಿತ್ತು. ಎರಡೂ ತಾಲ್ಲೂಕುಗಳ ತಹಶೀಲ್ದಾರ್ ಶಿಕ್ಷಣ ಮತ್ತಿತರೆ ಇಲಾಖೆಗಳ ಅಧಿಕಾರಿಗಳು ಸರ್ಕಾರಿ ಪ್ರಾಥಮಿಕ ಶಾಲಾ ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘ ಒಳಗೊಂಡು 16 ಶಿಕ್ಷಕರ ಸಂಘಟನೆಗಳ ಅಧ್ಯಕ್ಷರು ವೇದಿಕೆಯಲ್ಲಿದ್ದರು. ಎಸ್. ರಾಧಾಕೃಷ್ಣನ್ ಮತ್ತು ಸಾವಿತ್ರಿಬಾಯಿ ಫುಲೆ ಇಬ್ಬರ ಭಾವಚಿತ್ರಗಳಿಗೂ ಪೂಜೆ ಸಲ್ಲಿಸಲಾಯಿತು.

ಯಶಸ್ಸಿನಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು'

ಭಾಲ್ಕಿ ತಾಲ್ಲೂಕಿನ ಹಾಲಹಳ್ಳಿ ಗ್ರಾಮ ಸಮೀಪದ ಬೀದರ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ದಿನ ಆಚರಿಸಲಾಯಿತು. ಆಡಳಿತ ಕುಲಸಚಿವೆ ಸುರೇಖಾ ಇದ್ದರು

ಭಾಲ್ಕಿ: 'ಪ್ರತಿ ವ್ಯಕ್ತಿಯ ಯಶಸ್ಸಿನ ಹಿಂದೆ ಶಿಕ್ಷಕರ ಪಾತ್ರ ಮಹತ್ವದ್ದಾಗಿರುತ್ತದೆ' ಎಂದು ಬೀದರ್ ವಿಶ್ವವಿದ್ಯಾಲಯದ ಆಡಳಿತ ಕುಲಸಚಿವೆ ಸುರೇಖಾ ಹೇಳಿದರು. ತಾಲ್ಲೂಕಿನ ಹಾಲಹಳ್ಳಿ ಗ್ರಾಮ ಸಮೀಪದ ಬೀದರ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ ನಿಮಿತ್ತ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು. ಸಮಾಜವನ್ನು ಉತ್ತಮ ಮಾರ್ಗದಲ್ಲಿ ಕೊಂಡೊಯ್ಯಲು ಶಿಕ್ಷಕರೇ ರೂವಾರಿಯಾಗಿದ್ದಾರೆ. ವಿದ್ಯಾರ್ಥಿಗಳು ಶಿಕ್ಷಕರಿಗೆ, ಹೆತ್ತವರನ್ನು ಗೌರವದಿಂದ ಕಾಣಬೇಕು ಎಂದು ತಿಳಿಸಿದರು. ವಿಶ್ವವಿದ್ಯಾಲಯದ ವಿಶೇಷಾಧಿಕಾರಿ ರವಿಂದ್ರನಾಥ ವಿ. ಗಬಾಡಿ ಮಾತನಾಡಿದರು. ಅರುಣಕುಮಾರ ಬೇಂದ್ರೆ, ತುಕಾರಾಮ ಮೇತ್ರೆ, ಶಿವರಾಜ ಪಾಟೀಲ ಸೇರಿದಂತೆ ಅನೇಕರು ಇದ್ದರು.

# ವಡಗೇರಾ ನೂತನ ತಾಲ್ಲೂಕಾ ಕೇಂದ್ರದ ಅಭಿವೃದ್ಧಿಗೆ ಸರ್ಕಾರ ಬದ್ಧ : ಸಚಿವ ದರ್ಶನಾಪೂರ




ಯಾದಗಿರಿ:ಸೆ:6:ನೂತನ ತಾಲ್ಲೂಕ, ಕೇಂದ್ರವಾಗಿರುವ ವಡಗೇರಾ, ಹಾಗೂ ವಡಗೇರಾ ಪಟ್ಟಣದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ರಾಜ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರು ಮತ್ತು

ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪ ದರ್ಶನಾಪೂರ ಹೇಳಿದರು.ಕಂದಾಯ ಇಲಾಖೆಯಿಂದ ವಡಗೇರಾ ಪಟ್ಟಣದಲ್ಲಿ 8.60 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಪ್ರಜಾ ಸೌಧ ತಾಲ್ಲೂಕಾ ಆಡಳಿತ ಕೇಂದ್ರ ಕಟ್ಟಡ ನಿರ್ಮಾಣ ಕಾಮಗಾರಿಗೆ ಇಂದು ಅಡಿಗಲ್ಲು ನೆರವೇರಿಸಿ ಅವರು ಮಾತನಾಡಿದರು.ಒಂದು ವರ್ಷದಲ್ಲಿ ಕಟ್ಟಡ ಪೂರ್ಣಗೊಳ್ಳಲಿದ್ದು, ಇಲ್ಲಿಯೇ ಹಲವಾರು ಸರ್ಕಾರಿ ಇಲಾಖೆಗಳ ಕಚೇರಿಗಳು ಆರಂಭಗೊಳ್ಳಲಿವೆ. ಇದರಿಂದ ಗ್ರಾಮೀಣ ಭಾಗದ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ. ನಮ್ಮ ಸರ್ಕಾರ ಈಗಾಗಲೇ ರಾಜ್ಯದಲ್ಲಿ 54 ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಮಂಜೂರು ನೀಡಿದೆ. ಅದರಲ್ಲಿ ಕಲ್ಯಾಣ ಕರ್ನಾಟಕಕ್ಕೆ 16 ಪ್ರಜಾಸೌಧ ತಾಲ್ಲೂಕಾ ಆಡಳಿತ ಕೇಂದ್ರಗಳು ಮಂಜೂರಾಗಿವೆ. ಜಿಲ್ಲೆಯ ಗುರುಮಿಠಕಲ್, ಶಹಾಪೂರ, ಹುಣಸಗಿಯಲ್ಲಿ ಕೂಡ ಕಟ್ಟಡ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಸಂಬಂಧಿಸಿದ ಗುತ್ತಿಗೆದಾರರು ನಿಗದಿತ ಅವಧಿಯೊಳಗೆ ಗುಣಮಟ್ಟದ ಕಾಮಗಾರಿ ಕೈಗೊಳ್ಳಬೇಕೆಂದು ಸೂಚಿಸಿ, ವಡಗೇರಾದಲ್ಲಿ 30 ಬೆಡ್‌ಗಳ ಸರ್ಕಾರಿ ಆಸ್ಪತ್ರೆಯನ್ನು 50 ಬೆಡ್‌ಗಳಾಗಿ ಮೇಲ್ದರ್ಜೆಗೆ ಏರಿಸಲಾಗಿದೆ. ಈಗಾಗಲೇ ಕಲ್ಯಾಣ ಕರ್ನಾಟದಲ್ಲಿ 554 ಕೋ. ರೂ. ವೆಚ್ಚದಲ್ಲಿ ಸರ್ಕಾರ ಆರೋಗ್ಯ ಕ್ಷೇತ್ರ ಅಭಿವೃದ್ಧಿ ಪಡಿಸುತ್ತಿದೆ. ಇದರಿಂದ ಬರುವ ದಿನಗಳಲ್ಲಿ ಜನರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಈಗಾಗಲೇ ಸರ್ಕಾರ 1800 ಕೋಟಿ ವೆಚ್ಚದಲ್ಲಿ ಜಲಧಾರೆ ಯೋಜನೆ ಮೂಲಕ ಜನರಿಗೆ ಶುದ್ಧ ಕುಡಿಯುವ ನೀರನ್ನು ಪೂರೈಸುವ ಯೋಜನೆ ಕಾಮಗಾರಿ ಪ್ರಗತಿಯಲ್ಲಿದೆ. ಮುಖ್ಯಮಂತ್ರಿಗಳು ಶಾಸಕರಿಗೆ ತಲಾ 50 ಕೋಟಿ ರೂಪಾಯಿ ವಿಶೇಷ ಅನುಧಾನ ನೀಡಿದ್ದಾರೆ. ಜನರಿಗೆ ಅಗತ್ಯಕ್ಕನುಗುಣವಾಗಿ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.ಸರ್ಕಾರ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 5 ಸಾವಿರ ಕೋಟಿ ರೂಪಾಯಿ ಅನುಧಾನ ನೀಡಿರುವುದರಿಂದ ಎಲ್ಲಾ ಭಾಗದವರಿಗಾಗಿ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ.ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ಹಣಕಾಸು ಖಾತೆ ನಿರ್ವಹಣೆ ಮಾಡುವ ಮೂಲಕ ವಿಧಾನ ಸಭಾ ಚುನಾವಣೆ ಪೂರ್ವದಲ್ಲಿ ಜನರಿಗೆ ನೀಡಿರುವ ಭರವಸೆಯಂತೆ ಪಂಚ ಗ್ಯಾರಂಟಿಗಳಿಗೆ ಅನುದಾನ ಒದಗಿಸುವ ಜೊತೆಗೆ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಸೂಕ್ತ ಅನುದಾನ ನೀಡಿ ಬದಲಾವಣೆಗೆ ಶ್ರಮಿಸುತ್ತಿದ್ದಾರೆ ಎಂದು ಸರ್ಕಾರದ ಸಾಧನೆಗಳನ್ನು ವಿವರಿಸಿದರು.

ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರ ಮಾತನಾಡಿ ಹಿಂದುಳಿದಿರುವ ವಡಗೇರಾ ತಾಲ್ಲೂಕಿಗೆ ರೈತರಿಗೆ ನೀರಾವರಿ ಸೌಕರ್ಯ ಕಲ್ಪಿಸಲು ನೀರಾವರಿ ಇಲಾಖೆಯಿಂದ 200 ಕೋಟಿ ರೂಪಾಯಿ ಕಾಮಗಾರಿ ಟೆಂಡರ್ ಕರೆಯಲಾಗುತ್ತಿದೆ. ಬರುವ ದಿನಗಳಲ್ಲಿ ರೈತರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.ನಾನು ಈ ತಾಲ್ಲೂಕಿನ ಅಭಿವೃದ್ಧಿ ಬಗ್ಗೆ ಹಲವಾರು ಬಾರಿ ಸದನದ ಒಳಗೆ – ಹೊರಗೆ ಧ್ವನಿ ಎತ್ತುವ ಮೂಲಕ ಹಂತ ಹಂತವಾಗಿ ಎಲ್ಲಾ ಸೌಕರ್ಯಗಳನ್ನು ಜನರಿಗೆ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಈ ವರ್ಷ ಅತೀವೃಷ್ಠಿಯಿಂದ ಈ ತಾಲ್ಲೂಕಿನಲ್ಲಿ ಅತೀ ಹೆಚ್ಚು ಬೆಳೆ ವ್ಯರ್ಥವಾಗಿದೆ. ಜಿಲ್ಲಾಡಳಿತದಿಂದ ಬೆಳೆ ಹಾನಿ ಸಂಪೂರ್ಣ ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕು. ನಾನು ಕೂಡ ಪರಿಹಾರ ಒದಗಿಸಿಕೊಡಲು ಯತ್ನಿಸುತ್ತೇನೆ ಎಂದು ಭರವಸೆ ನೀಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ಗೃಹ ಮಂಡಳಿ ಕಾರ್ಯನಿರ್ವಾಹಕ ಅಭಿಯಂತರ ವಿಜಯಕುಮಾರ ಯೋಜನೆ ಬಗ್ಗೆ ಮಾಹಿತಿ ನೀಡಿದರು.

ವೇದಿಕೆ ಮೇಲೆ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಾಬುರಾವ್ ಚಿಂಚನ್‌ಸೂರ್, ಜಿಲ್ಲಾಧಿಕಾರಿ ಹರ್ಷಲ್ ಭೋಯರ್, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಸಂಗ್ವಾರ, ತಹಸೀಲ್ದಾರ ಮಂಗಳ ಎಮ್., ಗ್ರಾ.ಪಂ. ಅಧ್ಯಕ್ಷ ಸಿದ್ದಪ್ಪ ತಮ್ಮಣ್ಣೋರ್, ಗೃಹಮಂಡಳಿಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಗಿರೀಶ್, ಬಸ್ಸುಗೌಡ ಬಿಳ್ಹಾರ, ಸೇರಿದಂತೆ ಹಲವರು ಉಪಸ್ಥಿತರಿದ್ದರು.ಈ ಕಾರ್ಯಕ್ರಮವನ್ನು ಸಾಹೇಬರೆಡ್ಡಿ ಇಟಗಿ ನಿರೂಪಿಸಿ ವಂದಿಸಿದರು

# ಶಿಕ್ಷಕ ಸಮೂಹದ ಶ್ರಮ ಶ್ಲಾಘನೀಯ: ಎನ್.ಎಸ್.ಬೋಸರಾಜು




ರಾಯಚೂರು ಸೆ 06 : ನಾನಾ ದೇಶಗಳೊಂದಿಗೆ ಸ್ಪರ್ಧೆ ಮಾಡಲು ನಮಗೆ ಶಿಕ್ಷಣವು ತುಂಬಾ ಅವಶ್ಯಕವಾಗಿದೆ. ಈ ದಿಶೆಯಲ್ಲಿ ಯೋಚಿಸಿದಾಗ ನಿರಂತರವಾಗಿ ಮಕ್ಕಳ ಕಲಿಕೆಯಲ್ಲಿ ತೊಡಗುವ ಶಿಕ್ಷಕ ಸಮೂಹದ ಶ್ರಮ ಶ್ಲಾಘನೀಯವಾಗಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತು ಸಭಾ ನಾಯಕರಾದ ಎನ್.ಎಸ್.ಬೋಸರಾಜು ಅವರು ಹೇಳಿದರು.

ಸೆಪ್ಟೆಂಬರ್ 6ರ ಶನಿವಾರ ದಂದು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ 2025–26ನೇ ಸಾಲಿನ ರಾಯಚೂರು ಜಿಲ್ಲಾ ಹಾಗೂ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸರ್ವಪಲ್ಲಿ ರಾಧಕೃಷ್ಣನ್ ಅವರು ಈ ನಾಡು ಕಂಡ ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದಾರೆ. ಅವರ ಆಚಾರ, ವಿಚಾರ ಮತ್ತು ಅವರ ಸಂದೇಶಗಳನ್ನು ಪಾಲಿಸುವ ಮೂಲಕ ಉತ್ತಮವಾದ ಭವಿಷ್ಯ ರೂಪಿಸಬೇಕಿದೆ. ನಾನಾ ಸವಾಲುಗಳು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯ ನಡುವೆಯೂ ಶಿಕ್ಷಕರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿಭಾಯಿಸುತ್ತಿರುವುದು ಪ್ರಶಂಶನೀಯ ಕಾರ್ಯವಾಗಿದೆ ಎಂದರು.ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಸಾವಿರಾರು ಕೋಟಿ ರೂ.ಗಳನ್ನು ಪ್ರತಿವರ್ಷ ನೀಡುತ್ತದೆ. ಈ ಅನುದಾನ ಬಳಸಿಕೊಂಡು ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣ ಮತ್ತು ಆರೋಗ್ಯದ ಅಭಿವೃದ್ಧಿ ಹಾಗೂ ಶಿಕ್ಷಕರ ಕೊರತೆಗಳನ್ನು ನೀಗಿಸಲು, ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿನ ಕೆಲ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯಗಳು ಸೇರಿದಂತೆ ನಾನಾ ಮೂಲಭೂತ ಸೌಕರ್ಯದ ಕೊರತೆ ಇರುವುದರ ಬಗ್ಗೆ ಇತ್ತೀಚೆಗೆ ನಡೆದ ಕ್ಯಾಬಿನೆಟ್ ಸಭೆಯಲ್ಲಿ ಚರ್ಚೆಯಾಗಿದೆ. ಈ ಸಮಸ್ಯೆ ಬಗೆಹರಿಸಲು ರಾಜ್ಯದ ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದರು. ಈ ಭಾಗದಲ್ಲಿ ಶಿಕ್ಷಕರ ನೇಮಕಾತಿ, ಮುಂಬಡ್ತಿ, ವೇತನ ಸೇರಿದಂತೆ ಶಿಕ್ಷಕರ ಮತ್ತು ಸಾರ್ವಜನಿಕರ ಬೇಡಿಕೆಗಳಿಗೆ ರಾಜ್ಯ ಸರ್ಕಾರವು ಹಂತ–ಹಂತವಾಗಿ ಸ್ಪಂದಿಸುತ್ತಿದೆ ಎಂದು ತಿಳಿಸಿದರು.ಈ ವೇಳೆ ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಶಿವರಾಜ ಎಸ್. ಪಾಟೀಲ್ ಅವರು ಮಾತನಾಡಿ, ಶಿಕ್ಷಕರು ಕಣ್ಣಿಗೆ ಕಾಣುವ ದೇವರಿದ್ದಂತೆ ಎಂದು ಅವರ ಕಾರ್ಯಸಾಧನೆಯನ್ನು ಬಣ್ಣಿಸಿದರು.ಶಿಕ್ಷಕರು ದಿನ ನಿತ್ಯ ಒಂದಿಲ್ಲೊಂದು ಕಾರ್ಯದೊತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಕಾರ್ಯಭಾರದ ಹೊರೆಯನ್ನು ಕಡಿಮೆ ಮಾಡಬೇಕು. ಅಂದಾಗ ಮಾತ್ರ ಶಿಕ್ಷಕರಿಂದ ಗುಣಮಟ್ಟದ ಕಲಿಕೆಯನ್ನು ನಿರೀಕ್ಷೆ ಮಾಡಬಹುದಾಗಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಗುರುಭವನ ನಿರ್ಮಾಣಕ್ಕಾಗಿ ಈಗಾಗಲೇ ಅನುದಾನ ಮೀಸಲಿರಿಸಲಾಗಿದೆ.ಜಾಗದ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ತಿಳಿಸಿದರು.ಸಾಹಿತಿ ರಮೇಶಬಾಬು ಯಾಳಗಿ ಅವರು ಉಪನ್ಯಾಸ ನೀಡಿ, ಗುರು ಇಲ್ಲದೆ ಗುರಿ ತಲುಪುವುದು ಬಹಳ ಕಷ್ಟ. ಭರವಸೆಯನ್ನು ಹೆಚ್ಚಿಸುವ, ಕನಸನ್ನು ಸಾಕಾರಗೊಳಿಸುವ, ಕಲಿಕಾ ಶಕ್ತಿಯನ್ನು ಹೆಚ್ಚಿಸುವ ಸೂತ್ರಧಾರನೇ ಉತ್ತಮ ಶಿಕ್ಷಕ. ದೇಶದ ಪ್ರಗತಿಯಲ್ಲಿ ಶಿಕ್ಷಣಕ್ಕೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಶಿಕ್ಷಕರಿಗೂ ಇದೆ. ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಶಿಕ್ಷಕರು ಸರಿಯಾಗಿ ಅರಿತು ಬೋಧನೆ ಇತರೆ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆಯ ಕಾರ್ಯರೂಪಕ್ಕೆ ತರುವಲ್ಲಿ ಪ್ರಯತ್ನಿಸಬೇಕು ಎಂದರು.

ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ: ಶಾಲಾ ಶಿಕ್ಷಣ ಇಲಾಖೆಯಿಂದ 2025–26ನೇ ಸಾಲಿನ ರಾಯಚೂರು ಜಿಲ್ಲಾ ಹಾಗೂ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಇದೆ ವೇಳೆ ವಿವಿಧ ಶಾಲೆಗಳ ಶಿಕ್ಷಕರಿಗೆ ಪ್ರದಾನ ಮಾಡಲಾಯಿತು.ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಶಾಲಾ ಶಿಕ್ಷಣ ಇಲಾಖೆಯ ಆಡಳಿತ ವಿಭಾಗದ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ, ರಾಯಚೂರು ಒಕ್ಕುಲುತನ ಹುಟ್ಟುವಳಿ ಮಾರಾಟ ಮತ್ತು ಸಹಕಾರ ಸಂಘದ ಅಧ್ಯಕ್ಷರಾದ ಜಯಂತರಾವ್ ಪತಂಗೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಚನ್ನಬಸವ, ಮುಖಂಡರಾದ ಶಿವಮೂರ್ತಿ, ರಾಯಚೂರು ಕ್ಷೇತ್ರ ಶಿಕ್ಷಣಾಧಿಕಾರಿ ಈರಣ್ಣ ಕೊಸಗಿ ಸೇರಿದಂತೆ ವಿವಿಧ ಶಾಲೆಗಳ ಮುಖ್ಯಗುರುಗಳು, ಶಿಕ್ಷಕರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಇದ್ದರು.

# ಹಿಂದುಳಿದ ವರ್ಗಗಳ ಆಯೋಗದಿಂದ ಮೊಬೈಲ್ ಮೂಲಕ ಸಮೀಕ್ಷೆ : ಪ್ರತಿಯೊಬ್ಬರು ಗಣತಿದಾರರಿಗೆ ಮಾಹಿತಿ ನೀಡಿ: ಪ್ರಿಯಾಂಕ್ ಖರ್ಗೆ



ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ರಾಜ್ಯದ ಎಲ್ಲಾ ಸಾರ್ವಜನಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕೈಗೊಳ್ಳಲಾಗುತ್ತಿದ್ದು, ಕಲಬುರಗಿ ಜಿಲ್ಲೆಯಲ್ಲಿ ಜೆಸ್ಕಾಂ ವತಿಯಿಂದ ಪ್ರತಿ ಮನೆಗೂ ಯು. ಹೆಚ್.ಐ.ಡಿ (UHID) ನಂಬರ್ ಜನರೇಟ್ ಮಾಡಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ಕಲಬುರ್ಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಸಂಬಂಧದಲ್ಲಿ ಪ್ರತಿ ಮನೆಗೂ ಸರ್ಕಾರದಿಂದ ನಿಯೋಜಿತವಾಗುವ ಗಣತಿದಾರರು ಮುಂದಿನ ದಿನಗಳಲ್ಲಿ ಮೊಬೈಲ್ ಆಪ್ ಮುಖೇನ ಸಮೀಕ್ಷೆ ಕೈಗೊಳ್ಳಲಿದ್ದು, ಆ ಸಮಯದಲ್ಲಿ ಸಾರ್ವಜನಿಕರು ಸೂಕ್ತ ಮಾಹಿತಿ ಒದಗಿಸಿ ಸಮೀಕ್ಷೆಯನ್ನು ಯಶಸ್ವಿಗೊಳಿಸಲು ಹಾಗೂ ಆ ಮೂಲಕ ರಾಜ್ಯದ ಅಭಿವೃದ್ಧಿಗೆ ಹಾಗೂ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ಬುನಾದಿ ಹಾಕಲು ಮುಕ್ತ ಮನಸ್ಸಿನಿಂದ ಸಹಕಾರ ನೀಡಬೇಕೆಂದು ಸಚಿವ ಪ್ರಿಯಾಂಕ್ ಖರ್ಗೆ ಕೋರಿದ್ದಾರೆ.

ಈ ಸಮೀಕ್ಷೆಯು ರಾಜ್ಯದ ಎಲ್ಲಾ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಅಧ್ಯಯನ ನಡೆಸಿ ನೀತಿ ನಿರೂಪಣೆಗೆ ಆಧಾರವಾಗಿರುತ್ತದೆ. ಹೀಗಾಗಿ ಸಮೀಕ್ಷೆಯನ್ನು ಸಂಪೂರ್ಣ ಯಶಸ್ವಿಗೊಳಿಸುವುದು ಪ್ರತಿ ನಾಗರಿಕರ ಜವಾಬ್ದಾರಿಯಾಗಿದೆ ಎಂದು ಸಚಿವರು ಹೇಳಿದ್ದಾರೆ.ಸೆಪ್ಟೆಂಬರ್ 22ರಿಂದ ಪ್ರಾರಂಭವಾಗಿ ಅಕ್ಟೋಬರ್ 7 ರವರೆಗೆ ನಡೆಯುವ ಸಮೀಕ್ಷೆಯಲ್ಲಿ ಸುಮಾರು 60 ಪ್ರಶ್ನೆಗಳಿದ್ದು, ಸಮೀಕ್ಷೆ ಕಾರ್ಯವನ್ನು ಪಡಿತರ ಚೀಟಿ ಮತ್ತು ಆಧಾರ್ ಸಂಖ್ಯೆಯ ಆಧಾರದಲ್ಲಿ ಮಾಡುವುದರಿಂದ, ಸಮೀಕ್ಷಾದಾರರು ಮನೆಗೆ ಭೇಟಿ ನೀಡಿದಾಗ ಪಡಿತರ ಚೀಟಿ, ಆಧಾರ್ ಕಾರ್ಡ್ ಅಥವಾ ಆಧಾರ್ ಕಾರ್ಡಿನ ಸಂಖ್ಯೆ, ವಿಕಲಚೇತನರಾಗಿದ್ದರೆ ಗUಆ ಕಾರ್ಡ್ ಅಥವಾ ಅಂಗವಿಕಲರ ಪ್ರಮಾಣಪತ್ರ, ಮತದಾರರ ಗುರುತಿನ ಚೀಟಿ ಸಿದ್ದ ಮಾಡಿ ಇಟ್ಟುಕೊಂಡಿದ್ದರೆ ಸಮೀಕ್ಷೆ ಸುಲಭವಾಗುತ್ತದೆ ಮತ್ತು ವೇಗವಾಗುತ್ತದೆ ಎಂಬ ಮಾಹಿತಿಯನ್ನು ಸಚಿವರು ನೀಡಿದ್ದಾರೆ.

ಕುಟುಂಬದ ಎಲ್ಲಾ ಸದಸ್ಯರೂ ತಮ್ಮ ಆಧಾರ್ ಕಾರ್ಡ್ ಗಳೊಂದಿಗೆ ಮೊಬೈಲ್ ನಂಬರ್ ಲಿಂಕ್ ಆಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.ಸಮೀಕ್ಷೆ ಸಮಯದಲ್ಲಿ ಇಕೆವೈಸಿ ಮಾಡುವಾಗ ಆ ಸದಸ್ಯರ ಆಧಾರ್ ಕಾರ್ಡ್ ಗೆ ಲಿಂಕ್ ಆಗಿರುವ ಮೊಬೈಲ್ ನಂಬರಿಗೆ ಬರುವ ಒಟಿಪಿಯನ್ನು ತಿಳಿಸಬೇಕಾಗುತ್ತದೆ.ಆಧಾರ್ ಕಾರ್ಡ್‌ಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ ಚಾಲ್ತಿಯಲ್ಲಿ ಇಲ್ಲದಿದ್ದಲ್ಲಿ ಆಧಾರ್ ನೋಂದಣಿ ಕೇಂದ್ರಕ್ಕೆ ತೆರಳಿ ಹೊಸ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಿಸಿಕೊಳ್ಳಬೇಕು.

ಸಮೀಕ್ಷೆಯ ಪ್ರಶ್ನಾವಳಿಯಲ್ಲಿ ಕೋರಿರುವ ವಿದ್ಯಾರ್ಹತೆ, ಕೌಶಲ್ಯ ತರಬೇತಿಯ ಅಗತ್ಯತೆ, ಆದಾಯ, ಕುಟುಂಬದ ಸ್ಥಿರ ಮತ್ತು ಚರಾಸ್ತಿ ವಿವರಗಳು, ಧರ್ಮ, ಜಾತಿ, ಉಪಜಾತಿ ಹಾಗೂ ಕುಲಕಸುಬು ಮುಂತಾದ ಎಲ್ಲಾ ವಿವರಗಳ ಮಾಹಿತಿಯನ್ನು ನೀಡಬೇಕು ಎಂದು ಸಚಿವರು ಮನವಿ ಮಾಡಿದ್ದಾರೆ.

ಸಮೀಕ್ಷೆಯ ಪ್ರಶ್ನಾವಳಿಗಳ ಬಗ್ಗೆ ಅರಿವು ಮೂಡಿಸಲು ಪದವಿ ವಿಧ್ಯಾರ್ಥಿಗಳ ಮೂಲಕ ಸಮೀಕ್ಷಾ ಪೂರ್ವ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿರುವ ಸಚಿವರು ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಸಹಾಯವಾಣಿ ಸಂಖ್ಯೆ 8050770004ಗೆ ಕರೆ ಮಾಡಿ ಅಥವಾ Website ವಿಳಾಸ https://kscbc.karnataka.gov.in ರಲ್ಲಿ ಮಾಹಿತಿ ಪಡೆಯಬಹುದು ಎಂದಿದ್ದಾರೆ.


**ಪುರಸಭೆ ಕಾರ್ಯಾಲಯ ಚಿಟಗುಪ್ಪಾ ಜಿಲ್ಲೆ ಬೀದರ**

ಸಂ: ಪುಸಚಿ/ಕಾಮಗಾರಿ/ಸಿಆರ್– /2025–26 /332 ದಿನಾಂಕ: 04.09.2025

**ಟೆಂಡರ್ ಪ್ರಕಟಣೆ**

1) ಕಾಮಗಾರಿ / ಸರಕು / ಸೇವೆಯ ವಿವರ(DMA/2025-26/OW/WORK_INDENT47313/Call-2)(DMA/2024-25/SE4422/CALL-4, 2) ಕಾಮಗಾರಿ/ಸರಕು/ಸೇವೆಯ ಅಂದಾಜು ಮೊತ್ತ KPPP ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ KPPP ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ KPPP ನಲ್ಲಿ ನಮೂದಿಸಿದಂತೆ, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು 22.09.2025 4:30 PM, 6) ಟೆಂಡರ ತೆರೆಯುವ ದಿನಾಂಕ: 23.09.2025 5:00 PM, 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಮುಖ್ಯಾಧಿಕಾರಿಗಳು ,ಪುರಸಭೆ ಚಿಟಗುಪ್ಪ 08483–277536, Email: itstaff _ulb _ chittguppa @ yahoo .com, 8) ಅಂತರಜಾಲತಾಣದ ವಿಳಾಸ www.kppp.karnataka.gov.in

ಸಹಿ/– ಮುಖ್ಯಾಧಿಕಾರಿ
ಪುರಸಭೆ ಚಿಟಗುಪ್ಪಾ

ವಾ.ಸಾ.ಸಂ.ಇ/ಬೀದರ/163/ಕೆ.ಎಸ್.ಎಂ.ಸಿ.&ಎ/2025–26


**Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330. Editor: Ramesh Reddy, Office Ph. No: +91 9449732000.**